ಮಂಡಲಿಯವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು: ಅನುಬಂಧ 1 ವಿಧೇಯಕವನ್ನು ಮಂಡಿಸಲಾಗಿದೆ.

7. ನಿಯಮ 69ರ ಮೇರೆಗೆ

ವಿಷಯ: ನಾಗಪ್ಪನವರ ಅಪಹರಣ ಮತ್ತು ಅವರ ದುರಂತ ಸಾವಿನ ಬಗ್ಗೆ ಚರ್ಚೆ (ಮುಂದು).

ಉಪಾಧ್ಯಕ್ಷರು: ಈಗ ಮಾನ್ಯ ಸೋಮಶೇಖರ್‌ರವರು ಕಂಟಿನ್ಯೂ ಮಾಡಬೇಕು, ಮ್ಯಾಕ್ಸಿಮಮ್ ಹದಿನೈದು ನಿಮಿಷದಲ್ಲಿ ಮುಗಿಸಬೇಕು ಈಗಾಗಲೇ ಒಂದು ಗಂಟೆ ಐದು ನಿಮಿಷ ಮಾತನಾಡಿದ್ದಿರಿ.

+ಶ್ರೀ ಬಿ.ಸೋಮಶೇಖರ್:- ಮಾನ್ಯ ಉಪಾಧ್ಯಕ್ಷರೆ, ಈಗ ನಾಗಪ್ಪನವರ ಅಪಹರಣಕ್ಕೆ ಪ್ರಮುಖವಾಗಿ ಎರಡು ಕಾರಣಗಳು, ಒಂದು ರಾಜ್‌ಕುಮಾರ್‌ರವರ ಅಪಹರಣವಾದ ಕಾಲದಲ್ಲಿ ಸರ್ಕಾರಕ್ಕೂ ಮತ್ತು ವೀರಪ್ಪನ್‌ರವರು ಇವರಿಬ್ಬರ ಮಧ್ಯೆ ಕೆಲವು ಒಡಂಬಡಿಕೆ ಏನಾಗಿದೆ ಆ ಒಡಂಬಡಿಕೆಯ ಆಧಾರದ ಮೇಲೆ ಷರತ್ತುಗಳನ್ನು ಪೂರೈಸಿಲ್ಲ ಆದ್ದರಿಂದ ವೀರಪ್ಪನ್ ಮಣಿಯವರನ್ನು ಬಿಡುಗಡೆ ಮಾಡಬೇಕು, ಅವರ ಜೊತೆ ಮಾತನಾಡಿದ ನಂತರ ನಾನು ನಾಗಪ್ಪನವರ ಬಿಡುಗಡೆಯ ಬಗ್ಗೆ ಹೇಳುತ್ತೇನೆ ಎಂದು ಹೇಳಿದ್ದಾನೆ. ಮಣಿಯ ಮೇಲೆ ನಮ್ಮ ರಾಜ್ಯದ ಪೊಲೀಸ್‌ನವರು ಏನು ಕೇಸ್‌ಗಳನ್ನು ಹಾಕಿದ್ದಾರೆ? ಯಾವಾಗ ಹಾಕಿದ್ದಾರೆ? ಏತಕ್ಕೆ ಹಾಕಿದ್ದಾರೆ? ಅದರ ಬಗ್ಗೆ ನೋಡುವುದಾದರೆ, ಮಣಿಯ ಮೇಲೆ ಏನು ಶಸಾಸ್ತ್ರಗಳ ಸರಬರಾಜು ಮಾಡಿದ್ದಾರೆ ವೀರಪ್ಪನ್‌ಗೆ ಎಂದು ಹೇಳಿ ಏನು ಕೇಸ್ ಹಾಕಿದ್ದಾರೆ ಅದು ಮತ್ತು ಇನ್ನೂ ನಾಲ್ಕು ಕೇಸ್‌ಗಳು, ಈ ನಾಲ್ಕು ಕೇಸ್‌ಗಳಲ್ಲಿ ನ್ಯಾಯಾಲಯ ಬೇಲ್ ಕೊಟ್ಟಿದೆ ಇನ್ನು ಎರಡನೇಯ ಕೇಸ್‌ನಲ್ಲಿ ಮಣಿ ಶಸ್ತ್ರಾಸ್ತ್ರಗಳನ್ನು ಏಕೆ ಸರಬರಾಜು ಮಾಡಿದರು? ಅಂದರೆ ಸೇಲಂ ನಲ್ಲಿದ್ದಂಥ ಮಣಿ ಸುಮಾರು 250, 300 ಕಿಲೋ ಮೀಟರ್ ದೂರ ಮೈಸೂರು - ಮತ್ತು ಚಾಮರಾಜನಗರ ಈ ಕಡೆ ಬಂದು ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿದ್ದಾನೆ ಎನ್ನುವುದಾದರೆ, ಈ ರಾಜ್ಯಕ್ಕೆ ಶಸ್ತ್ರಾಸ್ತ್ರಗಳು ಹೇಗೆ ಬಂತು? ಮತ್ತು ಅದಕ್ಕೆ ಯಾರು ಅವಕಾಶ ಕೊಟ್ಟರು? ಪೋಲೀಸ್‌ನವರು ಏನು ಮಾಡುತ್ತಿದ್ದರು?ಮೊದಲು ಪೋಲೀಸ್‌ನವರ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಅವರ ವೈಫಲ್ಯಕ್ಕೆ ಮಣಿಯ ಮೇಲೆ ಕೇಸ್ ಹಾಕಿ, ಅವರು ಹಿಂದೆ ಕೊಟ್ಟಂಥ ಹಣವನ್ನು ವಸೂಲಿ ಮಾಡುವಂಥ ಕೆಲಸ ನಡೆದಿದಯೇ ಹೊರತು ನಿಜವಾಗಿಲೂ ನಾಗಪ್ಪನವರ ಬಿಡುಗಡೆಯ ಕೆಲಸ ನಡೆದಿಲ್ಲವೆಂದು ನಾನು ಒತ್ತಿ ಹೇಳುತ್ತಾ, ಸರ್ಕಾರ 95 ದಿನಗಳ ನಂತರ ಮಣಿ ಕೇಸ್‌ಗಳನ್ನು ಹಿಂತೆಗೆದುಕೊಳ್ಳಬೇಕೆಂದು ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡಿತು. ಆ ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡ ಮೇಲೆಯೂ ಅಂದರೆ ಕಾರ್ಯಾಚರಣೆಯನ್ನು ನಿಲ್ಲಿಸಬೇಕು, ಸಂಧಾನದ ಮುಖಾಂತರ ನಾಗಪ್ಪನವರವನ್ನು ಬಿಡುಗಡೆ ಮಾಡಬೇಕು, ಅದಕೋಸ್ಕರ ಮಣಿಯವರನ್ನು ಬಿಡುಗಡೆ ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದರು. ಒಂದು ಕಡೆ ಕ್ಯಾಬಿನೆಟ್ ತೀರ್ಮಾನ ಮಾಡಿದ ಮೇಲೆಯೂ ಅಲ್ಲಿ ಕಾಡಿನಲ್ಲಿ ಕಾರ್ಯಾಚರಣೆ ನಿಲ್ಲಲಿಲ್ಲ.

ಕಾರ್ಯಚರಣೆ ನಿಲ್ಲಲಿಲ್ಲ ಎನ್ನುವುದಕ್ಕೆ ಒಂದು ಉದಾಹರಣೆ ನಮ್ಮ ಸಂಪತ್ ಕುಮಾರ್ ಫಾರೆಸ್ಟ್ ಗಾರ್ಡ್ ಏನು ಇದ್ದಾರೆ ಅವರು, ಅಲ್ಲಿ ವೀರಪ್ಪನ್‌ನನ್ನು ನೋಡಿದ್ದಾನೆ, ವೀರಪ್ಪನ್ ಚಟುವಟಿಕೆಗಳನ್ನು ತಿಳಿದು ಮಾಹಿತಿ ಕೊಡುವ ಸರ್ಕಾರಿ ಅಧಿಕಾರಿ, 6ನೇ ಕ್ಯಾಸೆಟ್‌ನಲ್ಲಿ ವೀರಪ್ಪನ್ ಏನು ಹೇಳಿದ್ದಾನೆ ಅಂದರೆ ಈ ಸಂಪತ್‌ಕುಮಾರ್ ನನ್ನ ಚಲನವಲನಗಳನ್ನು ತಿಳಿದುಕೊಂಡು ಮಾಹಿತಿಯನ್ನು ಕರ್ನಾಟಕ ಎಸ್‌ಟಿಎಫ್ ರವರಿಗೆ ಮತ್ತು ಬೇರೆಯವರಿಗೆ ಕೊಡುತ್ತಿದ್ದಾನೆ, ಮೊದಲು ಅವನನ್ನು ಹಿಂತೆಗೆದುಕೊಳ್ಳದಿದ್ದರೆ ನಾಗಪ್ಪನವರ ಪರಿಣಾಮ ಬಹಳ ಕೆಡುತ್ತದೆ ಅವರನ್ನು ನಾನು ಕೊಲೆ ಮಾಡಬೇಕಾಗುತ್ತದೆ, ತಕ್ಷಣ ಅವರನ್ನು ಹಿಂತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಾನೆ. ವಾರ್ನ್ ಮಾಡಿದ್ದಾನೆ. ಅಂದರೆ ಈ ಸಂಪತ್ ಕುಮಾರ್ ವೀರಪ್ಪನ್‌ನ ಕೆಂಗಣ್ಣಿಗೆ ಗುರಿಯಾದ ಮೇಲೂ ಸರ್ಕಾರ ಅವನ ಮೇಲೆ ಏನು ಕ್ರಮ ತೆಗೆದುಕೊಂಡಿದೆ? ಅವನನ್ನು ವರ್ಗಾ ಮಾಡಿದಿಯೇ?ಅದಕ್ಕೆ ಯಾರು ಕಾರಣ? ಅದನ್ನು ವಿಚಾರಣೆ ಮಾಡಬೇಕು. ಆದ್ದರಿಂದಲೇ ಇವತ್ತು ವೀರಪ್ಪನ್‌ಗೆ ಕೋಪ ಬಂದಿರತಕ್ಕಂಥದ್ದು. ಮತ್ತೆ ಈ ಕೋರ್ಟ್‌ನಲ್ಲಿ ಬಿಡುಗಡೆ ಮಾಡುವುದಕ್ಕೆ ಅರ್ಜಿ ಹಾಕಿದ್ದರೂ ಸಹ ನಮ್ಮ ಪಬ್ಲಿಕ್ ಪ್ರಾಸಿಕ್ಯೂಟರ್ ನಾಗರಾಜ್ ಎಂಬುವವರು ಎರಡನೇಯ ಅಬ್ಜೆಕ್ಷನ್ ಹಾಕಿ ಬಿಡುಗಡೆ ಮಾಡಬಾರದು ಎಂದು ಹೇಳಿದ್ದಾರೆ. ಅಂದರೆ ಸರ್ಕಾರ ಒಂದು ಕಡೆ ತೀರ್ಮಾನ ಮಾಡಿದೆ, ಪೋಲೀಸ್ ಅಧಿಕಾರಿಗಳು ತಮ್ಮದೇ ಆದ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಇದು ಏನು ತೋರಿಸುತ್ತದೆ? ಪೋಲೀಸ್ ಇಲಾಖೆ ಕರ್ನಾಟಕ ಸರ್ಕಾರದ ಕೆಳಗಡೆ ಕೆಲಸ ಮಾಡುತ್ತಿದೆಯೇ ಅಥವಾ ಬೇರೆ ಯಾವುದೋ ಒಂದು ರಾಜ್ಯದ ಆದೇಶದ ಕೆಳಗಡೆ ಕೆಲಸ ಮಾಡುತ್ತಿದಿಯೇ ಅಥವಾ ಇನ್ನ್ಯಾಯಾವುದೋ Extra Constitutional Authority ಎಂದು ನಾವೇನು ಕರೆಯುತ್ತೇವೆ ಅವರ ಒಂದು ಆದೇಶದ ಮೇಲೆ ಕೆಲಸ ಮಾಡುತ್ತಿದೆಯೇ ಎಂಬುದನ್ನು ನಾವು ಅನುಮಾನದಿಂದ ನೋಡಬೇಕಾಗಿದೆ. ಇದಕ್ಕೆ ಒಂದು ಉದಾಹರಣೆ, ನಾಗಪ್ಪನವರ ಅಪಹರಣವಾದ ತಕ್ಷಣ, ತಮಿಳುನಾಡು ಸರ್ಕಾರ, ತಮಿಳುನಾಡು ಮುಖ್ಯಮಂತ್ರಿಗಳು ಈ ಕರ್ನಾಟಕದ ಎಸ್‌ಟಿಎಫ್ ಮುಖ್ಯಸ್ಥರನ್ನು ವರ್ಗಾವಣೆ ಮಾಡಿದ ಕಾರಣ ನಾಗಪ್ಪನವರ ಅಪಹರಣವಾಗಿದೆ ಎನ್ನುವ ಒಂದು ಹೇಳಿಕೆಯನ್ನು ಕೊಡುತ್ತಾರೆ. ಇದರ ಅರ್ಥ ತಮಿಳುನಾಡು ಮುಖ್ಯಮಂತ್ರಿಗೂ ನಮ್ಮ ರಾಜ್ಯದ ಎಸ್‌ಟಿಎಫ್ ಮುಖ್ಯಸ್ಥರ ನೇಮಕಾತಿಗೂ ಸಂಬಂಧವೇನು? ಇದು ಏನು ತೋರಿಸುತ್ತದೆ? ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಕ್ಲಾರಿಫೈ ಮಾಡಿದ್ದಾರೆ, ಇದು ನಮ್ಮ ಮನೆಯ ಕೆಲಸ ನಾನು ಯಾರನ್ನು ಬೇಕಾದರೂ ಪೋಸ್ಟ್ ಮಾಡಬಹುದು, ಬಿಡುಬಹುದು ಅವರು ಯಾರು ಕೇಳುವುದಕ್ಕೆ ಎಂದು ಹೇಳಿದ್ದಾರೆ. ಆದರೆ ಇದನ್ನು ವಿಚಾರಣೆ ಮಾಡಬೇಕಾಗುತ್ತದೆ ಎತಕೋಸ್ಕರವಾಗಿ ತಮಿಳುನಾಡಿನ ಮುಖ್ಯಮಂತ್ರಿಯವರು ಆ ರೀತಿ ಹೇಳಿದರು? ಅವರಿಗೂ ಹಿಂದೆ ಇದ್ದಂಥ ಪೊಲೀಸ್ ಮುಖ್ಯಸ್ಥರಿಗೆ ಏನು ಸಂಬಂಧ?ಯಾವ ನಿರ್ದೇಶನದ ಮೇಲೆ ಅವರು ಕೆಲಸ ಮಾಡುತ್ತಿದ್ದಾರೆ? ಸರ್ಕಾರದ ಆದೇಶ ಇಲ್ಲವೆಂದರೆ ಬೇರೆ ಇನ್ನ್ಯಾಯಾವುದೋ ಕಾಣದ ಕೈಗಳ ಆದೇಶದ ಪ್ರಕಾರ ಕೆಲಸ ಮಾಡುತ್ತಿದ್ದೆಯೇ? ಅದನ್ನು ಈ ಸರ್ಕಾರ ವಿಚಾರಣೆ ಮಾಡಬೇಕಾಗುತ್ತದೆ. ಮತ್ತೊಂದು ಕಡೆ ಹೇಳಿದ್ದಾರೆ, ತಮಿಳುನಾಡು ಎಸ್‌ಟಿಎಫ್ ನವರು, ಕರ್ನಾಟಕ ಎಸ್‌ಟಿಎಫ್ ಮತ್ತು ತಮಿಳುನಾಡು ಮುಖ್ಯಮಂತ್ರಿಗಳು

ಮಣಿಯನ್ನು ಸಂಧಾನಕಾರರನ್ನಾಗಿ ಕಳುಹಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಅಂದರೆ ಎಷ್ಟರಮಟ್ಟಿಗೆ ನಾಗಪ್ಪನವರ ಬಿಡುಗಡೆಗೆ ಪ್ರಾಮಾಣಿಕ ಪ್ರಯತ್ನ ಮಾಡಿದೆ ಈ ಸರ್ಕಾರ, ಅದಕ್ಕೆ ತಕ್ಕಂತೆ ಅಧಿಕಾರಿಗಳು ಸ್ಪಂದಿಸಿದ್ದಾರೆ, ಇದಕ್ಕೆ ಕಾರಣವೇನು? ಅಧಿಕಾರಿಗಳು ಏತಕ್ಕೆ ಸ್ಪಂದಿಸಿಲ್ಲ, ಇದರ ಬಗ್ಗೆ ಸಂಪೂರ್ಣವಾದಂಥ ವಿಚಾರಣೆ ಆಗಬೇಕಾಗುತ್ತದೆ. ಇದಾದ ನಂತರ ನಾಗಪ್ಪನವರ ಹತ್ಯೆ 5ನೇ ತಾರೀಖು ನಡೆಯಿತು, ಈ 4ನೇ ತಾರೀಖಿನವರಗೆ ನಾಗಪ್ಪನವರು ಡೈರಿ ಬರೆದಿದ್ದಾರೆ, ಆ ಡೈರಿಯಲ್ಲಿ, ನಮ್ಮ ಮಹಾದೇವ್ ಪ್ರಸಾದ್‌ರವರು ಹಾಗೂ ಬೇರೆಯವರು ಎಲ್ಲವನ್ನೂ ಹೇಳಿದ್ದಾರೆ. ಒಂದು ಕಡೆ ತೆಳ್ಳೂರು ಬಸವರಾಜು ಬಂದಿದ್ದರು, ಮಹಾದೇವ್‌ಸ್ವಾಮಿ ಬಂದಿದ್ದರು, 20 ಕೋಟಿ ರೂಪಾಯಿ, ಈ ರೀತಿ ಎಲ್ಲಾ ಬರೆದಿದ್ದಾರೆ. ಈಗ ನಾವು ಕೇಳತಕ್ಕಂಥದ್ದು ತೆಳ್ಳೂರು ಬಸವರಾಜು, ಸುಮಾರು ಅವರ ಹತ್ಯೆ ಆಗುವುದಕ್ಕೆ ಎಂಟು ದಿನ ಮುಂಚಿತವಾಗಿ ಕಾಡಿಗೆ ಹೋಗಿರುವ ಕಾರಣವೇನು? ಅವರನ್ನು ಯಾರು ಕಳುಹಿಸಿದ್ದರು? ಈ ಬಸವರಾಜುಗೂ ಅಲ್ಲಿರತಕ್ಕಂಥ ಶಾಸಕರಿಗೂ ಏನು ಸಂಬಂಧ? ಉದ್ದೇಶ ಏನು ಎನ್ನುವುದನ್ನು ಬಯಲು ಮಾಡಬೇಕಾಗುತ್ತದೆ. ಅದೇರೀತಿ ಪೊನ್ನಾಚಿ ಮಹಾದೇವಸ್ವಾಮಿ ಅವರು ಪರ್ಮಿಷನ್ ತೆಗೆದುಕೊಂಡೇ ಹೋಗಿದ್ದಾರೆ, ಮುಖ್ಯಮಂತ್ರಿಗಳವರಿಗೆ ಹಾಗೂ ಗೃಹ ಸಚಿವರಿಗೆ ತಿಳಿಸಿದ್ದಾರೆ. ಅವರ ಅನುಮತಿಯನ್ನು ಪಡೆದು ಹೋಗಿರುತ್ತಾರೆ. ಅವರು ಏನು ಮಾತುಕತೆ ನಡೆದಿದೆ ಅದನ್ನೂ ಸಹ ಸದನಕ್ಕೆ ತಿಳಿಸಿ. ಮತ್ತು 6ನೇ ಕ್ಯಾಸೆಟ್‌ನಲ್ಲಿ ವೀರಪ್ಪನ್ ಏನು ಹೇಳಿದ್ದಾನೆ ಅದನ್ನೂ ಸಹ ಗಮನಕ್ಕೆ ತರಬೇಕಾಗುತ್ತದೆ. ಇದಾದ ಮೇಲೆ ಒಂದು ಪ್ರೈವೇಟ್ ಟಿವಿ ಚಾನಲ್‌ಗೆ ಸಚಿವರಾದ ರಾಜುಗೌಡರವರು ಒಂದು ಸಂದರ್ಶನ ಕೊಟ್ಟಿದ್ದಾರೆ, ಏನು ಸಂದರ್ಶನ ಕೊಟ್ಟಿದ್ದಾರೆ, ಅದು ಸುಮಾರು ನವೆಂಬರ್ 28ಕ್ಕೋ ಅಥವಾ 29ಕ್ಕೋ ಎಂದು ಕಾಣಿಸುತ್ತದೆ. ಆ ಸಂದರ್ಶನದಲ್ಲಿ ಎಲ್ಲಾ ಸರಿಯಾಗಿ ನಡೆಯುತ್ತದೆ ಡಿಸೆಂಬರ್ 5ನೇ ತಾರೀಖು 6 ನೇ ತಾರೀಖು ನಾಗಪ್ಪನವರ ವಿಚಾರ ಇತ್ಯರ್ಥವಾಗುತ್ತದೆ ಎಂದು ಹೇಳಿದ್ದಾರೆ. ಯಾವ ರೀತಿ ಇತ್ಯರ್ಥವಾಗುತ್ತದೆ ಏನು ಎನ್ನುವುದು ಅದು ಒಂಭತ್ತನೇ ತಾರೀಖು ಗೊತ್ತಾಗಿದೆ. ಅವರ ಈ ಹೇಳಿಕೆಯ ಬಗ್ಗೆ ವಿಚಾರಣೆ ನಡೆಸಬೇಕಾಗುತ್ತದೆ. ನಾವು ಏನು ಹೇಳಿಕೆಯನ್ನು ಕೊಟ್ಟಿರುವುದನ್ನು ಇಲ್ಲವೆಂದು ಹೇಳಬಹುದು, ಆದರೆ ಪತ್ರಿಕೆಗಳಲ್ಲಿ ಇರುತ್ತದೆ. ಟಿವಿ ಯಲ್ಲಿ ಇರುತ್ತದೆ, ಏನು ಹೇಳಿಕೆ ಕೊಟ್ಟಿದ್ದಾರೆ ಅದರ ಬಗ್ಗೆ ವಿಚಾರಣೆ ಮಾಡಿದರೆ ಒಳ್ಳೆಯದು. ಮತ್ತೆ 4ನೇ ತಾರೀಖು, ಮೆಟ್ಟೂರಿನಲ್ಲಿ ತಮಿಳುನಾಡು ಎಸ್‌ಟಿಎಫ್ ನವರು ಹಾಗೂ ಕರ್ನಾಟಕ ಎಸ್‌ಟಿಎಫ್ ನವರು ಮೀಟಿಂಗ್ ಮಾಡಿದ್ದಾರೆ. ಆ ಮೆಟ್ಟೂರು ಪ್ರವಾಸಿ ಮಂದಿರದಲ್ಲಿ, ಆ ಮೀಟಿಂಗ್‌ನಲ್ಲಿ ಏನು ಮಾತುಕತೆಯಾಗಿದೆ. ಏನು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ, ಅದರ ಬಗ್ಗೆ ಸರ್ಕಾರ ಈ ಸಭೆಯ ಗಮನಕ್ಕೆ ತರಬೇಕಾಗುತ್ತದೆ ಅಂದರೆ 4ನೇ ತಾರೀಖು ಮೀಟಿಂಗ್ ಸೇರಿ, ಅದೇ 5ನೇ ತಾರೀಖು ಹತ್ಯೆಯಾಯಿತು. ಮತ್ತು ಇದರ ಜೊತೆಗೆ ರಾಮಾಪುರ ಪೋಲೀಸ್ ಸ್ಟೇಶನ್‌ನಲ್ಲಿ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಚೆನ್ನೈಗೆ ಒಂದು ಕಾಲ್ ಮಾಡಿದ್ದಾನೆ, ಯಾವತ್ತು 5ನೇ ತಾರೀಖು, ಅಂದರೆ ನಮಗೆ ಏನು ಅನುಮಾನ ಬರುತ್ತದೆಂದು ಹೇಳಿದರೆ, 5ನೇ ತಾರೀಖು ನಾಗಪ್ಪನವರ ಹತ್ಯೆಯಾದ ಸುದ್ದಿ ಆ ರಾಮಾಪುರ ಪೋಲೀಸ್ ಸ್ಟೇಶನ್‌ದಲ್ಲಿದ್ದಂಥ ಒಬ್ಬ ಪೇದೆಗೆ ತುಲುಪಿ ಅವನು ಚೆನ್ನೈಗೆ

ಕಾಲ್‌ಹೊಡೆಯುತ್ತಾನೆ. ಅದರ ಬಗ್ಗೆ ವಿಚಾರಣೆಯಾಗಬೇಕು, ಆ ಪೋಲೀಸ್ ಸ್ಟೇಶನ್ನಿನ ರಿಜಿಸ್ಟರ್‌ನಲ್ಲೋ ಅಥವಾ ಯಾವುದರಲ್ಲೋ ಅದು ವಿಚಾರಣೆಯಾಗಬೇಕು. ಏನು ಯಾವ ಸುದ್ದಿಯನ್ನು ಕೊಟ್ಟಿದ್ದಾನೆ, ಯಾರ್ಯಾರಿಗೆ ಸುದ್ದಿಯನ್ನು ಕೊಟ್ಟಿದ್ದಾನೆ. ಚೆನ್ನೈನ ಮುಖ್ಯಮಂತ್ರಿಯವರಿಗಾಗಲಿ ಅಥವಾ ಅಲ್ಲಿಯ ಎಸ್‌ಟಿಎಫ್ ಚೀಫ್‌ಗಳಿಗೆ ಏನು ಕೊಟ್ಟಿದ್ದಾನೆ. ಅದರ ಬಗ್ಗೆ ವಿಚಾರಣೆಯನ್ನು ಮಾಡಬೇಕು. ಮತ್ತು ಅದರ ಜೊತೆಗೆ ದೊಡ್ಡದೊಡ್ಡ ಬ್ಯಾಗ್‌ಗಳನ್ನು ನೇತು ಹಾಕಿಕೊಂಡು ನಮ್ಮ ತಮಿಳುನಾಡು ಎಸ್‌ಟಿಎಫ್ ದವರು ಅಯ್ಯಪ್ಪಸ್ವಾಮಿಯ ವೇಷವನ್ನು ಧರಿಸಿ ಅಲ್ಲಿ ಬಾಡಿಗೆಯ ಮನೆಯನ್ನು ತೆಗೆದುಕೊಂಡು, ಅಯ್ಯಪ್ಪಸ್ವಾಮಿಯ ಭಕ್ತರ ತರಹಃ ವೇಷವನ್ನು ಧರಿಸಿದ್ದಾರೆ. ಅವರು ನಿಜವಾಗಿಯೂ ತಮಿಳುನಾಡು ಎಸ್‌ಟಿಎಫ್ ನವರು ದೊಡ್ಡದೊಡ್ಡ ಬ್ಯಾಗ್‌ಗಳನ್ನು ನೇತುಹಾಕಿಕೊಂಡು ಅಲ್ಲಿರತಕ್ಕಂಥ ಜನರು ನೋಡಿರತಕ್ಕಂಥವರು ಹೇಳುತ್ತಾರೆ. ಅವರ ಬ್ಯಾಗಿನಲ್ಲಿ ದೊಡ್ಡದೊಡ್ಡ ಗನ್‌ಗಳು ಮತ್ತು ಶಸ್ತ್ರಾಸ್ತ್ರಗಳು ಎಲ್ಲಾ ಇತ್ತು ಅದನ್ನು ಹೊತ್ತುಕೊಂಡು ಹೋಗುತ್ತಿದ್ದರು. ವೇಷವನ್ನು ಮಾತ್ರ ಅಯ್ಯಪ್ಪಸ್ವಾಮಿಯ ವೇಷವನ್ನು ಧರಿಸಿದ್ದಾರೆ. ಬಾಡಿಗೆ ಮನೆ ತೆಗೆದುಕೊಂಡು ಆ ಊರಿನಲ್ಲಿ ಇದ್ದರು. ಆ ಸಂದರಪಾಳ್ಯ, ನಾಲಾರೋಡು, ವಡಕೆಹಳ್ಳ ಈ ಹಳ್ಳಿಗಳಲ್ಲಿ ಬಾಡಿಗೆ ಮನೆಗಳನ್ನು ತೆಗೆದುಕೊಂಡು ಅಯ್ಯಪ್ಪಸ್ವಾಮಿ ವೇಷದಲ್ಲಿದ್ದರು. ಅದಾದ ಮೇಲೆ 5ನೇ ತಾರೀಖು ಬೆಳಿಗ್ಗೆ ಆ ಮನೆಗೆ ಬೀಗ ಹಾಕಿ, ಆ ಬ್ಯಾಗ್‌ನ್ನು ಹೊತ್ತುಕೊಂಡು ಕಾಡಿನೊಳಗೆ ಹೋಗಿದ್ದಾರೆ. ಅದನ್ನು ಜನ ನೋಡಿದ್ದಾರೆ, ಈ ವಿಚಾರ ಕೆಲವು ಪತ್ರಿಕೆಗಳಲ್ಲಿ ಆ ಮನೆಗಳ ಫೋಟೋ ಮತ್ತು ಇದರ ಸುದ್ದಿ ಎಲ್ಲಾ ಬಂದಿದೆ. ಇವರು ಯಾರು? ಅವರಿಗೆ ಚೆಂಗಡಿ ಪ್ರದೇಶ ಗೊತ್ತಿತ್ತಾ? ಚೆಂಗಡಿ ನಮ್ಮ ರಾಜ್ಯದಲ್ಲಿರತಕ್ಕಂಥ ಒಂದು ಪ್ರದೇಶ, ಆ ಚೆಂಗಡಿ ಪ್ರದೇಶವನ್ನು ತೋರಿಸುವುದಕ್ಕೆ ತಮಿಳುನಾಡಿನ ಎಸ್‌ಟಿಎಫ್ ದವರಿಗೆ ಇದು ಹೇಗೆ ಗೊತ್ತಾಗಿದೆ? ನಮ್ಮ ಎಸ್‌ಟಿಎಫ್ ನವರು ಯಾರೋ ಮಾಹಿತಿಯನ್ನು ಕೊಟ್ಟಿರಬೇಕು, ಆ ಪ್ರದೇಶವನ್ನು ತೋರಿಸುವುದಕ್ಕೆ, ಏಕೆಂದರೆ ಆ ಪ್ರದೇಶದಲ್ಲಿ ಕೆಲವು ದವಸಧ್ಯಾನ್ಯಗಳನ್ನು ಇಟ್ಟುಕೊಂಡು ವೀರಪ್ಪನ್ ಹಾಗೂ ನಾಗಪ್ಪನವರು ಅಲ್ಲಿದ್ದಾರೆ ಎನ್ನುವ ವಿಚಾರ ಗೊತ್ತಿರುತ್ತದೆ. ವೀರಪ್ಪನ್ ಹಿಡಿಯುವ ದೃಷ್ಟಿಯಿಂದ ನಮ್ಮ ಎಸ್‌ಟಿಎಫ್ ನ ಕೆಲವು ಮಾಹಿತಿದಾರರು ಅವರಿಗೆ ಮಾಹಿತಿ ಕೊಟ್ಟು ಅವರು ಅಲ್ಲಿಗೆ ಬಂದಿರುವ ಅನುಮಾನ ನಮಗೆ ಬರುತ್ತದೆ. ನಮ್ಮ ಒಂದು ಎಸ್‌ಟಿಎಫ್ ನ ಸಹಕಾರ ಇಲ್ಲದೆ ಆ ಚೆಂಗಡಿ ಪ್ರದೇಶವಾಗಲಿ, ಅದು ಗೊತ್ತಾಗುತ್ತಿರಲಿಲ್ಲ. ನಂತರ ನಮ್ಮ "ಜಯಾ ಟಿವಿ" ಎಂದು ಹೇಳಿ, ತಮಿಳುನಾಡಿನ ಟಿವಿಯಲ್ಲಿ ಒಂದು ಹೇಳಿಕೆ ಬಂದಿದೆ. ಏನೆಂದರೆ, ಒಬ್ಬ ಅಲೆಗ್ಸಾಂಡರ್ ಎನ್ನುವವನು, ದೂತ ಅವನದೊಂದು ತಂಡ. ಪೋಲೀಸ್ ಮಾಹಿತಿದಾರ, ಈ ನಾಗಪ್ಪನವರ ಹತ್ಯೆಗೆ ಒಳಸಂಚು ಮಾಡಿದ ಆ ತಂಡ ಹೋಗಿದೆ. ಇವನ ಕಡೆಯಿಂದ ಅಲ್ಲಿ ಹತ್ಯೆಯಾಗಿದೆ ಎನ್ನತಕ್ಕಂಥದ್ದನ್ನು ಸುದ್ದಿ ಟಿವಿ ಯಲ್ಲಿ ಬಂದಿದೆ. ಅದರ ಬಗ್ಗೆ ಈ ಸರ್ಕಾರ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇವನು ಯಾರು? ಇವತ್ತಿನವರೆಗೂ ಆ ಅಲೆಗ್ಸಾಂಡರ್ ಎಲ್ಲಿದ್ದಾನೆಂದು ಗೊತ್ತಿಲ್ಲ. ಬದುಕಿದ್ದಾನೋ, ಇಲ್ಲವೋ ಗೊತ್ತಿಲ್ಲ, his whereabouts are not known. Whether he is alive or dead or even he might have been killed. ಅದೇರೀತಿ ಅವನು ಎಲ್ಲಿದ್ದಾನೆ ಎನ್ನತಕ್ಕಂಥ

ಮಾಹಿತಿಯನ್ನು ಸರ್ಕಾರ ಕೊಡಬೇಕಾಗುತ್ತದೆ. ಮತ್ತು ಅವತ್ತು ಚೆಂಗಡಿ ಪ್ರದೇಶದಲ್ಲಿ ಏನು ಎನ್‌ಕೌಂಟರ್ ಆಗಿದೆ ಎಂದು ಹೇಳುತ್ತಾರೋ ಅಲ್ಲಿ ಇನ್ನೂ ಎರಡು ಹೆಣಗಳನ್ನು ಸುಟ್ಟಿದ್ದಾರೆ. ಆ ಹೆಣಗಳು ಯಾರದ್ದು, ಅವರು ಯಾವ ರಾಜ್ಯಕ್ಕೆ ಸೇರಿದವರು, ಅವರ ಹಿನ್ನಲೆ ಏನು? ಅದರ ಬಗ್ಗೆ ಏನೂ ಮಾಹಿತಿ ಕೊಟ್ಟಿಲ್ಲ. ಅದರ ಬಗ್ಗೆ ಫೊರೆನ್ಸಿಕ್ ವರದಿ ಏನು ಬಂದಿದೆ ಎನ್ನತಕ್ಕಂಥದ್ದರ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. ಇಲ್ಲಿ 5ನೇ ತಾರೀಖು ಹತ್ಯೆಯಾಗಿದೆ. ಗುಂಡು ಬಿದ್ದಿದೆ, 8ನೇ ತಾರೀಖು ರಾತ್ರಿಯವರೆಗೆ ಹೋಮ್ ಮಿನಿಸ್ಟರ್ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ನಾವೆಲ್ಲಾ ನೋಡುತ್ತಿದ್ದೆವು. ನಾಗಪ್ಪನವರು ಸತ್ತಿದ್ದಾರೋ ಏನೋ ಗೊತ್ತಿಲ್ಲ, ಯಾವುದೋ ಒಂದು ಹೆಣ ಇದೆ, ಹೆಸರು ಗೊತ್ತಿಲ್ಲ. ಇನ್ನೂ ಖಚಿತಪಡಿಸಿಲ್ಲ ನಾಗಪ್ಪನವರು ಸತ್ತಿದ್ದಾರೆಂದು ಹೇಳಿ, ಎಂದು ಇನ್ನೂ ಹೇಳಿಕೆಯನ್ನು ಕೊಡುತ್ತಿದ್ದಾರೆ. ನೋಡಿದರೆ 5ನೇ ತಾರಿಖು ಈ ಹತ್ಯೆಯಾಗಿದೆ. ಅಂದರೆ ಎಷ್ಟರಮಟ್ಟಿಗೆ ಈ ಸರ್ಕಾರಕ್ಕೆ ನಾಗಪ್ಪನವರ ಸಾವಿನ ಸುದ್ದಿಯೂ ಸಹ ಸಿಕ್ಕಿಲ್ಲ, ಇವರ ಇಂಟಲಿಜೆನ್ಸಿ ಏನು ಮಾಡುತ್ತಿತ್ತು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಮತ್ತು ಸಣ್ಣ ನೀರಾವರಿ ಸಚಿವರು) ಮಾನ್ಯ ಉಪಾಧ್ಯಕ್ಷರೇ, ನಾನು ಆ ರೀತಿಯಾಗಿ ಏನನ್ನೂ ಹೇಳಲೇ ಇಲ್ಲ, ಇದರ ಬಗ್ಗೆ ಬೇಕಾದರೆ, ತಾವು ತಂದು ಪ್ರೊಡ್ಯೂಸ್ ಮಾಡಿ, "ಒಂದು ಹೆಣ ಸಿಕ್ಕಿದೆ ಅದು ಯಾರದೋ ಗೊತ್ತಿಲ್ಲ, ನಾಗಪ್ಪನವರದ್ದೋ ಅಥವಾ ಇನ್ನಾರದೋ" ಎನ್ನತಕ್ಕಂಥದ್ದನ್ನು, ನಾನು ಎಲ್ಲಿಯೂ ಕೂಡ ಹೇಳಿಲ್ಲ, ನಾನು ಕ್ಯಾಸೆಟ್ ಬರುವವರೆಗೂ ವೈಟ್ ಮಾಡಿ ಎಂದು ಸಾಯಂಕಾಲ ಅನೌನ್ಸ್ ಮಾಡಿದ್ದೇನೆಯೇ ಹೊರತು, ಅಲ್ಲಿಯವರೆವಿಗೂ ಯಾವ ಹೇಳಿಕೆಯನ್ನೂ ಕೊಟ್ಟಿಲ್ಲ. ಅದನ್ನು ಸುಮ್ಮನೆ ನೀವು, ಆ ರೀತಿಯಾಗಿ ಹೇಳಿದರೆ ಅದು ಸರಿಯಲ್ಲ. ಅದಕ್ಕೆ ಇಲ್ಲಿ ಹೇಳಿದ್ದೇನೆಂದರೆ, ನಾನು ಹೇಳುವುದನ್ನು ಸ್ವಲ್ಪ ನೀವು ಕೇಳಿ ಅದಕ್ಕೆ ಇಲ್ಲಿ ಪ್ರಸ್ತಾಪವಾಗಿರುವುದು. ಕ್ಯಾಸೆಟ್ ರೂಪದಲ್ಲಿ ಬಂದರೂ ಕೂಡ, ಇವರಿಗೆ ಗೊತ್ತಿದ್ದರೂ ಕೂಡ, ಇವರು ಅನೌನ್ಸ್ ಮಾಡಲಿಲ್ಲ, ಹೇಳಲಿಲ್ಲ, ಎನ್ನತಕ್ಕಂಥದ್ದು ಪ್ರಸ್ತಾಪವಾಗಲಿಲ್ಲ. ಅದಕ್ಕಾಗಿ ತಾವು ಇನ್ನೊಂದನ್ನು ಕರೆಕ್ಷನ್ ಮಾಡಿಕೊಳ್ಳಿ ದಯವಿಟ್ಟು, ನಾನು ಆ ದಿವಸ ಹೇಳೂ ಇಲ್ಲ, ಅದರ ಮೊದಲನೆಯ ದಿವಸ ಕೂಡ ಎಲ್ಲೂ ಕೂಡ ಹೇಳಲಿಲ್ಲ.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಒಟ್ಟಿನಲ್ಲಿ ನಮ್ಮ ರಾಜ್ಯಕ್ಕೆ ಇದು ಹೇಗೆ, 25ನೇ ತಾರೀಖು ಅವರ ಅಪಹರಣ ಆದ ಬಗ್ಗೆ ಇಡೀ ಸುತ್ತಮುತ್ತಲಿನ ಹಳ್ಳಿಗಳಿಗೆ ಗೊತ್ತಾದದ್ದೂ 15ನಿಮಿಷದಲ್ಲಿ, ಇವರಿಗೆ ಅಂದರೆ ಎರಡು-ಎರಡೂವರೆ ಗಂಟೆಯವರೆಗೆ ಪೊಲೀಸ್‌ನವರು ಬಂದೇ ಇಲ್ಲ. ಹನೂರಿನ ಸರ್ಕಲ್ ಇನ್ಸ್‌ಪೆಕ್ಟರ್ ಬಂದಿಲ್ಲ, ಕೊಳ್ಳೆಗಾಲದವರು ಬಂದಿಲ್ಲ, ಎರಡು-ಎರಡೂವರೆ ಗಂಟೆಗಳ ಕಾಲ, ನಾಗಪ್ಪನವರ ಮನೆಯಿಂದ ಫೋನ್ ಹೋಗಿದ್ದರೂ ಸಹ, ಅವರು ಬಂದೇ ಇಲ್ಲ. ಅದು ಹೇಗೆ ನಡೆದಿದೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೇ, ಅಂದರೆ ಸರ್ಕಾರಕ್ಕೆ ನಾಗಪ್ಪನವರು ಅಪಹರಣವಾಗಿದ್ದು ಕಾಡಿಗೆ ತಲುಪಿದ ನಂತರವೇ ಗೊತ್ತಾಗಿದ್ದು. ನಾಗಪ್ಪನವರ ಹತ್ಯೆಯಾಗಿದ್ದು ಕೂಡ ಅವರ ಬಾಡಿ ಟ್ರೇಸ್-ಔಟ್ ಆದ ಮೇಲೆಯೇ ಗೊತ್ತಾಗಿದ್ದು.

ಶ್ರೀ ಬಿ.ಸೋಮಶೇಖರ್: ಮಾನ್ಯ ಅಧ್ಯಕ್ಷರೇ, ಅಂದರೆ ನಾಚಿಕೆಯಾಗಬೇಕು. ನಮ್ಮ ಹತ್ತಿರ ಇಂಟೆಲಿಜೆನ್ಸ್ ಇಲ್ಲ, ನಾವು ಅಧಿಕಾರಿದಿಂದ ಹೊರಗಡೆ ಇದ್ದೇವೆ. ಇವರ ಹತ್ತಿರ ಇಂಟೆಲಿಜೆನ್ಸ್ ಇದೆ, ವೈರ್‌ಲೆಸ್ ಇದೆ, ಇವರು ಎಷ್ಟರಮಟ್ಟಿನ ಬೇಜವಾಬ್ದಾರಿತನದಿಂದ ಸರ್ಕಾರ ವರ್ತಿಸಿದೆ, ಎನ್ನುವುದು ಇದರಿಂದ ಗೊತ್ತಾಗುತ್ತದೆ. ನಾಗಪ್ಪನವರ ಅಪಹರಣವಾದ ದಿನದಿಂದ ಅವರು ಸಾಯುವತನಕ, ಹತ್ಯೆಯಾಗುವ ತನಕ, 95 ದಿನಗಳ ಕಾಲ ಸರ್ಕಾರ ನಿದ್ರೆ ಮಾಡುತ್ತಿತ್ತಾ? ಯಾವುದೇರೀತಿಯ ತೀಕ್ಷಣತೆಯಿಂದ ಕೆಲಸವನ್ನು ಮಾಡಿಲ್ಲ, ಪರಿಪರಿಯಾಗಿ ನಾಗಪ್ಪನವರ ಮನೆಯವರು ಕಾರ್ಯಾಚರಣೆ ಮಾಡಬೇಡಿ ಕೇಳಿಕೊಂಡರು, ಇವರು ಹೇಳುತ್ತಾರೆ ಕಾರ್ಯಾಚರಣೆಯನ್ನು ಮಾಡಬೇಡಿ, ಎಂದು ಹೇಳಿರುವುದರಿಂದ ನಾವು ಮಾಡಲಿಲ್ಲ. ಇಲ್ಲದಿದ್ದರೆ ನಾವು ವೀರಪ್ಪನ್‌ನ್ನು ಹಿಡಿಯಬಹುದಾಗಿತ್ತು, ಸುಮಾರು 10-12 ದಿವಸಕಾಲ ಕಾರ್ಯಾಚರಣೆ ನಡೆದಿತ್ತು, ಡಿಜಿಪಿ ಯವರು ಹೆಲಿಕ್ಯಾಪ್ಟರ್‌ನ್ನು ತರಿಸಿಕೊಂಡು ಸುಮಾರು 2000 ಸಿಬ್ಬಂದಿಯನ್ನು ಕರೆಸಿ ಹೊರಟಿದ್ದರು, ನಮ್ಮ ನಾಗಪ್ಪನವರ ಮನೆಯವರು ಕೇಳಿಕೊಂಡರೂ ಸಹ ಏತಕ್ಕೆ ಕಾರ್ಯಾಚರಣೆಯನ್ನು ಮಾಡಿದರು. ವೀರಾವೇಶದಿಂದ ಹಿಡಿದು ಬಿಡುತ್ತೇವೆ, ನಿಜವಾಗಲೂ ಕಾರ್ಯಾಚರಣೆಯನ್ನು ಮಾಡಬಾರದೆಂದು ಹೇಳಿದ ಮೇಲೆ ಮಾಡಬಾರದು, ಅದೇ ರಾಜಕುಮಾರ್ ಅಪಹರಣದಲ್ಲಿ ಕಾರ್ಯಾಚರಣೆಯನ್ನು ಮಾಡಬಾರದೆಂದು ಯಾರು ಹೇಳಿದರು? ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡಿತ್ತಾ? ನಾವೇನಾದರೂ ಹೇಳಿದ್ದೇವಾ? ಆದರೂ ನೀವು ಮಾಡಲಿಲ್ಲ. ಎಸ್‌ಟಿಎಫ್ ನವರು ಕಾರ್ಯಾಚರಣೆಯನ್ನು ಮಾಡಲಿಲ್ಲ, ಆದರೂ ಇಲ್ಲಿ ಕಾರ್ಯಾಚರಣೆಯನ್ನು ಮಾಡಬೇಡಿ ಎಂದು ಹೇಳಿದರೂ ಕೂಡ ಇಲ್ಲ ಕಾರ್ಯಾಚರಣೆಯನ್ನು ಮಾಡಿದ್ದಾರೆ, ಇಲ್ಲಿಯ ಎಸ್‌ಟಿಎಫ್ ನವರಿಗೆ ನಮ್ಮ ಸರ್ಕಾರದ ಆದೇಶವಿತ್ತೋ, ತಮಿಳುನಾಡಿನ ಸರ್ಕಾರದ ಆದೇಶವಿತ್ತೋ ಅಥವಾ ಎರಡು ಸರ್ಕಾರ ಬಿಟ್ಟು ಇನ್ನೊಂದು ಕಾಣದ ಕೈ ಆದೇಶವಿತ್ತೋ ಇದರ ಬಗ್ಗೆ ಸ್ಪಷ್ಟವಾಗಿ ವಿಚಾರಣೆ ನಡೆಯಬೇಕಾಗುತ್ತದೆ. ನಾಗಪ್ಪನವರ ಅಪಹರಣವಾದ ಮೇಲೆ ಶ್ರೀ ಮಹದೇವಸ್ವಾಮಿಯವರು 6ನೇ ತಾರೀಖು ಮೊದಲು ಭೇಟಿ ಮಾಡುವುದಕ್ಕೆ ಹೋಗುತ್ತಾರೆ. 44 ದಿವಸಗಳ ನಂತರ, ಆಗ ವೀರಪ್ಪನ್ ಕೊಟ್ಟಂಥ ಸೂಚನೆಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ನಮ್ಮ ಹೋಮ್ ಮಿನಿಸ್ಟರ್‌ಗೆ ಹೇಳುತ್ತಾರೆ, ಮಣಿಯನ್ನು ಸಂಧಾನಕ್ಕೆ ಕಳುಹಿಸುವುದಕ್ಕೆ ಹೇಳಿದ್ದಾರೆ, ದಯಮಾಡಿ ಸಂಧಾನಕ್ಕೆ ಕಳುಹಿಸುವ ಕಾರ್ಯಾಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳುತ್ತಾರೆ.

3.50 ಪಿ.ಎಂ

ಅದಾದನಂತರ ಈ ಸರ್ಕಾರ ಏನು 44 ದಿನಗಳವರೆವಿಗೂ ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. 95 ದಿನಗಳಾದ ನಂತರ ಈ ಕ್ಯಾಬಿನೆಟ್ ತೀರ್ಮಾನ ಮಾಡುತ್ತದೆ. ಎರಡನೇ ಸಾರಿ ಅಂದರೆ 13ನೇ ತಾರೀಖು ಮತ್ತೆ ಕಾಡಿಗೆ ಮಹದೇವಸ್ವಾಮಿಯವರು ಹೋಗುತ್ತಾರೆ, ಅವರು ಎರಡು ಸಾರಿ ಹೋದಾಗ ಅವರಿಗೆ ವೀರಪ್ಪನ್ ನಾಗಪ್ಪನವರನ್ನು ತೋರಿಸಲೇ ಇಲ್ಲ. ನಾನು ಮೊದಲೇ ಹೇಳಿದ್ದೇನೆ, ಮಣಿಯನ್ನು ಬಿಡುಗಡೆ ಮಾಡಿ ಎಂದು ಹೇಳಿದರೂ ಸರ್ಕಾರ ಇದುವರೆವಿಗೂ ಏನೂ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಇನ್ನೊಂದು ಸಾರಿ ನೀನು ಮಣಿಯ ಜೊತೆಗೆ ಬಂದರೆ ಮಾತ್ರ ನಾನು ನಾಗಪ್ಪನವರ ಬಿಡುಗಡೆ ಮಾಡುತ್ತೇನೆ

ಹಾಗೂ ಅವರ ಮುಖವನ್ನು ತೋರಿಸುತ್ತೇನೆ, ಇಲ್ಲದಿದ್ದರೆ ನಾನು ನಾಗಪ್ಪನವರನ್ನು ನೋಡುವುದಕ್ಕೆ ಬಿಡುವುದಿಲ್ಲವೆಂದು ಹೇಳಿ ವಾಪಸ್ಸು ಕಳುಹಿಸಿಕೊಟ್ಟಿದ್ದಾನೆ. ಆದಾದಮೇಲೆ ಮಣಿಯನ್ನು ಬಂದು ಬಿಡುಗಡೆ ಮಾಡಬೇಕೆಂದು ಕೇಳಿಕೊಂಡರೂ ಮಾಡಲಿಲ್ಲ. ಈ ಮಣಿಯನ್ನು ಬಿಡುಗಡೆ ಮಾಡದೇ ಇರುವುದಕ್ಕೆ ಕಾರಣವೇನು? ಅಂದರೆ ಅವರ ಮೇಲೆ ಸುಳ್ಳು ಕೇಸುಗಳನ್ನು ದಾಖಲು ಮಾಡಿರುವುದು ಎಲ್ಲರಿಗೂ ಗೊತ್ತಾಗಿದೆ. 6 ಕೇಸುಗಳನ್ನು ನೀವು ದಾಖಲು ಮಾಡಿ 10 ತಿಂಗಳಾದರೂ ನೀವು ಚಾರ್ಜ್‌ಶೀಟ್ ಫೈಲ್ ಮಾಡಲಿಲ್ಲವೆಂದರೆ, ಅವರ ಮೇಲೆ ನಿಜವಾದಂತಹ ಕೇಸುಗಳಿದ್ದರೆ, ಅವರು ಅಪರಾಧವನ್ನು ಎಸಗಿದ್ದರೆ ಚಾರ್ಜ್‌ಶಿಟ್‌ನ್ನು ಫೈಲ್ ಮಾಡುವುದಕ್ಕೆ ಪೊಲೀಸ್‌ನವರಿಗೆ ಏನು ತೊಂದರೆ ಇತ್ತು? 6 ಕೇಸುಗಳನ್ನು ದಾಖಲು ಮಾಡಿದ ನಂತರ 6 ತಿಂಗಳೊಳಗಾಗಿ ಚಾರ್ಜ್‌ಶೀಟ್‌ನ್ನು ಫೈಲ್ ಮಾಡಬೇಕೆಂದು ಇದೆ. ಆದರೆ 10 ತಿಂಗಳಾದರೂ ಚಾರ್ಜ್‌ಶೀಟನ್ನು ಫೈಲ್ ಮಾಡಿಲ್ಲವೆಂದರೆ ಇದು ಸುಳ್ಳು ಕೇಸುಗಳನ್ನು ದಾಖಲು ಮಾಡಿರುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವರು ಸುಳ್ಳು ಕೇಸನ್ನು ಏತಕ್ಕಾಗಿ ಮಾಡಿದರು? ನಾಗಪ್ಪನವರ ಬಿಡುಗಡೆಗೆ ಅಲ್ಲ ನಾನು ಮೊದಲೇ ಹೇಳಿದಹಾಗೆ, ಒಂದು ಕಡೆ ಹಣವನ್ನು ವಸೂಲಿ ಮಾಡುವುದಕ್ಕೆ, ಕೊಟ್ಟಂತಹ ಹಣವನ್ನು ವಾಪಸ್ಸು ವಸೂಲಿ ಮಾಡುವುದಕ್ಕೆ ಸುಳ್ಳು ಕೇಸನ್ನು ದಾಖಲು ಮಾಡಿ ಕಿರುಕುಳವನ್ನು ಕೊಟ್ಟು ಶಿವಸುಬ್ರಮಣ್ಯಂ ಮತ್ತು ಮಣಿಯನ್ನು ಇವತ್ತು ಬಂಧನಕ್ಕೊಳಪಡಿಸಿದ್ದಾರೆ. ಆದಾದನಂತರ ಚಿಂಗಡಿಯಲ್ಲಿ 5ನೇ ತಾರೀಖು ದಿವಸ ನಾಗಪ್ಪನವರ ಹತ್ಯೆಯಾಗಬೇಕಾದರೆ ಅಲ್ಲಿ ಎನ್‌ಕೌಂಟರ್ ಆಗಿದೆ. ಎಂದು ಹೇಳಿ 6ನೇ ಕ್ಯಾಸೆಟ್‌ನ್ನು ವೀರಪ್ಪನ್ ಕಳುಹಿಸಿದ್ದಾನೆ, ವೀರಪ್ಪನ್ ಕಳುಹಿಸಿದ ಕ್ಯಾಸೆಟ್‌ನ್ನು ನೋಡುವುದಾದರೆ ಯಾರೂ ಕೂಡ ಅನುಮಾನ ಪಡತಕ್ಕಂತಹ ದೃಷ್ಟಿ ಇಲ್ಲ. ಕಾರಣವನ್ನು ಬೇರೆಯವರು ಹೇಳಿದ ಹಾಗೆ ವೀರಪ್ಪನ್ ಯಾರನ್ನು ಅಪಹರಣ ಮಾಡಿದ್ದಾನೆ, ಅವನು ಯಾರನ್ನೂ ಸಹ ಹತ್ಯೆ ಮಾಡಿಲ್ಲ, ಕೊಲೆ ಮಾಡಿಲ್ಲ. ಆದರೆ ಅವನು ಮಣಿಯನ್ನು ಬಿಡುಗಡೆ ಮಾಡುವ ತನಕ ಕಾದಿದ್ದಾನೆ. ಮಣಿಯನ್ನು ನಾವು ಬಿಡುಗಡೆ ಮಾಡುವುದಕ್ಕಾಗಲಿಲ್ಲ, ಕೊನೆಗೆ 5ನೇ ತಾರೀಖು ಈ ಹತ್ಯೆ ನಡೆದಿದೆ. ಈ ಹತ್ಯೆ ನಡೆಯಬೇಕಾದರೆ 2-3 ಅನುಮಾನಗಳು ಬರುತ್ತಿವೆ. ತಮಿಳುನಾಡು ಎಸ್‌ಟಿಎಫ್‌ನವರು ಏನು ಹೇಳುತ್ತಿದ್ದಾರೆಂದರೆ, ತಮಿಳುನಾಡು ಚೀಫ್ ಮಿನಿಸ್ಟರ್ ನಮ್ಮ ಎಸ್‌ಟಿಎಫ್‌ನವರಿಂದ ಹತ್ಯೆಯಾಗಿಲ್ಲವೆಂದು ಹೇಳುತ್ತಿದ್ದಾರೆ, ಕರ್ನಾಟಕದ ಎಸ್‌ಟಿಎಫ್‌ನವರು ತಮಿಳುನಾಡು ಎಸ್‌ಟಿಎಫ್‌ನವರಿಂದ ಆಗಿದೆ ಎಂದು ಹೇಳುತ್ತಿದ್ದಾರೆ. ಮತ್ತೆ ವೀರಪ್ಪನ್ ನಾನು ಮಾಡಿಲ್ಲವೆಂದೂ ಇದು ಎನ್‌ಕೌಂಟರ್‌ನಿಂದ ಆಗಿದೆ ಎಂದು ಹೇಳುತ್ತಿದ್ದಾನೆ. ಇವರು ಮಾಡಿಲ್ಲ, ಅವರು ಮಾಡಿಲ್ಲ, ಸುಫಾರಿ ಯಾರನ್ನಾದರೂ ಎಂಗೇಜ್ ಮಾಡಿದ್ದಾರಾ? ಇದನ್ನು ಯಾರು ಮಾಡಿದ್ದಾರೆ? ಅದನ್ನು ತಿಳಿಯಬೇಕಾಗುತ್ತದೆ. ಮತ್ತೆ ಎನ್‌ಕೌಂಟರ್ ಆಗಿಲ್ಲವೆಂದರೆ ಅಲ್ಲಿ ಸುಮಾರು 165 ಗುಂಡುಗಳು ಸಿಕ್ಕಿವೆ ಎಂದು ಹೇಳುತ್ತಾರೆ. ಅಲ್ಲಿಯ ಬಂಡೆ ಹಾಗೂ ಮರಗಳ ಮೇಲೆ ಫೈರಿಂಗ್ ಆಗಿದೆ, ಆ ಮರದ ಚಿಕ್ಕೆಗಳೆಲ್ಲವೂ ಕಿತ್ತಿದೆ, ಬಂಡೆಗಳ ಮೇಲೆ ಗುರುತುಗಳು ಇವೆ, ಇಷ್ಟೇಲ್ಲಾ ಹೇಳಿದ ಮೇಲೆ ವೀರಪ್ಪನ್ ಒಬ್ಬನೇ ಎಲ್ಲಾ ಕಡೆಗಳಲ್ಲೂ ಓಡಿ ಮರಗಳ ಹಾಗೂ ಬಂಡೆಗಳ ಮೇಲೆ ಹೋಗಿ ಶೂಟ್ ಮಾಡುವುದಕ್ಕಾಗುವುದಿಲ್ಲ. ಎರಡು ಕಡೆಗಳಲ್ಲಿ ಹಾಗೆಯೇ ಇದೆ, ಅದು ಆಗಬೇಕಾದರೆ

ಮಧ್ಯೆದಲ್ಲಿ ಯಾರೋ ಕಾಣದಕೈನಿಂದ ಆಗಿರುತ್ತದೆ. ಇದನ್ನು ಇನ್‌ವೆಸ್ಟಿಗೇಷನ್ ಮಾಡಬೇಕಾದರೆ ಅದು ಇಂತಹ ವಿಚಾರಗಳಲ್ಲಿ ಜ್ಯುಡಿಷಿಯಲ್ ಎನ್‌ಕ್ವೈಯರಿ ಏನು ಮಾಡುವುದಕ್ಕೆ ಸಾಧ್ಯ? ಅದರ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ಸರ್ಕಾರವು ಹೇಳಿದ್ದನೆಲ್ಲವನ್ನು ಕೇಳಿದ್ದೇವೆಂದು ಒಂದು ಕಡೆ ಹೇಳುತ್ತೀರಿ, ಆದ್ದರಿಂದ ಅವರ ಬಿಡುಗಡೆ ಮಾಡತಕ್ಕಂಥಹ ಪ್ರಯತ್ನವನ್ನು ನಾವು ಮಾಡಿದ್ದೇವೆ ಎಂದು ಹೇಳುತ್ತೀರಿ ವಿರೋಧಪಕ್ಷದವರಾದ ನಾವು ಕಾರ್ಯಾಚರಣೆಯನ್ನು ಮಾಡಬೇಡಿ ಎಂದು ಹೇಳಿದ್ದೇವೆ. ಆದರೆ ನೀವು ಮಾಡಿದ್ದೀರಿ ಅವರ ಮನೆಯವರು ಮಾಡಬೇಡಿ ಎಂದು ಹೇಳಿದರೂ ಕೂಡ ತಾವೂ ಮಾಡಿದ್ದೀರಿ. ನಾವು ಜ್ಯುಡಿಷಿಯಲ್ ಎನ್‌ಕ್ವೈಯರಿ ಮಾಡಿ ಎಂದು ಹೇಳಿದ್ದೇವೆಯೇ? ನೀವು ಪ್ರತಿಯೊಂದಕ್ಕೂ ವಿರೋಧಪಕ್ಷದವರನ್ನು ಕರೆದು ಆಲ್‌ಪಾರ್ಟಿ ಮೀಟಿಂಗ್ ಕರೆದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದವರು ವಿಧಾನಸಭೆಯ ಅಧಿವೇಶನವನ್ನು ಕರೆದಿದ್ದೀರಿ? ಅಧಿವೇಶನವನ್ನು ಕರೆದು ಅದಕ್ಕೆ ಮೊದಲೇ ಜ್ಯುಡಿಷಿಯಲ್ ಎನ್‌ಕ್ವೈಯರಿಗೆ ಆರ್ಡರ್ ಮಾಡಿದರೆ ಹೇಗೆ? ಸಾಮಾನ್ಯವಾಗಿ ಅಧಿವೇಶನವನ್ನು ಇದೇ ಉದ್ದೇಶಕ್ಕಾಗಿ ಅಂದರೆ ನಾಗಪ್ಪನವರ ಹತ್ಯೆಯ ವಿಚಾರದಲ್ಲಿ ಚರ್ಚೆ ನಡೆಯಬೇಕು ಎಂಬ ಉದ್ದೇಶದಿಂದ ಕರೆದಿದ್ದೀರಿ. ಚರ್ಚೆಯಾದ ಮೇಲೆ ಸರ್ಕಾರ ಇದರ ಬಗ್ಗೆ ಕೊನೆಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು, ಜ್ಯುಡಿಷಿಯಲ್ ಎನ್‌ಕ್ವೈಯರಿನೋ, ಸಿಬಿಐ ಎನ್‌ಕ್ವೈಯರಿನೋ ಅಥವಾ ಏನು ಎನ್‌ಕ್ವೈಯರಿ ಬೇಡ ಎಂದು ಚರ್ಚೆಯಲ್ಲಿ ಉತ್ತರವನ್ನು ಕೊಡಬೇಕಾಗಿತ್ತು. ಅದಲ್ಲದೆ ಪ್ರತಿಯೊಂದಕ್ಕೂ ವಿರೋಧಪಕ್ಷದವರನ್ನು ಕೇಳಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದವರು ಜ್ಯುಡಿಷಿಯಲ್ ಎನ್‌ಕ್ವೈಯರಿ ಮಾಡುವ ಬಗ್ಗೆ ವಿರೋಧಪಕ್ಷದವರನ್ನು ನೀವು ಕೇಳಿದ್ದೀರಾ? ಇದು ಏನು ತೋರಿಸುತ್ತದೆಂದರೆ ಏನೋ ಮುಚ್ಚಿಡುವುದಕ್ಕೋಸ್ಕರ ನಮ್ಮ ಬಾಯಿಯನ್ನು ಮುಚ್ಚಿಸುವುದಕ್ಕೋಸ್ಕರ ವಿಧಾನಸಭೆಯ ಅಧಿವೇಶನವನ್ನು ಕರೆಯುತ್ತೀರಿ, ಆಲ್ ಪಾರ್ಟಿ ಮೀಟಿಂಗ್ ಕರೆಯುವುದಿಲ್ಲ, ಚರ್ಚೆಗೂ ಅವಕಾಶವಾಗುವುದಕ್ಕೆ ಮೊದಲೇ ಜ್ಯುಡಿಷಿಯಲ್ ಎನ್‌ಕ್ವೈಯರಿಯನ್ನು ಮಾಡುತ್ತೀರಿ. ಇದರ ಉದ್ದೇಶ ನನಗೆ ಏನೊ ಅನಿಸುತ್ತದೆಂದರೆ, ಮುಚ್ಚಿಡುವುದಕ್ಕೆ ಏನೋ ಪ್ರಯತ್ನವನ್ನು ಮಾಡುತ್ತಿದ್ದೀರಿ ಎಂಬ ಅನುಮಾನ ನಮಗೆ ಬಂದಿದೆ, ನಿಮಗೆ ನಿಜವಾಗಲೂ ನಾಗಪ್ಪನವರಂತೂ ಬಿಡಿಸುವುದಕ್ಕೂ ಆಗಲಿಲ್ಲ, ಅದರಲ್ಲಿ ನೀವು ವಿಫಲರಾಗಿದ್ದೀರಿ, ಅದು ಜನಜನಿತವಾಗಿ ಇಡೀ ರಾಜ್ಯದಾದ್ಯಂತ ಪ್ರತಿಯೊಬ್ಬರಿಗೂ ಗೊತ್ತಿದೆ, ನೀವು ಡಿಫೆಂಡ್ ಮಾಡಬಹುದು, ನಿಮ್ಮ ಪಕ್ಷದವರು ಡಿಫೆಂಡ್ ಮಾಡಬಹುದು, ಆದರೆ ಸಾರ್ವಜನಿಕರನ್ನು ನೀವು ಯಾವತ್ತೂ ನಂಬಿಸುವುದಕ್ಕೆ ಸಾಧ್ಯವಿಲ್ಲ. ಮೋಸ ಮಾಡುವುದಕ್ಕೂ ಸಾಧ್ಯವಿಲ್ಲ, ಇದರ ಬಗ್ಗೆ ಪ್ರತಿಯೊಬ್ಬರಿಗೂ ಅರ್ಥವಾಗಿದೆ. ಇದರಲ್ಲಿ ಈ ಸರ್ಕಾರ ಎಡವಿದೆ, ವಿಳಂಬ ಮಾಡಿದೆ, ಉದ್ದೇಶಪೂರ್ವಕವಾಗಿ ಈ ಕಾರ್ಯದಲ್ಲಿ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಡಾ:ರಾಜ್‌ಕುಮಾರ್‌ರವರ ಅಪಹರಣದಲ್ಲಿ ತೆಗೆದುಕೊಂಡಥ ಆಸಕ್ತಿ ಇದರಲ್ಲಿ ಮಾಡಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಇವತ್ತು ನಮ್ಮ ಈ ಸರ್ಕಾರ ಈ ಕೆಲಸವನ್ನು ಮಾಡಿದೆ. ಇಲ್ಲಿ ನಾವು ಕೇಳತಕ್ಕಂಥದ್ದು 2-3 ವಿಚಾರಗಳಿವೆ, ನಾಗಪ್ಪನವರ ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗಿಲ್ಲ, ಕೊನೆಗೆ ಯಾವ ರೀತಿಯಾಗಿ ಹತ್ಯೆಯಾಯಿತು ಎಂಬ ಸತ್ಯಾಂಶವನ್ನು ತಿಳಿಯುವ ಹಕ್ಕು ನಮಗೂ ಹಾಗೂ ಸಾರ್ವಜನಿಕರಿಗೂ ಇದೆ. ಅದಕ್ಕೋಸ್ಕರ

ಜ್ಯುಡಿಷಿಯಲ್ ಎನ್‌ಕ್ವೈಯರಿ ಎಂದು ತಾವು ಮಾಡಿದ್ದೀರಿ, ಇದರಿಂದ ಯಾವುದೇ ಒಂದು ಸತ್ಯಾಂಶ ಹೊರಬೀಳುವುದಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ನಿಮಗೂ ಸಹ ಗೊತ್ತಿದೆ. ನಮ್ಮ ರಾಜ್ಯದೊಳಗಡೆ ಆಗತಕ್ಕಂತಹ ವಿಚಾರಗಳಲ್ಲಿ ಜ್ಯುಡಿಷಿಯಲ್ ಎನ್‌ಕ್ವೈಯರಿಯನ್ನು ಮಾಡಬಹುದು. ಅದು ಜ್ಯುಡಿಷಿಯಲ್ ಎನ್‌ಕ್ವೈಯರಿಯೇ ಹೊರತು ಅದು ಇನ್‌ವೆಸ್ಟಿಗೇಷನ್ ಆಗುವುದಕ್ಕೆ ಸಾಧ್ಯವಿಲ್ಲ. ಇನ್‌ವೆಸ್ಟಿಗೇಷನ್ ಮಾಡಿ ಎಂದು ನಾವು ಕೇಳುತ್ತಿರುವುದು. ಇನ್‌ವೆಸ್ಟಿಗೇಷ್ ಮಾಡಬೇಕಾದರೆ ಸಿಬಿಐ ತನಿಖೆಯಾಗಬೇಕಾಗುತ್ತದೆ. ಏಕೆಂದರೆ ನಾವು ಅನೇಕ ವಿಚಾರಗಳನ್ನು ಹೇಳಿದ್ದೇವೆ, 40 ರಿಂದ 100 ಕೋಟಿ ರೂಪಾಯಿಗಳು ಸಂಗ್ರಹಣೆಯಾಗಿದೆ ಡಾ:ರಾಜ್‌ಕುಮಾರ್ ಅಪಹರಣದಲ್ಲಿ ಕೊಟ್ಟಿದ್ದಾರೆಂದು ಶ್ರೀ ದಿನಕರ್‌ರವರು ಪುಸ್ತಕದಲ್ಲಿ ಹೇಳಿದ್ದಾರೆ. ಅದರ ಬಗ್ಗೆಯೂ ವಿಚಾರಣೆಯಾಗಬೇಕು. ಏಕೆಂದರೆ ನಾಗಪ್ಪನವರ ಅಪಹರಣಕ್ಕೂ ಡಾ:ರಾಜ್‌ಕುಮಾರ್‌ರವರ ಅಪಹರಣಕ್ಕೂ ಸಂಬಂಧವಿದೆ, ಆ ಅಪಹರಣದಲ್ಲಿ ನೀವು ಮಾತು ಕೊಟ್ಟಂತೆ ತಾವು ನಡೆದುಕೊಂಡಿಲ್ಲ; ಅದಕ್ಕಾಗಿ ಈ ಅಪಹರಣವಾಗಿದೆ. ಆದ್ದರಿಂದ ಈ ಎರಡು ಭಾಗದ ವಿಚಾರಣೆಯಾಗಬೇಕಾಗುತ್ತದೆ. ಒಂದು ಫಸ್ಟ್ ಪಾರ್ಟ್ ಇನ್ನೊಂದು ಸೆಕೆಂಡ್ ಪಾರ್ಟ್, ಫಸ್ಟ್ ಪಾರ್ಟ್‌ನಲ್ಲಿ ರಾಜ್‌ಕುಮಾರ್‌ರವರ ಅಪಹರಣದಲ್ಲಿ ನೀವು ಏನೇನು ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಎಷ್ಟು ಹಣವನ್ನು ಸಂಗ್ರಹಣೆಯನ್ನು ಮಾಡಿದ್ದೀರಿ. ಏನು ಆಶ್ವಾಸನೆಯನ್ನು ಈಡೇರಿಸಿದ್ದೀರಿ? ಏತಕ್ಕಾಗಿ ಈಡೇರಿಸಿಲ್ಲ, ಮಣಿಯ ಮೇಲೆ ಯಾವ ಕೇಸುಗಳನ್ನು ಹಾಕಿದ್ದೀರಿ? ಏತಕ್ಕಾಗಿ ಹಾಕಿದ್ದೀರಿ? ಈ ವಿಚಾರಗಳಲ್ಲಿ ಒಂದು ಎನ್‌ಕ್ವಾಯರಿಯಾಗಬೇಕಾಗುತ್ತದೆ. ನಂತರ ನಮ್ಮ ನಾಗಪ್ಪನವರ ಹತ್ಯೆ ಯಾವ ರೀತಿಯಾಯಿತು, ಇದರಲ್ಲಿ ಸರ್ಕಾರದ ಪಾತ್ರವೇನು? ಇದರಲ್ಲಿ ಯಾವ ರೀತಿಯಾಗಿ ವಿಫಲರಾಗಿದ್ದೀರಿ? ಇದರ ಬಗ್ಗೆ ವಿಚಾರಣೆಯಾಗಬೇಕಾಗುತ್ತದೆ. ಎರಡು ಒಂದು ಭಾಗದ ವಿಚಾರಣೆಯಾಗುತ್ತದೆ, ಇದು ಕಾಂಪ್ರಹೆನ್ಸೀವ್ ಎನ್‌ಕ್ವೈಯರಿ ಯಾಗಬೇಕಾಗುತ್ತದೆ. ಅದಕ್ಕೋಸ್ಕರವೇ ನೀವು ಸಿಬಿಐ ಎನ್‌ಕ್ವಾಯರಿಯನ್ನು ಮಾಡಬೇಕಾಗುತ್ತದೆ. ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಬೇಡಿ. ಸರ್ಕಾರಕ್ಕೆ ಸಾಕಾದಷ್ಟು ಕೆಟ್ಟ ಹೆಸರು ಬಂದಿದೆ, ಸಾಕಾದಷ್ಟು ಅವಮಾನವು ಸಹ ಆಗಿದೆ. ಇನ್ನು ನೀವು ಎಷ್ಟೇ ಪ್ರಯತ್ನವನ್ನು ಮಾಡಿದರೂ ಸಹ ಕಳಂಕದಿಂದ ನೀವು ಹೊರಬರುವುದಕ್ಕೆ ಸಾಧ್ಯವಾಗವುದಿಲ್ಲ. ಈ ಕಳಂಕದಿಂದ ಸ್ವಲ್ಪಮಟ್ಟಿಗೆ ತಪ್ಪಿಸಿ ಕೊಳ್ಳಬೇಕಾದರೆ ಸತ್ಯಾಂಶ ಹೊರಬರುವುದಕ್ಕೆ ಮುಕ್ತ ಮನಸ್ಸಿನಿಂದ ವಿರೋಧಪಕ್ಷದವರಾದ ನಾವು ಏನು ಕೇಳಿದ್ದೇವೆ, ಆ ಮನೆಯವರು ಏನು ಕೇಳಿದ್ದಾರೆ ಅದಕ್ಕೆ ನೀವು ಒಪ್ಪಿ ಸಿಬಿಐ ಎನ್‌ಕ್ವಾಯರಿಗೆ ಆದೇಶವನ್ನು ಮಾಡಬೇಕಾಗುತ್ತದೆ. ನಾನು ಮೊದಲೇ ಹೇಳಿದಹಾಗೆ ರಾಜುಗೌಡರಿಗೂ ಹಾಗೂ ವೀರಪ್ಪನ್‌ಗೂ ಏನು ಸಂಬಂಧವಿದೆ ಅವನು ಕ್ಯಾಸೆಟ್‌ನಲ್ಲಿ ಏನು ಹೇಳಿದ್ದಾನೆ, ಅವರು ಟಿವಿಯ ಸಂದರ್ಶನದಲ್ಲಿ ಏನು ಕೊಟ್ಟಿದ್ದಾರೆ ಇವೆಲ್ಲವೂ ಅವರಿಬ್ಬರಿಗೂ ಇರುವ ಸಂಬಂಧಗಳು ಸಾಭೀತಾಗಿರುವುದರಿಂದ ಅವರು ಮೊದಲು ನೈತಿಕ ಹೊಣೆ ಹೊತ್ತು ರಾಜೀನಾಮೆಯನ್ನು ಕೊಡಬೇಕು. ಏಕೆಂದರೆ ಇಷ್ಟೊಂದು ಆಪಾದನೆಗಳು ಒಬ್ಬ ಮಂತ್ರಿಗಳ ಮೇಲೆ ಬಂದಾಗ ಅದನ್ನು ನಾನು ಹೇಳಿಯೇ ಇಲ್ಲ, ಹೇಳಿದರೂ ಹೇಳಿಯೇ ಇಲ್ಲ, ನಾನು ಮಾಡಿಯೇ ಇಲ್ಲ, ನನಗೂ ಅವರಿಗೂ ಸಂಬಂಧವಿಲ್ಲ, ಎಂದೆಲ್ಲಾ ಹೇಳುತ್ತಾರೆ ಕೈಯಲ್ಲಿರತಕ್ಕಂತಹ

ಹುಣ್ಣು ನೋಡುವುದಕ್ಕೆ ಕನ್ನಡಿ ಬೇಕಾ ಉಪಾಧ್ಯಕ್ಷರೇ? ಅವರು ಹೇಳಿದರತಕ್ಕಂಥಹ ಮಾತನ್ನು ಒಪ್ಪದೆ ನನಗೂ ಅದಕ್ಕೂ ಸಂಬಂಧವಿಲ್ಲವೆಂದು ಹೇಳಿದರೆ, ಅದು ಬಾಲೀಶವಾಗುತ್ತದೆ. ಅದನ್ನೂ ಯಾರೂ ಒಪ್ಪುವುದಿಲ್ಲ, ಏಕೆಂದರೆ, ನಾಗಪ್ಪನವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಕೊನೆಯಪಕ್ಷ ಅವರು ರಾಜೀನಾಮೆಯನ್ನು ಕೊಡಬೇಕು, ಮತ್ತು ಸರ್ಕಾರ ಅವರ ಮೇಲೆ ಕೇಸನ್ನು ದಾಖಲು ಮಾಡಬೇಕು. ಇಷ್ಟು ಆಗದೇ ಇದ್ದರೆ ಖಂಡಿತವಾಗಿಯೂ ನಮಗೆ ಸಮಾಧಾನವಿಲ್ಲ. ಸರ್ಕಾರ ಇದರ ಬಗ್ಗೆ ತಕ್ಷಣ ವಿಳಂಬ ಮಾಡದೆ ಸಿಬಿಐ ಇನ್‌ವೆಸ್ಟಿಗೇಷನ್ ಮಾಡಬೇಕು, ಮತ್ತು ಶ್ರೀ ರಾಜುಗೌಡರು ತಕ್ಷಣ ರಾಜೀನಾಮೆಯನ್ನು ಕೊಡಬೇಕೆಂದು ಹೇಳುತ್ತಾ ಮತ್ತೊಮ್ಮೆ ಈ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣಾ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಕೆಲವು ಅಸತ್ಯ ಆರೋಪಗಳು ನನ್ನ ಮೇಲೆ ಬಂದಿರುವುದರಿಂದ ದಯಮಾಡಿ ನನಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಉಪಾಧ್ಯಕ್ಷರು: ಕೊಡುತ್ತೇವೆ.

+ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ):- ಮಾನ್ಯ ಉಪಾಧ್ಯಕ್ಷರೆ, ಶ್ರೀಮಾನ್ ನಾಗಪ್ಪನವರ ದುರಂತ ಸಾವಿನ ಬಗ್ಗೆ ಕಳೆದ ಹಲವಾರು ದಿನಗಳಿಂದ ಚರ್ಚೆಯಾಗಿರ ತಕ್ಕಂಥದ್ದನ್ನು ನಾವು ನೋಡಿದ್ದೇವೆ. ಈ ಸಾವು ಯಾರಿಗೂ ಬರಬಾರದಾಗಿತ್ತು. ಇಂತಹ ಸಾವು ಬರಬಾರದಾಗಿತ್ತು. ಇದಕ್ಕಾಗಿ ನಾವೆಲ್ಲರೂ ದುಃಖಪಡುತ್ತೇವೆ. ಹುಟ್ಟಿದಂಥ ಪ್ರಾಣಿ ಸಾಯುವಂಥಾದ್ದು ನಿಶ್ಚಿತ. ಹುಟ್ಟು ಸಾವು ಎನ್ನುವುದು ನಾಣ್ಯದ ಎರಡು ಮಗ್ಗುಲಗಳು, ನಾವೆಲ್ಲರೂ ಹುಟ್ಟಿರತಕ್ಕಂಥವರು ನಾವು ಯಾವತ್ತು ಹುಟ್ಟುತ್ತೇವೆ ಎಂದು ಅಗ್ರಿಮೆಂಟ್ ಮಾಡಿ ಹುಟ್ಟಿ ಬಂದಿಲ್ಲ. Birth is an accidental. Death is also accidental. ಆದರೆ ಯಾವ ರೂಪದಲ್ಲಿ ಆಯಿತು ಎನ್ನುವುದರ ಬಗ್ಗೆ ನಮಗೆಲ್ಲರಿಗೂ ಚಿಂತನೆ ಬಂದಿರುವುದರ ಬಗ್ಗೆ ಯೋಚನೆ ಮಾಡಿದ್ದೇವೆ. ಇದು ಆಗಬಾರದಾಗಿತ್ತು ಎಂದು ಎಲ್ಲರೂ ದುಃಖಿಸಿದ್ದೇವೆ. ಇದರಲ್ಲೇನು ಬರೇ ರೂಲಿಂಗ್‌ನವರು ಮಾತ್ರ ದುಃಖ ಮಾಡುತ್ತಾರೆ, ವಿರೋಧ ಪಕ್ಷದವರು ಜಾಸ್ತಿ ದುಃಖ ಮಾಡುತ್ತಾರೆ ಎಂದು ಇದು ಪ್ರಶ್ನೆ ಅಲ್ಲ. Even my opposition, which i call them a Government-in-waiting-opposition is a Government-in-waiting. I do respect you. ಏಬಲ್ ಆಗಿ ನಿಮ್ಮ ಕೇಸನ್ನು ಆರ್ಗ್ಯುಮೆಂಟ್ ಮಾಡಿರತಕ್ಕದ್ದನ್ನು ನಾನು ಕೇಳಿದ್ದೇನೆ, ಪ್ರೆಸೆಂಟ್ ಮಾಡಿದ್ದೇನೆ. ಆದರೆ ಈ ವಿಚಾರವನ್ನು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ನನಗೇನು ಗಮನಕ್ಕೆ ಬರುತ್ತದೆ ಎಂದರೆ ಹಲವಾರು ಇಶ್ಯುಗಳನ್ನು ಬಹುಶಃ ಮುಂದಿನ ಪೀಳಿಗೆಗೆ ಬದಲಾವಣೆ ಮಾಡುವಂಥಾದ್ದಕ್ಕೆ ನಾವು ಸಜೆಶನ್ಸ್‌ಗಳನ್ನು ಕೊಡಲಿಲ್ಲ ಎನ್ನುವಂಥಾದ್ದು ನನ್ನ ಮನಸ್ಸಿಗೆ ನೋವಿದೆ. ಆಫ್ಟರ್‌ಆಲ್ ಇದೊಂದು ಸಾವಾಗಿರತಕ್ಕಂಥಾದ್ದು. ಆದರೆ ನಾಗಪ್ಪನವರ ದುರಂತ ಮರಣವನ್ನು ಯಾರೇನೂ ಬಯಸಿರಲಿಲ್ಲ. ಬಹುಶಃ ನಾನು ಮುಖ್ಯಮಂತ್ರಿಯಾಗಬೇಕು ಎಂದು ಅಥವಾ ನಾವುಗಳು ಅದನ್ನು ಮಾಡಬೇಕು ಅಂತಾನೋ ಈ ತರಹ ಜನರನ್ನು ಸಾಯಿಸಿ ಆಳಬೇಕೆಂದು ಹುಚ್ಚೇನೂ ಇಲ್ಲ. ಯಾವುದೇ ಡೀಸೆಂಟ್ ಆಗಿರತಕ್ಕಂಥ civilized ಸರ್ಕಾರ ಜನರನ್ನು ಕೊಂದು ರಕ್ತ ಹೀರಿ

ಬದುಕುವಂಥಾದ್ದು It is not a democratic Government. It can only be a dictatorial Government. ರಕ್ತಪಾತದಿಂದ ರಾಜ್ಯಭಾರ ನಡೆಯತಕ್ಕದ್ದು we will see in Military Government as well as dictatorial ಡೆಮಾಕ್ರೆಟಿಕ್ ಸೆಟ್‌ಅಫ್‌ನಲ್ಲಿ ಇದನ್ನು ನಾವು ಎಲ್ಲೂ ಕೂಡ ನೋಡುವುದಿಲ್ಲ. ಆದ್ದರಿಂದ ಯಾವುದೇ ಡೆಮಾಕ್ರಸಿ ಸರ್ವೈವ್ ಆಗಬೇಕಾದರೆ ಜನಗಳಿಂದ ಜನರಿಗೋಸ್ಕರ ಇರತಕ್ಕಂಥ ಈ ಸರ್ಕಾರದಲ್ಲಿ ಜನರನ್ನು ತುಳಿದು ಮಾಡುವಂಥಾದ್ದು ಏನಿದೆ? ನೀವು ಅನೇಕ ಸಲ ಆಪಾದನೆ ಮಾಡಿದ್ದೀರಿ. ನಾಗಪ್ಪನವರ ಮರಣಕ್ಕೆ ಸರ್ಕಾರವೇ ಪೂರ್ಣ ಹೊಣೆ-ಹೊಣೆ ಎನ್ನತಕ್ಕಂಥ ಮಾತನ್ನು ಅದರಲ್ಲೂ ನಮ್ಮ ನೆಚ್ಚಿನ ಮುಖ್ಯಮಂತ್ರಿಗಳ ಬಗ್ಗೆ ಕೆಲವು ಆರೋಪಗಳನ್ನು ಮಾಡಿದ್ದಾರೆ. ನಾನು ಒಂದು ಮಾತನ್ನು ಕೇಳಬೇಕಾಗುತ್ತದೆ. ಈ ಜನತ್ತಿಗೇ ಗೊತ್ತಿರತಕ್ಕಂಥ ನಿಯಮ ಇದು. No criminal is born, but he is made. ಯಾರೂ ತಾಯಿಯ ಹೊಟ್ಟೆಯಿಂದ ಬರತಕ್ಕಂಥ ಮಗು ನಾನು ಕ್ರಿಮಿನಲ್ ಆಗುತ್ತೇನೆ ಎಂದು ಹುಟ್ಟುವುದಿಲ್ಲ. ಆದರೆ ಸನ್ನಿವೇಶಗಳು, ಸಂದರ್ಭಗಳು, ನಮ್ಮ ನಮ್ಮ ಪರಿಣಾಮ, ಸುತ್ತ ಇರತಕ್ಕಂಥ ವಾತಾವರಣ ಇವು ಮನುಷ್ಯನನ್ನು ಕ್ರಿಮಿನಲ್ ಆಕ್ಟಿವಿಟೀಸ್ ಕಡೆಗೆ ಕರೆದುಕೊಂಡು ಹೋಗುತ್ತದೆಯೇ ಹೊರತು he is not made ಹಾಗಾದರೆ ವೀರಪ್ಪನ್ ಒಂದೇ ದಿವಸದಲ್ಲಿ ಕ್ರಿಮಿನಲ್ ಆಗಿ ಹೋಗಿಬಿಟ್ಟನಾ? ನಾವು ಇಲ್ಲಿ ಅಧಿಕಾರಕ್ಕೆ ಬಂದು ಮೂರೂವರೆ ವರ್ಷವಾಯಿತು. ಈ ಮೂರೂವರೆ ವರ್ಷದಲ್ಲಿ ವೀರಪ್ಪನ್ ತಯಾರಿ ಆಗಿಹೋದನೇನು? ವೀರಪ್ಪನ್ ಮಾಡಬಾರದ್ದನ್ನು ಮಾಡುವಂಥ ಪರಿಸ್ಥಿತಿ ಬಂದು ಇದಕ್ಕೆ ಹಿಂದೆ ಅಧಿಕಾರದಲ್ಲಿದ್ದಂಥ ಮಿತ್ರರು ಹಿಂದೆ ಇದ್ದಂಥ ಮುಖ್ಯಮಂತ್ರಿಗಳು, ಅಧಿಕಾರದಲ್ಲಿದ್ದಂಥ ಸ್ನೇಹಿತರುಗಳು They are also partly responsible. ಇದು ಇಷ್ಟರಮಟ್ಟಿಗೆ ಇಲ್ಲಿಯವರೆಗೆ ಎಳೆದುಕೊಂಡು ಬರಬೇಕಾದರೆ All we have contributed. ಇದರಲ್ಲಿ ಎರಡು ಮಾತೇ ಇಲ್ಲ. ಇದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥ ವಿಚಾರ. ಮೊನ್ನೆ ನಮ್ಮ ದೇಶದ ಒಬ್ಬರು ಮಾಜಿ ಪ್ರಧಾನಮಂತ್ರಿಗಳಾಗಿದ್ದವರು ಪತ್ರಿಕೆಯಲ್ಲಿ ಹೇಳಿಕೆ ಮಾಡಿದ್ದನ್ನು ನಾನು ಓದಿದ್ದೇನೆ. ಅದು ಏನಪ್ಪ ಎಂದರೆ ನಾನೇ ಮುಖ್ಯಮಂತ್ರಿಯಾಗಿದ್ದರೆ ಹಿಡಿದುಬಿಡುತ್ತಿದ್ದೆ ಎಂದು ಇವರೇ ಆಗಿದ್ದರಲ್ಲಪ್ಪ, ಯಾಕೆ ಹಿಡಿಯಬಾರದಿತ್ತು? ಇವರೇ ಇದ್ದರಲ್ಲಾ This is not the way of democratic statesmanship discussion. ನಾವು ಇದ್ದಾಗ ಫೇಲ್ಯೂರ್ ಆಗಿರುವುದು ನಿಜ We wish the present Government should catch him; the present Government should hang him. ಎನ್ನತಕ್ಕಂಥ ಧಾಟಿಯಲ್ಲಿ ಹೇಳಬೇಕೇ ಹೊರತು if you are a true statesman. ನಾನೇ ಆಗಿದ್ದರೆ ಹಿಡಿಯುತ್ತಿದ್ದೆ, ಶೂಟ್ ಮಾಡಿಬಿಡುತ್ತಿದ್ದೆ ಅಂದರೆ ನಾವು ನಿಮ್ಮನ್ನು ತಡೆದಿದ್ದೇವೇನು? ಹಿಡಿಯಬೇಡ, ಕೊಲ್ಲಬೇಡಿ ಅಂತ ಹೇಳಿದ್ದೇವೇನು? ಇದು ನಮ್ಮ ತಪ್ಪಲ್ಲ. ಈ ಸಂದರ್ಭದಲ್ಲಿ ಈ ವಿಚಾರ ಬಂದಾಗ ಹೀಗೆಲ್ಲಾ ಮಾತನಾಡಿದಾಗ ಏಕೆ ಹೀಗೆ ಹೇಳುತ್ತಾರೆ ಎಂದು ನನ್ನ ಮನಸ್ಸಿಗೆ ಬರುತ್ತದೆ. ಮಾನ್ಯ ಸಭಾಧ್ಯಕ್ಷರೇ, ನಮ್ಮ ನಾಗಪ್ಪನವರ ಬಗ್ಗೆ ಚರ್ಚಾಮನೆಯಾದ ಇಲ್ಲಿ ಚರ್ಚೆಯಾಗಿದೆ, ಬಹಳ ಚೆನ್ನಾಗಿ ಚರ್ಚೆ ಮಾಡಿದ್ದಾರೆ. the Government-in-waiting ಇದು ಒಂದು ಪೋರ್ಶನ್. ಎಲ್ಲರೂ ಇದ್ದರೆ ಬಹಳ ಚೆನ್ನಾಗಿ ಇರುತ್ತದೆ ಎಂದು ನಾವು ಆಸೆಪಟ್ಟಿದ್ದೆವು. ಜನಪ್ರತಿನಿಧಿಗಳಾದ ನಮಗೆ ಜನತೆಯೇ ಪ್ರಭುಗಳು,

ಅವರ ಪರವಾಗಿ ವಕಾಲತ್ತು ಹಾಕುವುದಕ್ಕೆ ನಾವು ಬಂದಿದ್ದೇವೆ. ಅವರ ಪರವಾಗಿ ನಾವು ವಕಾಲತ್ತು ಹಾಕುವುದಿಲ್ಲ ಎಂದರೆ ಮತ್ತೆ ಯಾರ ಪರ ನಾವು ವಕಾಲತ್ತು ಹಾಕುವುದು? ಹಾಗಾದರೆ ನಾವು ಇಲ್ಲಿ ಬಂದು ಮಾಡುವುದು ಏನಿರುತ್ತದೆ? ಚರ್ಚೆ ಮನೆಯಲ್ಲಿ ಅಲ್ಲದೆ, ಮಾತಿನ ಮನೆಯಲ್ಲಿ ಅಲ್ಲದೆ, ಮತ್ತೆಲ್ಲಿ ಹೇಳಬೇಕು? ಇಲ್ಲಿ ವಿಚಾರ ಮನತನ ಆಗಬೇಕು, ಚಿಂತನೆ ಆಗಬೇಕು. ಅದು ಆಗಲಿಕ್ಕಾದರೂ ಇಲ್ಲಿ ಅವಕಾಶ ಇಲ್ಲದೆ ಕೆಲವು ಜನ ಮಿತ್ರರು ನಮ್ಮನ್ನು ಬಿಟ್ಟು ಅವರ ಗೈರುಹಾಜರಿಯಲ್ಲಿ ಚರ್ಚೆ ಮಾಡುವಂಥ ಸಂದರ್ಭ ಬಂದಿದೆ ಅಂತ ಹೇಳಿ ನನಗೆ ನೋವಾಗುತ್ತಿದೆ. ಬಹುಶಃ ಎಲ್ಲಾ ಮಿತ್ರರೂ ಕೂಡ ನನ್ನ ಈ ಅಭಿಪ್ರಾಯವನ್ನು ಶೇರ್ ಮಾಡುತ್ತಾರೆಂದು ನನಗನ್ನಿಸುತ್ತದೆ. At least, the present opposition friends, ಅವರಾದರೂ ಕೂಡ They are waiting people waiting Government. ಎಂದು ಹೇಳೋಣ, ಅವರು ಈ ಚರ್ಚೆಯಲ್ಲಿ ಭಾಗವಹಿಸಿ ಅನೇಕ ವಿಚಾರಗಳ ಬಗ್ಗೆ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಕೆಲವು ಇಶ್ಯೂಗಳಲ್ಲಿ ಉತ್ತರ ಸಿಕ್ಕಿಲ್ಲ ಎಂದು ಇದೆ. ಅದು ಏನು ಇಶ್ಯು ಎಂದು ತಮ್ಮ ಮುಂದಿಡುವುದಕ್ಕೆ ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿಯನ್ನು ಬೇಡುತ್ತೇನೆ. ನಮ್ಮ ಜಗತ್ತಿನ ಒಂದು ನಿಯಮ ಇದೆ. ಏನು ಮನುಷ್ಯ ಬದುಕಿದ್ದಾಗ ನಾವು ಜರಿಯುತ್ತೇವೆ. ಇದು ನನ್ನನ್ನೂ ಸೇರಿಸಿ ಹೇಳುವಂಥ ಮಾತು. I am not an exception to the argument. ಮನುಷ್ಯ ಬದುಕಿದ್ದಾಗ ಜರಿಯುತ್ತೇವೆ, ಸತ್ತನಂತರ ಹೊಗಳುತ್ತೇವೆ. ಇದು ಜಗತ್ತಿನಲ್ಲಿ ನಡೆಯುವಂಥ ಒಂದು ಸಾಮಾನ್ಯ ನಿಯಮ. ಕಲ್ಲನಾಗರ ಕಂಡರೆ ಹಾಲ ನೆರೆಯೆಂಬರಯ್ಯ ಎಂದು ಬಸವಣ್ಣನವರು ಹೇಳಿದ್ದಾರೆ. ನಿಜಹಾವನ್ನು ಕಂಡರೆ ಕೊಲ್ಲುತ್ತೇವೆ. ಅದು ಇರಲಿಕ್ಕೇ ನಾವು ಬಿಡುವುದಿಲ್ಲ. ಮರ ಸಿಕ್ಕಿದರೆ ಸುತ್ತುವರಯ್ಯ ಎಂದು ಆತ ಹೇಳುತ್ತಾನೆ. ಮರ ಕಂಡುಬಿಟ್ಟರೆ ಅದನ್ನು ಸುತ್ತುವುದು. ಅನೇಕ ಮರಗಳು ಇವೆ. ಮರ ಸುತ್ತಿದರೆ ಮಕ್ಕಳು, ಮರಿ, ಮದುವೆ ಆಗುತ್ತದೆ ಎಂದು ಏನೇನೊ ಇದೆಯಲ್ಲಾ, ಹಾಗೆ ಮರಗಳನ್ನು ಸುತ್ತುವುದು. ನೀರು ಎಲ್ಲಿಯಾದರೂ ಕಂಡಿತೆಂದರೆ, ಅದು ಪವಿತ್ರ ಬೆಳ್ಳಗಾಗಿರುತ್ತದೆ ಆ ನೀರಿನಲ್ಲಿ ಮುಳುಗಿದರೆ ಏನೋ ಪುಣ್ಯ ಬರುತ್ತದೆ ಸ್ವರ್ಗದ ಬಾಗಿಲು ತೆರೆಯುತ್ತದೆಯಂತೆ. ಹೀಗೆ ಏನೋ ಕಲ್ಪನೆಗಳು. ಹೀಗೆ ನಮ್ಮದೇ ಆದಂಥ ಒಂದು ಮಹಾ ಕಲ್ಪನೆಗಳನ್ನು ಜಗತ್ತಿನಲ್ಲಿ ಮಾಡಿಕೊಂಡಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. 'ಯಾರಿಗೆ ಯಾರುಂಟು ಎರವಿನ ಸಂಸಾರ' ಎನ್ನುವಂಥ ಮಾತನ್ನು ನಾನು ಜ್ಞಾಪಕಕ್ಕೆ ತರುವುದಕ್ಕೆ ಇಚ್ಛಿಸುತ್ತೇನೆ. 'ಯಾರಿಗೆ ಯಾರುಂಟು ಎರವಿನ ಸಂಸಾರ' ಎಂದು ಇದು ಪುರಂದರ ದಾಸರು ಹೇಳಿದ್ದು. ತಂಬೂರಿ ಹಿಡಿದುಕೊಂಡು ಅವಿದ್ಯಾವಂತ ಪುರಂದರದಾಸರು, ಕನಕ ದಾಸರು ಈ ಮಾತನ್ನು ಸ್ಪಷ್ಟವಾಗಿ ಹೇಳುತ್ತಾರೆ. ನಾನು ಕನಕದಾಸರು ಎಂದಾಗ ನಮ್ಮ ಕನಕದಾಸ ಮಂಡಳಿಯವರು ದಯವಿಟ್ಟು ಮಿಸ್ಟೇಕ್ ಮಾಡಿಕೊಳ್ಳಬಾರದು. ಅವನಂಥ ವಿದ್ಯೆ ಇಲ್ಲದೇ ಇರುವವರು ಯಾರಿಗೆ 'ಯಾರುಂಟು ಎರವಿನ ಸಂಸಾರ', ಎಂದರು. ನಾನು ಕೇಳಬೇಕಾಗುತ್ತದೆ, ನಾಗಪ್ಪನವರು ಸತ್ತು ಸ್ವರ್ಗಸ್ಥರಾಗಿದ್ದಾರೆ. ಯಾರಿಗೆ ಯಾರುಂಟಪ್ಪ ಈ ಸಂಸಾರದಲ್ಲಿ ಎಂದಾಗ, ನಾವೇನು ಅವರಿಗೆ ಇಂತಹ ಸಾವು ಬರಬೇಕು ಎಂದು ಆಸೆ ಪಟ್ಟಿದ್ದೆವಾ? ಇಲ್ಲ. It should never be happen like this. ಇದನ್ನು ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಜಗತ್ತಿನಲ್ಲಿ ಬಹಳ ಡೆಮಾಕ್ರೆಟಿಕ್

ಗವರ್ನಮೆಂಟ್‌ಗಳು ಇದ್ದಾವೆ. ಎಲ್ಲಾ ಕಡೆ ಕೂಡ Terrorism has become an off-shoot of our democratic system. ಇದು ಏಕೆ ಆಯಿತು ಎಂದು ಭಗವಂತನಿಗೇ ಗೊತ್ತು. ಪ್ರಜಾಸತ್ತೆಯಲ್ಲಿ ಭಯೋತ್ಪಾದನೆ ಒಂದು ಅಂಗವಾಗಿ ರೂಪುಗೊಂಡುಬಂದಿದೆ. ಅದು ನಮ್ಮ ಚುನಾವಣಾ ಪದ್ಧತಿಯಿಂದ ಬಂದಿರಬಹುದು, ಮತ್ತೊಂದು ವೀಕನೆಸ್‌ನಿಂದ ಬಂದಿರಬಹುದು. This is one of the weaknesses of democracy. ಜಗತ್ತಿನಲ್ಲಿ ಎಲ್ಲರೂ ಆಸೆ ಪಡತಕ್ಕಂಥ ಸರ್ಕಾರ ಎಂದರೆ ಡೆಮಾಕ್ರೆಟಿಕ್ ಗವರ್ನಮೆಂಟ್. ಅಂತಹ ಡೆಮಾಕ್ರೆಟಿಕ್ ಗವರ್ನಮೆಂಟ್‌ನಲ್ಲೂ ಅನೇಕ ನ್ಯೂನತೆಗಳು ಕಂಡುಬರುತ್ತವೆ. ಅದರಲ್ಲಿ ಇದೂ ಒಂದು. ಟೆರರಿಸಂ, ವಿನಾಕಾರಣ ಕೊಲ್ಲುವಂಥಾದ್ದು, ವಿನಾಕಾರಣ, ವಿಳಂಬ ಮಾಡುವುದು ಕರಪ್ಶನ್ ಏನು ಬೇಕಾದರೂ ಹೇಳಬಹುದು. It is a part of the contribution by the democratic system. ಇಲ್ಲಿ ಇದನ್ನು ಹೇಗೆ ಕಡಿಮೆ ಮಾಡಬಹುದು ಎನ್ನುವುದರ ಬಗ್ಗೆ ಚರ್ಚೆಯಾಗಬೇಕು. ನಾವು ಇಲ್ಲಿ ಹದಿನೈದು ದಿವಸ ಚರ್ಚೆಮಾಡಿದರೂ ಕೂಡ ನಾಗಪ್ಪನವರನ್ನು ಜೀವಂತ ತರುವುದಕ್ಕೆ ಬರುವುದಿಲ್ಲ. ಆದರೆ ಮುಂದೆ ಇಂತಹ ನಾಗಪ್ಪನವರಂಥ ಕೊಲೆಗಳು ಆಗದಹಾಗೆ, ನಿರಪರಾಧಿಗಳನ್ನು ಕೊಲ್ಲುವಂಥಾದ್ದು ಇದು ಎಲ್ಲೆಲ್ಲೋ ಆಗುತ್ತಿದೆ. ಗುಜರಾತಿನಲ್ಲಿ ಆಯಿತು, ಪ್ರಾಣಿಗಳು ಒಂದನ್ನೊಂದು ಕೊಲ್ಲುವುದಿಲ್ಲ. ಹುಲಿ ಹುಲಿಯನ್ನು ಕೊಲ್ಲುವುದಿಲ್ಲ, ಆನೆ ಆನೆಯನ್ನು ಕೊಲ್ಲುವುದಿಲ್ಲ, ಚಿರತೆ ಚಿರತೆಯನ್ನು ಕೊಲ್ಲುವುದಿಲ್ಲ, ಸಿಂಹ ಸಿಂಹವನ್ನು ಕೊಲ್ಲುವುದಿಲ್ಲ. ಆದರೆ ಮನುಷ್ಯ ಯಾವಾಗಲೂ ಅವನು ಅವನನ್ನೇ ಬೇಟೆ ಆಡುತ್ತಾ ಇರುತ್ತಾನೆ. ಸಿಲೋನ್‌ನಲ್ಲಿ ನೋಡಿ, ಅಲ್ಲಿ ಮನುಷ್ಯ ಮನುಷ್ಯನನ್ನೆ ಬೇಟೆಯಾಡುತ್ತಾನೆ. ಗುಜರಾತಿನಲ್ಲಿ ನೋದಿದ್ದೇವೆ. ಜಮ್ಮು-ಕಾಶ್ಮೀರದಲ್ಲಿ ಆಯಿತು. ಫಾಲೇಸ್ತೇನಿಯಾದಲ್ಲಿ ಮಾಡುತ್ತಿದ್ದಾರೆ, ಅಪಘಾನಿಸ್ತಾನದಲ್ಲಿ ಮಾಡುತ್ತಿದ್ದಾರೆ. ಇವತ್ತು ಪ್ರಾಣಿಗಳು ಕೊಲೆಮಾಡುತ್ತವೆಯೇನು? ಆದರೆ ಆ ಮನುಷ್ಯ ಮನುಷ್ಯನನ್ನೇ ಬೇಟೆಯಾಡತಕ್ಕಂಥ ಒಂದು ಕಠಿಣ ಪರಿಸ್ಥಿತಿಯನ್ನು ನಾವು ಇವತ್ತು ನೋಡುತ್ತಿದ್ದೇವೆ. This is a part of our off short of our democratic system. ಇದು ಇಲ್ಲಿ ನಮ್ಮ ಡೆಮಾಕ್ರೆಸಿಯನ್ನು ಯಾವ ರೀತಿ ತೆಗೆದುಕೊಂಡುಹೋಗಬಹುದು ಎನ್ನುವುದರ ಬಗ್ಗೆ ನಾವೆಲ್ಲರೂ ಕೂಡ ಸ್ವಲ್ಪ ಚಿಂತನೆ ಮಾಡಿದರೆ ಮತ್ತು ರಾಜ್ಯಶಕ್ತಿ ಎಂದು ಎನಿದೆ - The Government has got its own power. ಆ ಪವರ್ ಇವತ್ತು ಎಳೆದಾಟದಿಂದಾಗಿ ಹರಿದುಹೋಗಿದೆ. ನೀವು ಯಾರಾದರೂ ಸ್ವಲ್ಪ ಯೋಚನೆ ಮಾಡಿರಿ. The Governmental Power ಎಂದು ನಾವೇನು ಹೇಳುತ್ತೇವೆ ಆ ಪವರ್ ಹಂಚಿ ಹೋಗಿದೆ. ಅನೇಕ ಕಾರಣಗಳಿಂದ, ಅನೇಕ ದೃಷ್ಟಿಯಿಂದ ಅದು ಚೂರುಚೂರಾಗಿ ಹಂಚಿಹೋಗಿದೆ. Government as a whole. ಯಾರೇ ಆಗಿರಲಿ, ಬೇರೆಯವರಾಗಿರಲಿ, ಮತ್ತೊಂದಾಗಿರಲಿ ಈ ಹರಿದುಹೋಗಿರತಕ್ಕಂಥ ಪವರ್‌ನ್ನು ಒಗ್ಗೂಡಿಸಿ - the sovereign power of the State ಆ ರಾಜ್ಯಶಕ್ತಿ ಎನ್ನುವಂಥ ಮಾತನ್ನು ಏನು ಹೇಳುತ್ತೇವೆ, ಆ ರಾಜ್ಯಶಕ್ತಿಯನ್ನು ನಾವು ಗಟ್ಟಿ ಮಾಡದೇ ಇದ್ದರೆ ಇಂತಹ ವೀರಪ್ಪನ್‌ನಂಥವರು ಹುಟ್ಟುತ್ತಲೇ ಇರುತ್ತಾರೆ. ಇದು ಮುಗಿಯುವಹಾಗೇ ಇಲ್ಲ. ಇದು ಕೊನೆಯಾಗುವ ಹಾಗೇ ಇಲ್ಲಯೆಂಬ ಮಾತನ್ನು ಇವತ್ತು ಹೇಳಬೇಕಾಗುತ್ತದೆ. ಸನ್ಮಾನ್ಯ

ಅಧ್ಯಕ್ಷರೇ, ಈ ಚರ್ಚೆ ಸಂದರ್ಭದಲ್ಲಿ ಸಾವಾಗಿದೆ, ದುರಂತವಾಗಿದೆ, ಇದಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ. ಇದು ಆಗಬಾರದಾಗಿತ್ತು. ಇದರಲ್ಲಿ ಎರಡು ಮಾತು ಇಲ್ಲ. ಈ ಕೈ ನೂರೆಂಟು ದೇವರನ್ನು ಸೃಷ್ಟಿಮಾಡಬಲ್ಲದು. ಈ ಕೈ ಒಳ್ಳೆಯದನ್ನೂ ಮಾಡುತ್ತದೆ ಮತ್ತು ಕೆಟ್ಟದ್ದನ್ನೂ ಮಾಡುತ್ತದೆ. ಅಟಂಬಾಂಬ್‌ನ್ನು ಮಾಡುತ್ತದೆ, ಹೈಡ್ರೋಜನ್ ಬಾಂಬ್‌ನ್ನು ಮಾಡುತ್ತದೆ. ಆದರೆ ಒಬ್ಬ ಮನುಷ್ಯನಿಗೆ ಜೀವ ಕೊಡಲಿಕ್ಕೆ ಬರುವುದಿಲ್ಲ. ಆದರೆ ಜೀವ ತೆಗೆದುಕೊಳ್ಳುವುದಕ್ಕೆ ಏನು ಹಕ್ಕು ಇದೆ ನಮಗೆ? ಜೀವ ತೆಗೆದುಕೊಳ್ಳುವುದಕ್ಕೆ ನಮಗೆ ಹಕ್ಕು ಇಲ್ಲ ಅಂತಹ ಒಂದು ಪರಿಸ್ಥಿತಿ ಇಲ್ಲಿ ಇರಬೇಕಾದಾಗ ಏಕೆ ಕೊಲೆ ಮಾಡಬೇಕು? ಜೀವ ಕೊಡುವುದಕ್ಕೆ ಬರುವುದಿಲ್ಲವೆಂದ ಮೇಲೆ ಜೀವ ತೆಗೆದುಕೊಳ್ಳುವುದಕ್ಕೆ ಹಕ್ಕು ಎಲ್ಲಿದೆ? ಅವರು ಯಾರೇ ಆಗಿರಲಿ. ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಒಂದು ಕಾಲದಲ್ಲಿ ನಮಗೂ ನಿಮಗೂ ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಪೊಲಿಟಿಕಲ್ ಡಿಸ್‌ಕಷನ್ on ism ಮೇಲೆ ಆಗುತ್ತಿತ್ತು ideological basis ಮೇಲೆ ಆಗುತ್ತಿತ್ತು ನಾನೇ ರಾಜಕಾರಣದ ಮೇಲೆ ಈ ಒಂದು ಗಂಭೀರವಾಗಿ ವಿಚಾರ ಮಾಡಿದಂತಹ ಸಂದರ್ಭದಲ್ಲಿ ನ್ಯಾಷನಲ್ ಲೆವೆಲ್‌ನಲ್ಲಿ, ಸ್ಟೇಟ್ ಲೆವೆಲ್‌ನಲ್ಲಿ ವಿಂಗಡಣೆ ಮಾಡುತ್ತಿದ್ದುದ್ದು 4-5 ಭಾಗದಲ್ಲಿ. ಅದು ಹೇಗೆ ಎಂದು ಅಂದರೆ ಇವ ಲೆಫ್ಟಿಸ್ಟ್ ಎಂದು ಹೇಳುತ್ತಿದ್ದರು. ಯಾರಾದರೂ ಒಬ್ಬ ಮನುಷ್ಯನನ್ನು ಅಲ್ಲಿ ನೋಡಿದಾಗ ಅವನ ಚರ್ಚೆ ಮಾತನ್ನು ಕಂಡಾಗ he is a leftist I say. ಎಂದು ಹೇಳುತ್ತಿದ್ದರು. ಮತ್ತೊಬ್ಬನ್ನ ರೈಟಿಸ್ಟ್ ಎಂದು ಹೇಳುತ್ತಿದ್ದರು. ಕ್ಯಾಪಿಟಲಿಸ್ಟಿಕ್ ಎನ್ನುವಂತಹ ಒಂದು ಮಾತನ್ನು ಹೇಳುತ್ತಿದ್ದರು. ಇನ್ನಿಬ್ಬರನ್ನು ಇವನು ಎರಡಕ್ಕೂ ಅಲ್ಲಪ್ಪ ಸೆಂಟ್ರಿಸ್ಟ್ ಎಂದು ಹೇಳುತ್ತಿದ್ದರು. ಸೋಶಿಯಲಿಝಮ್ ಎಂದು ಹೇಳುತ್ತಿದ್ದರು. ಕಮ್ಯುನಿಸಂ ಎಂದು ಹೇಳುತ್ತಿದ್ದರು. This was the discussions on `isms', not on any other issues. ಈ ಇಜಂ ಮೇಲೆ ನಾವು ಚರ್ಚೆ ಮಾಡಿದಾಗ ಬಹಳ ಸಲ ಈ ಸತ್ಯ ಹೊರ ಬರುತ್ತದೆ. ಆದರೆ ಇವತ್ತು ಆ ಒಂದು ಪೊಲಿಟಿಕಲ್ ಐಡಿಯಲಾಜಿಕಲ್ ಥಿಯರಿ ಮೇಲೆ ಇವತ್ತು ನಾವು ಯಾರೂ ಇವತ್ತು ಚರ್ಚೆ ಮಾಡುವಂತಹ ಗೋಜಿಗೆ ಹೋಗುತ್ತಿಲ್ಲ. ಆ ಒಂದು ದೃಷ್ಟಿಕೋನದಲ್ಲಿ ನಾವು ಇವತ್ತು ಹರಿಯುತ್ತಲೇ ಇಲ್ಲ. ಇದು ಆಗಬಾರದು. ಇಲ್ಲಿ I would like to request my hon. members in the Government-in-waiting, opposition parties, to concentrate more on ideological discussions, ಎನ್ನತಕ್ಕಂಥ ವಿಚಾರವನ್ನು ಹೇಳುತ್ತೇನೆ. ಹೈಟ್‌ಟು protest ಎನ್ನುವ ಬಗ್ಗೆ ಎರಡು ಇಲ್ಲ ಮಾನ್ಯ ಉಪಾಧ್ಯಕ್ಷರೇ, ಡೆಮಾಕ್ರಸಿಯಲ್ಲಿ ಅಭಿಪ್ರಾಯವನ್ನು ಅದಮುವುದಕ್ಕೆ ಆಗುವುದಿಲ್ಲ Right to protest is allowed; right to speech is allowed. ನಮ್ಮದು ಒಂದು ಎಥಿಕ್ಸ್ ಕಮಿಟಿ ಎಂದು ಸ್ಪೀಕರ್ ಅಧ್ಯಕ್ಷತೆಯಲ್ಲಿ ಮಾಡಿಕೊಂಡಿದ್ದೇವೆ, ಅಲ್ಲೂ ಕೂಡ ನಾವು ಡಿಸ್‌ಕಸ್ ಮಾಡಿದ್ದೇವೆ. ಆಲ್ ಇಂಡಿಯ ಎಥಿಕ್ಸ್ ಕನ್‌ವನ್‌ಷನ್ ಆಯಿತು. ಆ ಕನ್‌ವೆನ್‌ಷನ್‌ಲ್ಲೂ ಕೂಡ ಡಿಸಿಷನ್ ಆಗಿದೆ. Right to protest is allowed; but it never says, you should stop the discussions or boycott the session or create some other problem in the discussion. It is not that ಇದರ ಬಗ್ಗೆ ನಾನು ವಿಷಾದವನ್ನು

ವ್ಯಕ್ತಪಡಿಸುವುದಕ್ಕೆ ನನ್ನ ಮನಸ್ಸು ನೋಯುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ಅಧ್ಯಕ್ಷರೇ, I would like to ask a few questions to my friends who are waiting in the Opposition Government. ನಾಗಪ್ಪನ ಕಗ್ಗಂಟ್ಟನ್ನು ಬಿಡಿಸಬೇಕಾಗಿತ್ತು ಬಿಡಿಸಿಲ್ಲ. ಇದನ್ನು ಹೇಗೆ ಹೇಳುವುದಕ್ಕೆ ಬರುತ್ತದೆ? ಇದು ಒಂದು ಪ್ರಶ್ನೆ ಹಾಕಿಕೊಳ್ಳೋಣ. ಎನ್ರಿ ನೀವೇನು ಮಾಡಲೇ ಇಲ್ಲವಲ್ಲಪ್ಪ ನಾಗಪ್ಪನನ್ನು ಬಿಡಿಸುವುದಕ್ಕೆ, ನೀವು ಮನಸ್ಸು ಮಾಡಿಬಿಟ್ಟಿದ್ದರೆ ಆಗಿ ಹೋಗುತ್ತಿತ್ತು ಅಲ್ರಿ ನೀವು ಮನಸ್ಸು ಮಾಡಿದ್ದರೆ ಅವರು ಜೀವಂತವಾಗಿ ಬಂದು ಬಿಡುತ್ತಿದ್ದರಲ್ಲಾ ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಾರೆ ನೀವು ಎಫರೆಟ್ಸ್ ನೋಡ್ರಿ. ಸೆಂಟ್ರಲ್ ಗೌರ್ನಮೆಂಟ್ ಜೊತೆಯಲ್ಲಿ ಡಿಸ್‌ಕಷನ್ ಮಾಡಲಿಲ್ಲವೇ ಚೀಫ್ ಮಿನಿಸ್ಟರ್? ಆ ಎಸ್ ಟಿ ಎಫ್ ನವರನ್ನು ಕರೆಸಲಿಲ್ಲವೇನು? ಎಸ್ ಟಿ ಎಫ್ ನವರು ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಬರಲಿಲ್ಲವೇನು? ಎಸ್ ಟಿ ಎಫ್ ನವರು ಆಕ್ಷನ್ ತೆಗೆದುಕೊಂಡರೆ ನಮಗೆ ತೊಂದರೆಯಾಗುತ್ತದೆ, ಪ್ರಾಣ ಹತ್ಯೆಯಾಗುತ್ತದೆ, ಭಯ ಆಗುತ್ತದೆ ಅದನ್ನು ಮಾಡಬೇಡಿ ಎಂದು ಹೇಳಿದವರು ಯಾರ್ರಿ? ನೀವೇನೇ ಹೀಗೆ ಎಲ್ಲಾ ಪ್ರಿಪರೇಷನ್ ಆಗಿದ್ದರೂ ಸಹ ಮತ್ತು ಈ ಒಂದು ಆಕ್ಷನ್ ನಾವು ವೀರಪ್ಪನ್ ಮೇಲೆ ತೆಗೆದು ಕೊಳ್ಳಬೇಕೆಂದು ಹೊರಟರೆ ನಮ್ಮ ಒಂದು ಗೌರ್ನಮೆಂಟ್ ಪ್ರಶ್ನೆ ಅಲ್ರಿ ಇದು ಮೂರು ಗೌರ್ನಮೆಂಟ್ will have to join together; Tamilnadu Government; Karnataka Government and Central Government. ಆ ಮೂರು ಸರ್ಕಾರಗಳು ಕೂಡ ಒಂದೇ ಮಿಡಿತದಲ್ಲಿ ಹೋದಾಗ ಮಾತ್ರ ಇದು ಆಕ್ಷನ್ ಸರ್‌ವೈವಲ್ ಆಗುತ್ತದೆಯೇ ಹೊರತು ಗುರಿ ಮುಟ್ಟುತ್ತದೆಯೇ ಹೊರತು ಒಬ್ಬರಿಂದ ಅಲ್ಲ ಎನ್ನುವ ಮಾತನ್ನು ತಿಳಿದುಕೊಳ್ಳಬೇಕು. ಆದ್ದರಿಂದ ಒಂದೇ ಒಂದು ನಮ್ಮ ಕೃಷ್ಣರವರ ಸರ್ಕಾರವೇ ಕಾರಣ ಎನ್ನತಕ್ಕಂಥ ಮಾತಲ್ಲಿ ಹೇಳುವಂತಾದ್ದರಲ್ಲಿ ತಿರುಳು ಇಲ್ಲ ಎನ್ನತಕ್ಕಂಥ ಮಾತನ್ನು ಅವರಿಗೆ ಹೇಳಬೇಕಾಗುತ್ತದೆ. The Central Government has to co-operate; They should give us more modern equipments. ನಮ್ಮ ಪೊಲೀಸಿನವರ ಹತ್ತಿರ ಅಷ್ಟೊಂದು ಮಾಡ್ರನ್ ಎಕ್ವಿಪ್‌ಮೆಂಟ್ಸ್ ಇಲ್ಲ. ನಮ್ಮ ಖರ್ಗೆಯವರು ಗೃಹ ಮಂತ್ರಿಗಳು ಇದ್ದಾರೆ. ನಮ್ಮಲ್ಲಿ ಇವತ್ತು ಮಾಡ್ರನ್ ಗನ್‌ಗಳು ಇಲ್ಲ. ನಾನು ಗೇಟ್‌ನಲ್ಲಿ ಬರಬೇಕಾದರೆ ಆ ಪೊಲೀಸಿನವರಿಗೆ ಕೇಳುತ್ತಿರುತ್ತೇನೆ. ಎಷ್ಟು ರೌಂಡ್ ಬರುತ್ತದಪ್ಪ ಇದು ಹೊಡೆಯುವುದಕ್ಕೆ ಅಂದರೆ ಇದು ಮೂರು ರೌಂಡ್ ಬರುತ್ತದೆಂದು ಅವನು ಹೇಳುತ್ತಾನೆ. ಆಗ ನಾನು 12 ರೌಂಡ್ ಗನ್ ಕೊಡುವುದಕ್ಕೆ ಗೃಹ ಮಂತ್ರಿಗಳಿಗೆ ಹೇಳುತ್ತೇನೆ ಸುಮ್ಮನೆ ಇರಪ್ಪ ಎಂದು ಹೇಳುತ್ತಿರುತ್ತೇನೆ ನಾನು. ಏಕೆಂದರೆ ಆ ಎಕ್ವಿಪ್‌ಮೆಂಟ್ ಬರುವುದು ಎಲ್ಲಿಂದ ಅಂದರೆ ಸೆಂಟ್ರಲ್ ಗೌರ್ನಮೆಂಟ್‌ನಿಂದ. It is not Karnataka Government alone can manufacture it. The central Government has to give more supporting equipments and everything, to tackle this terrorism. ಎನು ನಮ್ಮ ವೀರಪ್ಪನ್ ಇಶ್ಯೂ ಇದೆಯಲ್ಲಾ ಇದರ ಬಗ್ಗೆ ಸೇರಬೇಕಾಗುತ್ತದೆ. ಅವರು ತಮಿಳುನಾಡಿನವರಿಗೆ ಹೇಳಿ ಅವರು ಇದಕ್ಕೆ ಸಹಕಾರ ಮಾಡಬೇಕು ಅವರು ಇದಕ್ಕೆ ಸಹಕಾರ ಕೊಡಬೇಕು ಎನ್ನತಕ್ಕಂಥ ಒಂದು ವಿಚಾರ ಬಿಟ್ಟರೆ ಇಲ್ಲಿ ಒಬ್ಬರೇ ಮಾಡಿ ಎನ್ನುವ ಪ್ರಶ್ನೆಯೇ ಬರುವುದಿಲ್ಲ. After all, Government is a collective

body; it is a functional body ಇಲ್ಲಿ ವಿಧಾನ ಸೌಧ ಇದೆ. ವಿಧಾನ ಸೌಧ ಇದು ಒಂದು ರೂಮ್‌ನಲ್ಲಿ ಪವರ್ ಇದೆಯೇ ಏನು? ಒಂದು ರೂಮ್‌ನಲ್ಲಿ ಪವರ್ ಇಲ್ಲ. ಇಡೀ ವಿಧಾನ ಸೌಧದಲ್ಲಿರತಕ್ಕಂಥ ವಿವಿಧ ಇಲಾಖೆಗಳು, ವಿವಿಧ ಮಂತ್ರಿಗಳು, ಕಾರ್ಯದರ್ಶಿಗಳು, ಮುಖ್ಯಮಂತ್ರಿಗಳು, ಮಂತ್ರಿಗಳು, ಎಲ್ಲಾರೂ ಸೇರಿ ಅಧಿಕಾರವೇ ಹೊರತು ಬೇರೆ ಏನು ಇಲ್ಲ ಅಧಿಕಾರವು ಒಬ್ಬರ ಹತ್ತಿರ ಇಲ್ಲ ಇಲ್ಲಿ ಒಬ್ಬ ಮಾಡುವುದಕ್ಕೆ ಬರುವುದಿಲ್ಲ. ಈ ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಬಂದಾಗ ಎಲ್ಲೋ ಅಷ್ಟು ಇಷ್ಟು ತಡವಾಗಿರಬಹುದು, ಕೆಲವು ಎಡವಿರಬಹುದು, ತೊಂದರೆಯಾಗಿರಬಹುದು, ಇಲ್ಲ ಎನ್ನುವ ಮಾತನ್ನು ನಾನು ಹೇಳುವುದಿಲ್ಲ. After all, to err is human ಗೌರ್ನಮೆಂಟ್ ಅಂದ ತಕ್ಷಣ ಏನು ಅದೇನು ಸರ್ವಸ್ವವೇ? ಏನು ದೇವ ಮಾನವನಿಂದ ಬಂದಿರತಕ್ಕಂಥ ಗೌರ್ನಮೆಂಟ್ ಏನು ಇದು? ನಾವೂ ತಪ್ಪು ಮಾಡುತ್ತೇವೆ. ಸಮಾಜದಿಂದ ಬಂದಿರತಕ್ಕಂಥ ಜನ ನಾವು. ಸಮಾಜದಲ್ಲಿ ಏನು ಖಾಯಿಲೆಗಳು ಇವೆ ಆ ಎಲ್ಲಾ ಖಾಯಿಲೆಗಳು ನಮ್ಮ ಎಲ್ಲರ ಮೇಲೂ ಇವೆ ಇಲ್ಲಿ. ಅವು ಒಳ ಹೊಕ್ಕಿಕೊಂಡು ಕುಳಿತಿವೆ. ಅವುಗಳನ್ನು ನಾವು ಎಕ್ಸ್‌ಪ್ರೆಸ್ ಮಾಡುವಂತಿಲ್ಲ. ಆ ಪರಿಸ್ಥಿಯಿಲ್ಲಿ ಅವು ಕುಳಿತಿವೆ. We represent what it is in society. ಆದರೆ ಸುಮ್ಮಸುಮ್ಮನೆ ಬೇಕಾಬಿಟ್ಟಿ ಒಬ್ಬೊಬ್ಬರನ್ನೇ ಪಿನ್ ಪಾಯಿಂಟ್ ಮಾಡಿ ಗುರುಸ್ವಾಮಿಯಿಂದಲೇ ಆಯಿತು, ಇವನಿಂದಲೇ ಆಯಿತು ಎಂದು ಬಿಟ್ಟರೆ ಅದು ಹೇಗೆ ಸಾಧ್ಯ? How does your argument holds logic? ಇಲ್ಲಿ ಸ್ವಲ್ಪ ನಮ್ಮ ಮಿತ್ರರು ಯೋಚನೆ ಮಾಡುವಂಥಾದ್ದು ಬಹಳ ಮುಖ್ಯವಾಗಿತ್ತು ಎನ್ನತಕ್ಕಂಥಮಾತನ್ನು ನಾನು ಹೇಳಬೇಕಾಗುತ್ತದೆ. ಮತ್ತು ನಾನು ಇನ್ನೊಂದು ಇಶ್ಯೂವನ್ನು ಕೇಳಬೇಕಾಗುತ್ತದೆ. Is this issue politicalised? ನಾಗಪ್ಪ ಇಶ್ಯೂ ಪೊಲಿಟಿಕಲೈಜ್ ಆಯಿತೇ ಎನ್ನತಕ್ಕಂಥ ಒಂದು ಪ್ರಶ್ನೆ ನನ್ನ ಮುಂದೆ ನಿಲ್ಲುತ್ತದೆ. ಕೆಲವು ವರ್ಷಗಳ ಹಿಂದೆ ಎಲ್ಲೋ ಒಂದು ರೆಕಾರ್ಡ್ ಕೇಳಿದ್ದೇನೆ. ಬಹುಶಃ ಅದು ಭಕ್ತ ಕುಂಬಾರ ಎನ್ನತಕ್ಕಂಥ ಫಿಲಂದ್ದು ಇರಬೇಕೆಂದು ಕಾಣುತ್ತದೆ. ಅಲ್ಲಿ ಭಕ್ತ ಕುಂಬಾರ ಶಿವನನ್ನು ಜ್ಞಾಪಿಸಿಕೊಂಡು ಮಣ್ಣು ತುಳಿಯುತ್ತಾ ಇರುತ್ತಾನೆ. ಆಗ ಎಲ್ಲವೂ ಶಿವಮಯ, ಶಿವಮಯ ಎಂದು ಹೇಳುತ್ತಿರುತ್ತಾನೆ. ಈಗ ನನಗನ್ನಿಸುತ್ತದೆ ಎಲ್ಲವೂ ರಾಜಕೀಯ ಮಯ, ರಾಜಕೀಯ ಮಯ ಎಂದು ಆಗಿಬಿಟ್ಟಿದೆ ಎಂದು ಕಾಣುತ್ತದೆ. ಅಲ್ಲಿಗೆ ಬಂದು ಬಿಟ್ಟಿದೆ ಸಿಸ್ಟಂ. ಆ ಒಂದು ಪ್ರತಿಯೊಂದನ್ನು ರಾಜಕಾರಣ ದೃಷ್ಟಿಯಿಂದ ನೋಡುವಂತಹ ಒಂದು ಪರಿಪಾಠ ಬೆಳೆಸಿಕೊಳ್ಳತಕ್ಕಂಥಾದ್ದು ಇದು ಏನು ಅಂತಹ ಒಂದು ಉತ್ತಮ ಬೆಳವಣಿಗೆ ಆಗಲಾದರು ಎಂದು ಕಾಣುತ್ತದೆ. ಕೆಲವು ಎಕ್‌ನಾಮಿಕಲ್ ಇಶ್ಯೂಸ್ ಬಂದಾಗ ಎಕ್‌ನಾಮಿಕಲ್ ಆಗಿಯೆ ಅದನ್ನು ಚರ್ಚೆ ಮಾಡಬೇಕಾಗುತ್ತದೆ ಪೊಲಿಟಿಕಲ್ ಇಶ್ಯೂಸ್ ಬಂದಾಗ ಪೊಲಿಟಿಕಲ್ ಅಗಿ ಅಥಾರಿಟೇಟಿವ್ ಆಗಿದೇ ಹೇಳಬೇಕಾಗುತ್ತದೆ. ಅದನ್ನು ನೀವು ಮಿಕ್ಸ್ ಮಾಡಿ ಚೌಚೌ ಮಾಡುವುದರೊಳಗೆ ಅಷ್ಟೇನೂ ವೆಲ್ ಕಮ್ ಪ್ರಿಪರೇಷನ್ ಆಗಲಾರದು ಎನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ. ಇನ್ನೊಂದು ನಾಗಪ್ಪನವರನ್ನು ಬಿಡುಗಡೆ ಮಾಡುವುದರ ಬಗ್ಗೆ ಅನೇಕ ಜನ ನನ್ನ ಸ್ನೇಹಿತರು ನನ್ನ ಮಿತ್ರರು ಬಹಳಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಎಲ್ಲಿ ಲೋಪವಾಯಿತು ಎನ್ನುವಂತಾದ್ದರ ಬಗ್ಗೆ ಕೂಡ ಹೇಳಿದ್ದಾರೆ. ಆದರೆ ಶಾರ್ಟ್‌ಕಮಿಂಗ್ ಎಲ್ಲಿ ಬಂತು ಎನ್ನುವ

ಬಗ್ಗೆ ಅವರು ನಮಗೆ ಹೇಳಲೇ ಇಲ್ಲ. ಬಿಡಿಸಬೇಕು ಎನ್ನುವುದರಲ್ಲಿ ನಾವೂ ಇದ್ದೆವು ಅವರೂ ಇದ್ದರು ಎಲ್ಲರೂ ಇದ್ದೆವು. ಅದರಲ್ಲಿ ಏನು ಎರಡು ಮಾತು ಇಲ್ಲ. ಶಾರ್ಟ್ ಕಮಿಂಗ್ಸ್ ಎಲ್ಲಿ ಬಂತು ಸೆಕ್ಯುರಿಟಿನೇ ಬೇಡ ಎಂದು ಹೇಳುವಂತಹ ಒಂದು ಹಂತಕ್ಕೆ ಹೋಗಿತ್ತು. ಒಂದು ಹಂತದಲ್ಲಿ ಆಪರೇಷನ್ ಬಿಡಬೇಡ್ರಿ ಎಂದು ಆಯಿತು. ಒಂದು ಹಂತದಲ್ಲಿ ಇಂಟರ್‌ಫಿಯರ್ ಆಗಬೇಡ್ರಿ ಎಂದು ಆಯಿತು. ಒಂದು ಹಂತದಲ್ಲಿ ಅಪೋಜಿಷನ್‌ನವರು ಎಲ್ಲರೂ ಸೇರಿ ನೀವು ಏನೂ ಆಕ್ಷನ್ ತೆಗೆದುಕೊಳ್ಳಬೇಡಿ ಎಂದು ಹೇಳಿದರು. ಇನ್ನೊಂದು ಹಂತದಲ್ಲಿ ಯಾರಿಗೂ ತೊಂದರೆ ಕೊಡಬಾರದು ಆ ರೀತಿಯಲ್ಲಿ ಬಿಡುಗಡೆ ಮಾಡಬೇಕು ಎನ್ನತಕ್ಕಂಥ ವಿಚಾರಕ್ಕೆ ಬಂದು. ಕೊನೆಗೆ the conclusion was ಅವರೇ ನಮ್ಮನ್ನು ಏಕೆ ಇದನ್ನು ಮಾಡಿದಿರಿ? ಏಕೆ ಇದು ಆಯಿತು ಎನ್ನುವಂತಹ ಒಂದು ಪ್ರಶ್ನೆಯನ್ನು ಕೇಳುವಂತಹ ಒಂದು ಪರಿಸ್ಥಿತಿಗೆ ಬಂದು ಸಿಕ್ಕಿ ಹಾಕಿಕೊಂಡರು. ಮಾನ್ಯ ಉಪಾಧ್ಯಕ್ಷರೇ, ನಮ್ಮ ಪೊಲೀಸಿನವರೇನು ಯಾರಿಗೂ ಏನೂ ಕಡಿಮೆ ಇಲ್ಲ. ಹೊಡೆಯುವುದರೊಳಗೂ, ಅಥವಾ ಕ್ಯಾಚ್ ಮಾಡುವುದರಲ್ಲಿ ಏನೂ ಕಡಿಮೆ ಇಲ್ಲ. ಆದರೆ ಸ್ವಲ್ಪ ಅವರಿಗೆ ಪ್ರಾಕ್ಟೀಸ್ ಸಾಲದು ಎಂದು ಹೇಳುವುದಕ್ಕೆ ಆಗುವುದಿಲ್ಲ. ಪ್ರಾಕ್ಟೀಸ್ ಮಾಡುತ್ತಿದ್ದಾರೆ ಅವರು, ಎಲ್ಲೋ ಸ್ವಲ್ಪ ತಪ್ಪಾಗಿರಬಹುದು ಅದನ್ನು ನಾವು ಸರಿಪಡಿಸಿ ಕೊಳ್ಳುತ್ತೇವೆ. I think our Government is subject to correction; we are subject to correction sir. ಅದರಲ್ಲಿ ಎರಡು ಮಾತಿಲ್ಲ. ಆ ಒಂದು ಪೊಲೀಸ್ ಫೋರ್ಸ್ ಏನು ಇದೆ, ಕೆಪ್ಯಾಸಿಟಿ ಇಲ್ಲ ಎಂದು ಏನೂ ಇಲ್ಲ. ಮೊನ್ನೆ ಮೊನ್ನೆ ಒಂದು ಚಿಂತನೆ ಮಾಡಿದ್ದಾರೆ. ಸೆಂಟ್ರಲ್ ರಿಜರ್ವ್ ಪೊಲೀಸ್ ಎಂದು ತರಿಸಿ ಈ ವೀರಪ್ಪನ್ ಅನ್ನು ನ್ಯಾಬ್ ಮಾಡಬೇಕು ಎನ್ನತಕ್ಕಂಥ ಒಂದು ತೀರ್ಮಾನಕ್ಕೆ ಬಂದಿರತಕ್ಕಂಥಾದ್ದು ಒಂದು ಶುಭ ಸೂಚನೆ ಇದು. ಯಾರೂ ಕೂಡ ಈ ಜಗತ್ತಿನಲ್ಲಿ ಈ ವೀರಪ್ಪನ್ ಎಂಬ ಕ್ರಿಮಿನಲ್ ಅನ್ನು ಸಾಕಿಕೊಂಡು ರಾಜಕೀಯ ಮಾಡಬೇಕು, ಎಲೆಕ್ಷನ್ ಗೆಲ್ಲಬೇಕು ಅಧಿಕಾರಕ್ಕೆ ಬರಬೇಕು ಎನ್ನುವ ಹುಚ್ಚು ಯಾರಿಗೂ ಇರುವುದಿಲ್ಲ. ಆ ಹುಚ್ಚು ಏನಾದರೂ ಇದ್ದರೆ ಅವನು ಸೆಟಾಸಿಕ್ ಆಗಬೇಕಾಗುತ್ತದೆ. ಆದ್ದರಿಂದ ಆ ಒಂದು ಚಿಂತನೆ ಇರಲಾರದು ಎನ್ನತಕ್ಕಂಥಾ ಭಾವನೆ ನನಗೆ ಯಾವತ್ತೂ ಇದೆ. ಮತ್ತು ಜಂಟಿ ಕಾರ್ಯಕ್ರಮದ ಬಗ್ಗೆ ಕೂಡ ತಮಿಳುನಾಡಿನವರಿಗೆ ಅನೇಕ ಸಲ ನಮ್ಮ ಮುಖ್ಯಮಂತ್ರಿಗಳು ಅವರಿಗೆ ಹಸ್ತವನ್ನು ಕೊಟ್ಟಿದ್ದಾರೆ. ನಮಗೆ ನೀವು ಸಹಕಾರವನ್ನು ಮಾಡಿ. ನಮ್ಮ ಜೊತೆ ಜಾಯಿಂಟ್ ಆಪರೇಷನ್ ಮಾಡಿ ಬನ್ನಿ ಎಂದು ಹೇಳಿದರು. ಆದರೆ ಅನೇಕ ತೊಡರುಗಳಿಂದ ಅವರು ಅನೇಕ ಕಾರಣಗಳು ಕಾವೇರಿ ಇಶ್ಯೂ ತಂದು ಸಿಕ್ಕಿ ಹಾಕಿಸಿದರು. ಇನ್ನೇನೂ ಹೇಳಿದರು. ಕೊನೆಗೆ ಈ ಒಂದು ಆಪರೇಷನ್ ಅನ್ನು ಅಷ್ಟು ಆಕ್ಟೀವ್ ಮಾಡುವಂತಹ ಒಂದು ಅವಕಾಶ ಸಿಗಲಿಲ್ಲ ಎನ್ನತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಈಗ ತಮಗೆ ಗೊತ್ತಿರುವ ಹಾಗೆ, ಅಧ್ಯಕ್ಷರೇ,

ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೇ ಅವರು ಹೇಳುತ್ತಿರುವುದು ನೋಡಿದರೆ ಸರ್ಕಾರ ಕಾರ್ಯಾಚರಣೆ ಮಾಡುವುದೇ ನಮ್ಮ ನಿಲುವಾಗಿತ್ತು. ಸಂಧಾನದ ಪ್ರಶ್ನೆಯೇ ಇರಲಿಲ್ಲ ಬರೀ ನಮ್ಮ ಒತ್ತಾಯಕ್ಕೆ ಸಂಧಾನಕ್ಕೆ ಹೋಗಿ ನಾಗಪ್ಪನವರನ್ನು ಕಳೆದುಕೊಂಡೆವು ಎನ್ನುವ ತರಹ ಮಾತನಾಡುತ್ತಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಕಾಮಗೆರೆಗೆ ಬಂದಂತ ಪ್ರಥಮ

ಭೇಟಿಯಲ್ಲಿ ರಾಜಕುಮಾರ್‌ಗೆ ಯಾವ ನೀತಿಯನ್ನು ಅನುಸರಿಸಿದ್ದೇವೆಯೋ ಅದೇ ನೀತಿಯನ್ನು ಅನುಸರಿಸುತ್ತೇವೆಂದು ನಿಮ್ಮ ಮುಖ್ಯಮಂತ್ರಿಗಳೇ ಹೇಳಿದ್ದು ನಾವಲ್ಲ . ಕಾರ್ಯಾಚರಣೆ ಮಾಡುತ್ತೇವೆ ಎನ್ನುವುದೇ ನಿಮ್ಮ ನಿಲುವಾಗಿದ್ದರೆ ಆಗ ಪ್ರಶ್ನೆಯೇ ಬೇರೆ ಇತ್ತು.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೇ, ಆ ತರಹದ ಮಾತು ಅಡಿಲ್ಲ. We are for action. We are going to nab that fellow. We have to kill him also. ಅವನನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತೇವೆಯೇ ಹೊರತು ಅವನನ್ನು ಬಿಟ್ಟು ಬಿಡ್ರಿ ಎಂದು ಹೇಳುವಂತಹ ಪ್ರಶ್ನೆ ಬರುವಂತೆ ಇಲ್ಲ. ನಮ್ಮ ಮಹದೇವ್ ಪ್ರಸಾದ್ ಏಕೆ ಇದನ್ನು ಯೋಚನೆ ಮಾಡುತ್ತಾರೋ ನನಗೆ ಗೊತ್ತಿಲ್ಲ. We are not supporting Veerappan. Veerappan should be killed. ನಾಳೆ ದಿವಸ ವೀರಪ್ಪನ್ ನನ್ನನ್ನೇ ಹಿಡಿದುಕೊಂಡು ಹೋದ ನಿಮ್ಮನ್ನು ಹಿಡಿದುಕೊಂಡು ಹೋದ ಅವಾಗ ಇದೇ ರೋಗ ಬರುವುದಿಲ್ಲವೇನು? ಆದ್ದರಿಂದ ಸಪೋರ್ಟ್ ಮಾಡುವ ಪ್ರಶ್ನೆ ಎಲ್ಲಿ ಬಂತು? Why should the Hon'ble Chief Minister support him?

4.20 ಪಿ.ಎಂ

ಆ ಪ್ರಶ್ನೆ ಬರುವಹಾಗೆಯೇ ಇಲ್ಲ. ಇಲ್ಲೇ ಬರುವುದು ರಾಜಕೀಯಮಯವೋ, ರಾಜಕೀಯಮಯ ಎನ್ನುವುದು ಇದಕ್ಕೇ ಬರುವುದು. ಎಲ್ಲವೂ ಶಿವಮಯ, ಎಲ್ಲವೂ ರಾಜಕೀಯಮಯ ಎಂಬಂತಾಗಿದೆ. ಮಾನ್ಯಾ ಉಪಾಧ್ಯಕ್ಷರೇ, ನಮ್ಮ ಸರ್ಕಾರಕ್ಕೆ ಇಚ್ಛಾಶಕ್ತಿ ಇತ್ತು ಎನ್ನುವುದರ ಬಗ್ಗೆ ಎರಡು ಮಾತಿಲ್ಲ ಎಂಬ ಮಾತನ್ನು ಹೇಳಬೇಕಾಗುತ್ತದೆ. ನಾಗಪ್ಪ ನವರಿಗೆ ಬಂದಂತಹ ಸನ್ನಿವೇಶ ಮತ್ತೆ ಯಾರಿಗೂ ಬರಬಾರದು. ನಮ್ಮ ವೈರಿಗೂ ಕೂಡ ಬರಬಾರದು: ಶತ್ರುವಿಗೂ ಬರಬಾರದು. ಇದು ಎಲ್ಲರ ಇಚ್ಛೆ, ನಿಮ್ಮ ಇಚ್ಛೆ, ನಮ್ಮ ಇಚ್ಛೆ ಎಲ್ಲರ ಇಚ್ಛೆಯೂ ಇದೇ ಆಗಿತ್ತು. There is no compromise about it. ಇದರ ಬಗ್ಗೆ ಕ್ರಮ ಕೈಗೊಳ್ಳುವ ವಿಚಾರದಲ್ಲಿ ಸ್ವಲ್ಪ ತಪ್ಪಾಗಿರಬಹುದು. ಆದರೂ ಸಹ ಸರಿಪಡಿಸಿಕೊಂಡು ಮಾಡುತ್ತೇವೆಂಬ ಆಶ್ವಾಸನೆಯನ್ನು ನಿಮಗೆ ನಮ್ಮ ಮುಖ್ಯಮಂತ್ರಿಗಳು ಕೊಟ್ಟಿರುವುದನ್ನು ನಾನು ಈ ಸಂದರ್ಭದಲ್ಲಿ ಸ್ವಾಗತ ಮಾಡಬೇಕಾಗುತ್ತದೆ. ಈ ವೀರಪ್ಪನ್ ಹಿಡಿಯುವುದಕ್ಕೆ ಎರಡು ಕೋಟಿ ರೂಪಾಯಿಗಳನ್ನು ಡಿಕ್ಲೇರ್ ಮಾಡಿದ್ದಾರೆ. ಯಾರಾದರೂ ಮಾಹಿತಿಯನ್ನು ಕೊಟ್ಟರೆ ಎರಡು ಕೋಟಿ ಕೊಡುತ್ತೇವೆಂದು ಹೇಳಿದ್ದಾರೆ. ಮಾಹಿತಿಯನ್ನು ಕೊಟ್ಟರೆ ಹಿಡಿಯುತ್ತೇವೆ ಎಂಬ ಮಾತನ್ನು ಏಕೆ ಹೇಳಿದರು. ಸಿನ್ಸಿಯಾರಿಟಿ ಇಲ್ಲವೆಂದಿದ್ದರೆ ಹೇಳುತ್ತಿದ್ದರೇನು? ಇಲ್ಲವಲ್ಲಾ. ದುರಾದೃಷ್ಟವಾಶತ್ ಎರಡು ಕೋಟಿ ರೂಪಾಯಿಗಳನ್ನು ಪ್ರಕಟಣೆ ಮಾಡಿದ್ದು, ಸುತ್ತಮುತ್ತ ಇದ್ದಾರಲ್ಲಾ ಆ ಕಾಡಿನ ಜನ, ಆ ಟ್ರೈಬಲ್ ಪೀಪಲ್ ಅವರು, ಇವರು ಇದ್ದರಲ್ಲಾ, ಅವರಿಗೆ ಇದು ತಲುಪಲಿಲ್ಲ. ಅಲ್ಲಿ ಯಾರಿಗಾದರೂ ಹತ್ತು ಜನಕ್ಕೆ ಇದು ತಲುಪಿದ್ದರೆ, ಎರಡು ಕೋಟಿ ರೂ. ಸಿಗುತ್ತದೆ. ವೀರಪ್ಪನ್ ಕೊಡುವ 500 ರೂಪಾಯಿಗಳ ನೋಟಿಗೆ ನಾವೇಕೆ ಕೇರ್ ಮಾಡಬೇಕು, ಆ ಎರಡು ಕೋಟಿಗೆ ಹೊರಟು ಬಿಡುವಾ ಎಂದು ಆ ಎರಡು ಕೋಟಿಗೆ ಹೊರಟುಬಿಡುತ್ತಿದ್ದರು. ನಿಮಗೆ ಮಾಹಿತಿ ಕೊಡುತ್ತಿದ್ದರು, ಆದರೆ ಆ ಮಾಹಿತಿ ಅವರಿಗೆ ತಲುಪಿಲ್ಲ, ಅವರಿಗೆ ರೇಡಿಯೋ ಇಲ್ಲ, ನ್ಯೂಸ್

ಪೇಪರ್ ಇಲ್ಲ, ಕಮ್ಯುನಿಕೇಷನ್ ಇಲ್ಲ. ಹೀಗಾಗಿ ಎರಡು ಕೋಟಿ ರೂಪಾಯಿ ಆಸೆ ಅವರಿಗೆ ತಲುಪಲಿಲ್ಲ. ಇದು ಪ್ರಿಪರೇಷನ್ ಆಗಿದೆ, ಪ್ರಯತ್ನ ಆಗಿದೆ. ಆದರೆ ಆ ಗುರಿ ಸಾಧನೆ ಮಾಡುವುದರೊಳಗೆ ಸ್ವಲ್ಪ ವಿಫಲತೆಯನ್ನು ನಾವು ನೋಡುತ್ತಿದ್ದೆವೆಂಬ ಮಾತನ್ನು ಹೇಳುತ್ತಿದ್ದೇನೆ. ಆಗ ನಾನೊಂದು ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು): ಯಾವ ಯಾವ ಕೆಲಸ ತೆಗೆದುಕೊಳ್ಳಬೇಕೆಂಬುದನ್ನು ಹೇಳಿ ಹೋದ ತಕ್ಷಣ ಹಣ ಬಿಡುಗಡೆ ಮಾಡುತ್ತೇವೆಂಬ ಮಾತನ್ನು ಹೇಳಿ, ಮಾತು ಕೊಟ್ಟು ಬಂದಿದ್ದೇವೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಗುರುಸ್ವಾಮಿಯವರು, ನಾಗಪ್ಪ ಮತ್ತು ವೀರಪ್ಪನ್ ವಿಚಾರ ಮಾತನಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಬಂದ ಬಗ್ಗೆ ಹೇಳುತ್ತಿದ್ದಾರೆ. ಮಂತ್ರಿಗಳು ಇದುವರೆಗೆ ಎಲ್ಲಿದ್ದರು ಎಂದು ಕೇಳಬೇಕಾಗುತ್ತದೆ. ಮಂತ್ರಿಗಳು ಸದನದೊಳಗಡೆ ಇದ್ದರೋ ಇಲ್ಲವೋ ಎಂದು ಕೇಳಬೇಕಾಗುತ್ತದೆ.

ಶ್ರೀ ಸಿ.ಭೈರೇಗೌಡ: ವೀರಪ್ಪನ್ ಹಿಡಿದು ಕೊಟ್ಟವರಿಗೆ ಸರ್ಕಾರದವರು ಎರಡು ಕೋಟಿ ರೂಪಾಯಿಗಳನ್ನು ಕೊಡುವುದಾಗಿ ಪ್ರಕಟಣೆ ಮಾಡಿದ್ದು, ಅಲ್ಲಿಯ ಜನರಿಗೆ ತಲುಪಲಿಲ್ಲವೆಂದು ಅವರು ಹೇಳಿದರೆ, ಮಾನ್ಯ ಕಂದಾಯ ಮಂತ್ರಿಗಳು ಬರಗಾಲದ ಬಗ್ಗೆ ರಿಲೀಫ್ ಕಾಮಗಾರಿಗಳ ಬಗ್ಗೆ ಹೇಳುವುದಕ್ಕೆ ಹೊರಟಿದ್ದಾರೆ. ಇದರಿಂದ, ಸರ್ಕಾರ ಎಷ್ಟು ಎಚ್ಚರಿಕೆಯಿಂದ ಇದೆಯೆಂದು ಗೊತ್ತಾಗುತ್ತದೆ. ಇದಕ್ಕೆ ಏನು ಹೇಳುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರಿಗೆ, ನಿಮ್ಮನ್ನು ನೋಡಿದ ಕೂಡಲೇ ಕೋಲಾರ ಎಂದು ಬರಗಾಲ ನೆನಪಿಗೆ ಬರುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್: ಮಾನ್ಯ ಕಂದಾಯ ಸಚಿವರಿಗೆ ಬರಗಾಲದ ಭೀಕರತೆ ಬಗ್ಗೆ ಎಷ್ಟೊಂದು ಚಿಂತನೆ ಇದೆಯೇನ್ನುವುದು ಗೊತ್ತಾಗುತ್ತದೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ನಾಗಪ್ಪನವರ ಹತ್ಯೆ ಬಗ್ಗೆಯೇ ಅವರುಗಳು ಮಾತನಾಡುತ್ತಿದ್ದಾರೆ. ಬರಗಾಲದ ಬಗ್ಗೆ ಅವರಿಗೆ ಚಿಂತನೆ ಇಲ್ಲ.

ಶ್ರೀ ಸಿ.ಭೈರೇಗೌಡ: ಅವರು ಆರಾಮವಾಗಿ ನಿದ್ರೆ ಮಾಡುತ್ತಿದ್ದಾರೆ. ಏನೋ ಕಿವಿ ಮೇಲೆ ಬಿತ್ತು. ಗಾಬರಿಯಿಂದ ಎದ್ದು ಉತ್ತರ ಹೇಳಿಬಿಟ್ಟರು.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಉಪಾಧ್ಯಕ್ಷರೇ, ಏಕೋ ಇದ್ದಕ್ಕಿದ್ದ ಹಾಗೆ ವಿಷಯ ಬರಗಾಲದ ಕಡೆ ಹೊರಟು ಹೋಯಿತು, ಏಕೆ ಎನ್ನುವುದು ನನಗೆ ಗೊತ್ತಾಗಲಿಲ್ಲ. ಆದರೆ, ಏನೇ ಆಗಲೀ ಮನುಷ್ಯನನ್ನು ಆಸೆ ಆಮಿಷಗಳಿಗೆ ಒಡ್ಡಿಸಿದಾಗ, ಅನೇಕ ಮಾಹಿತಿಗಳನ್ನು ಕೊಡುತ್ತಾನೆ ಎನ್ನುವುದು ಒಂದು ಸೈಕಲಾಜಿಕಲ್ ಥಿಯರಿ, ಅದನ್ನು ನಮ್ಮ ಸರ್ಕಾರ ಪ್ರಯೋಗ ಮಾಡಿದೆ, ಅದರಲ್ಲಿ ತಪ್ಪೇನು? ಸೂಕ್ತವಾದ ಮಾಹಿತಿಯನ್ನು ಕೊಟ್ಟವರಿಗೆ ಎರಡು ಕೋಟಿ ಕೊಡುತ್ತೇವೆಂದು ಹೇಳಿದ್ದಾರೆ. Is it not an honest attempt; sincere attempt ಎನ್ನತಕ್ಕಂಥಾದ್ದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ನಾಗಪ್ಪನವರ ಹತ್ತಿರ ಕೆಲವು ಜನರು ಹೋಗಿದ್ದರು. ಪೊನ್ನಾಚಿ ಮಹದೇವಸ್ವಾಮಿ ಮತ್ತು ಇನ್ನಿಬ್ಬರು ಮಿತ್ರರು ಎರಡು ಸಲ ಹೋಗಿದ್ದರು

ಎಂದು ಹೇಳುತ್ತಾರಲ್ಲಾ, ಇವರು ನಮಗೆ ಏಕೆ ಇನ್‌ಫಾರ್ಮೇಷನ್ ಕೊಡಬಾರದಾಗಿತ್ತು? ಮಾಹಿತಿಯನ್ನು ಕೊಟ್ಟೂ ನಾವು ಹಿಡಿಯುವುದಿಲ್ಲವೆಂದು ಹೇಳಿದ್ದೇವೆಯೇ? ನಾವು ಆಕ್ಷನ್ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೇವೆಯೇ? It is not so.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ನಿಮಗೆ ಹೇಳಲಿಕ್ಕಾಗಲಿಲ್ಲ ಅಷ್ಟೆ. ಹೇಳಬೇಕಾದವರಿಗೆಲ್ಲಾ ಹೇಳಿ ಆಗಿದೆ.

ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಗೃಹ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಬಹುಶಃ ಅವರು ಉತ್ತರ ಕೊಡುವಾಗ ಹೇಳುತ್ತಾರೆ ಕೇಳಿ. ಅವರಿಗೆ ಇನ್‌ಫರ್ಮೇಷನ್ ಕೊಟ್ಟಿದ್ದರೆ, I don't think he lags behind in his responsibility. ನಮ್ಮ ಚೀಫ್ ಮಿನಿಸ್ಟರಿಗೂ ಇನ್‌ಫರ್ಮೇಷನ್ ಗೊತ್ತಿದ್ದರೆ ಬಹುಶಃ ಅವರು ಆಕ್ಷನ್ ತೆಗೆದುಕೊಳ್ಳುತ್ತಿದ್ದರು. ಈಗ ಕೇಲೆ ಮಾಡಿ ಏನು ಮಾಡಬೇಕಾಗಿತ್ತು ಹೇಳಿ. ನಾಗಪ್ಪನವರ ಕೊಲೆಯಿಂದ ಸರ್ಕಾರಕ್ಕೆ ಆಗಬೇಕಾದ ಲಾಭ ಏನು?

ಶ್ರೀ ವಿ.ಎಸ್.ಗುರುಸ್ವಾಮಿ: ಈ ತರಹದ ಪ್ರಶ್ನೆ ಅಲ್ಲ. Sincere attempt has been made.

ಶ್ರೀ ಎ.ಆರ್.ಕೃಷ್ಣಮೂರ್ತಿ : ಚೆನ್ನಾಗಿ ವಕಾಲತ್ತು ವಹಿಸುತ್ತಿದ್ದೀರಿ ತಾವು ಈ ತರಹ ಮಾತುಗಗಳಿಗೆ ಬಹಳ ಚೆನ್ನಾಗಿ ವಕಾಲತ್ತು ವಹಿಸುತ್ತಿದ್ದೀರಿ ತಾವು. ಅದರಲ್ಲಿ ಎರಡು ಮಾತು ಇಲ್ಲ. ವೀರಪ್ಪನ್ ಹುಟ್ಟಿದ ಕಾಲದಿಂದ ಇಲ್ಲಿಯವರೆಗೆ, ನನಗೆ ಯಾರೋ ಒಬ್ಬರು ಪೋಲೀಸು ಆಫೀಸರು ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ 16 ಜನ ಡಿ.ಜಿ.ಪಿ. ಆಗಿದ್ದಾರಂತೆ, ಇವತ್ತು ಒಬ್ಬರು ಡಿ.ಜಿ.ಪಿ.ಯಿಂದ ಇದು ತಪ್ಪಾಯಿತೇನು? ಒಬ್ಬರೇ ಡಿ ಜಿ ಪಿ ತಪ್ಪು ಮಾಡಿದರೇನು? Some police information has come to me. 16 DGP's have been changed; from the begining; not now. ಇದಕ್ಕೆ ಜವಾಬ್ದಾರರು ಯಾರು? ವ್ಯವಸ್ಥೆಯೇ ಕಾರಣ. ನಮ್ಮಲ್ಲಿ ಏನಿವತ್ತು ಅವ್ಯವಸ್ಥೆ ಅಥವಾ ಕುವ್ಯವಸ್ಥೆ ಇದೆ ಎಂದು ಹೇಳುತ್ತೇವೆ, ಆ ವ್ಯವಸ್ಥೆಯ ಕೂಸೇ ವೀರಪ್ಪನ್. ಇಂತಹ ವೀರಪ್ಪನ್ ಒಳಗೂ ಇದ್ದಾರೆ, ಹೊರಗೂ ಇದ್ದಾರೆ, ಅನೇಕ ಕಡೆ ಕಾಣುತ್ತಿದ್ದಾರೆ, ಕಾಣುವುದಿಲ್ಲ. ಅದು ಬೇರೆ ಮಾತು. ಈ ವ್ಯವಸ್ಥೆಯನ್ನು ನಾವು ಬಲಿ ಹಾಕದಿದ್ದರೆ, ನನಗನ್ನಿಸಿದಹಾಗೆ ನಾವೆಲ್ಲಾ ಬಲಿಪಶು ಆಗುತ್ತೇವೆ, ನಾವೆಲ್ಲಾ ತೆರಿಗೆ ಕಟ್ಟಬೇಕಾಗುತ್ತದೆ. ಅದಕ್ಕೆ ನಾವು ಬಲಿ ಕೊಡಬೇಕಾಗುತ್ತದೆಂಬ ಮಾತಿನಲ್ಲಿ ಎರಡು ಇಲ್ಲ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಚಿಪಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ನನಗೆ ಒಂದು ಇಷ್ಯೂ ಒಂದು ಪ್ರಶ್ನೆ ನನ್ನನ್ನು ಕಾಡುತ್ತಿದೆ ಎನ್ನುವುದನ್ನು ಸಭೆಯ ಮುಂದೆ ಇಟ್ಟರೆ ಬಹುಶಃ ತಪ್ಪಾಗಲಾರದು. Who is responsible for this episode? ಈ ನಾಗಪ್ಪನವರ ಎಪಿಸೋಡ್ ಇದೆಯಲ್ಲಾ, ಇದಕ್ಕೆ ಯಾರು ಜವಾಬ್ದಾರರು? ನಾವೆಲ್ಲಾ collectively we hold responsibility; mind you. ಯಾರ ಒಬ್ಬರದ್ದೂ ಅಲ್ಲ. ಹಿಂದೆ ನಾಲ್ಕೋ ಮೂರೋ ಗವರ್ನಮೆಂಟ್‌ಗಳು ಇದ್ದವಲ್ಲಾ, ಯಾರು ಯಾರೋ ಮುಖ್ಯಮಂತ್ರಿಗಳು ಇದ್ದರಲ್ಲಾ ಅವರೂ ಕಾರಣಕರ್ತರು, ಅವರು ಕಾಂಟ್ರಿಬ್ಯೂಷನ್ ಇದೆ. ಅವರೋ ಇವರೋ

ಯಾರಾದರೂ ಇರಲಿ. But it is an off-shoot of our system ನಮ್ಮ ವ್ಯವಸ್ಥೆಯ ಪ್ರತಿಬಿಂಬ ನಾವಿಲ್ಲಿ ಕಾಣುತ್ತಿದ್ದೇವೆ. ಇದನ್ನು ಬದಲಾಯಿಸುವಂಥ ಕಾರ್ಯಕ್ರಮವನ್ನು ಹಾಕಿಕೊಳ್ಳದಿದ್ದರೆ ಪೂರ್ಣವಾಗಿ ಎಲ್ಲರೂ ತೊಂದರೆ ಪಡಬೇಕಾಗುತ್ತದೆ. ಮತ್ತು ನಾವೆಲ್ಲರೂ ತೆರಿಗೆ ಕಟ್ಟಬೇಕಾಗುತ್ತದೆಂಬ ಮಾತನ್ನು ಹೇಳಬೇಕಾಗುತ್ತದೆ. ಇನ್ನೊಂದು ಪ್ರಶ್ನೆ ಏನೆಂದರೆ, what is the motive behind the murder of Nagappa? ಯಾರಾದರೂ ಅಡ್ವೋಕೇಟ್ಸ್ ಆಗಿರತಕ್ಕಂಥವರು, ಪ್ರಾಕ್ಟೀಸ್ ಮಾಡುವವರಿಗೆ ಗೊತ್ತಿರುತ್ತದೆ. Criminal actions, always motivated. ಅಲ್ಲಿ ನಾವು ಚರ್ಚೆ ಮಾಡುವಂಥಾದ್ದು ಏನೆಂದರೆ, ಏನು ಮೋಟೀವ್, ಏಕೆ ಮರ್ಡರ್ ಮಾಡಿದ? ಆ ಮೋಟೀವ್ ಏನು ಎಂಬುದನ್ನು ಇಲ್ಲಿ ಯೋಚನೆ ಮಾಡಿದಾಗ, ನಿಜವಾಗಿಯೂ ವೀರಪ್ಪನ್ ನಾಗಪ್ಪನನ್ನು ಹಿಡಿದುಕೊಂಡು ಹೋಗಿದ್ದು ಏಕೆಂದರೆ ದುಡ್ಡಿಗೋಸ್ಕರ ಅಥವಾ ಮತ್ತೊಂದು ಕ್ಕೋಸ್ಕರ. ಇನ್ನೇನು ಅವನು ಸರ್ಕಾರವನ್ನು ವಜಾ ಮಾಡಿಸುವುದಕ್ಕಾಗುತ್ತಾ ಇರಲಿಲ್ಲ. ಅವನು ನಮ್ಮನ್ನೆಲ್ಲಾ ಮಾಜಿ ಮಾಡುವುದಕ್ಕಾಗುತ್ತಾ ಇರಲಿಲ್ಲ. ಆದರೆ, ಅವನು ದುಡ್ಡನ್ನು ಹೆಚ್ಚು ತೆಗೆಯುವುದಕ್ಕೆ ಪ್ರಯತ್ನ ಮಾಡಿದ್ದಾನೆಯೇ ಹೊರತು, ಇವರನ್ನು ಕೊಂದುಬಿಟ್ಟ ತಕ್ಷಣ ಅವನಿಗೆ ದುಡ್ಡು ಬರುವುದಿಲ್ಲ. ಕಾಡಿನಲ್ಲಿರತಕ್ಕ ವೀರಪ್ಪನ್‌ಗೆ ಯಥೇಚ್ಛವಾಗಿ ಹಣ ಬೇಕು. ಅವರು ಬರೀ 25 ಸೇರು ರಾಗಿ ತರುವುದಕ್ಕೆ 500 ರೂಪಾಯಿಗಳನ್ನು ಕೊಡುತ್ತಾನಂತೆ. 10 ಕೆ.ಜಿ.ಸಕ್ಕರೆ ತರಬೇಕಾದರೆ 500 ರೂಪಾಯಿ ನೋಟು ಕೊಡುತ್ತಾನಂತೆ. ಈ ನೋಟುಬೇಕು ಅಂತಲೇ ಅವನು ಮಾಡಿದ್ದು. ಆದರೆ, ಅದು ಆಗಲಿಲ್ಲ. ಸುಮ್ಮಸುಮ್ಮನೆ ಏಕೆ ಮರ್ಡರ್ ಮಾಡುತ್ತಾನೆ. Why? It is not our fault; it is the fault of our system. ಆದ್ದರಿಂದ, ಯಾರೋ ಒಬ್ಬರ ಮೇಲೆ ಆರೋಪ ಮಾಡುವುದು ತಪ್ಪು ಎಂಬ ಮಾತನ್ನು ಹೇಳಬೇಕಾಗುತ್ತದೆ. ಕೊನೇ ಮಾತು. ನಾಗಪ್ಪನವರ ಶವ ಸಿಕ್ಕಿದ ಜಾಗದಲ್ಲಿ ಕಾಟ್ರಿಜೆಸ್ ಸಿಕ್ಕಿತು ಎಂಬ ಮಾತನ್ನು ನಾವು ನೋಡಿದ್ದೇವೆ. ಕಾಟ್ರಿಜ್ಸ್ ಎಲ್ಲಿಯವು, ಯಾರದ್ದು ಎನ್ನತಕ್ಕಂಥಾದ್ದನ್ನು ನಮ್ಮ ವಿರೋಧಪಕ್ಷದ ಸನ್ಮಿತ್ರರು ಮತ್ತು ನಾಯಕರುಗಳೆಲ್ಲಾ ಹೈಲೈಟ್ ಮಾಡಿದ್ದಾರೆ. ಅದು ಎಲ್ಲಿಂದ ಬಂತು. ಅದರ ಮೇಕ್ ಏನು ಎಂಬುದು ಇನ್ನೂ ಗೊತ್ತಿಲ್ಲ. ಅದು ನೀಜಕ್ಕೂ ಕೂಡ ಆ ಒಂದು ಸರ್ಕಾರ ನಾವು ಮಾಡಿಲ್ಲ ಎನ್ನತಕ್ಕ ಮಾತು ಹೇಳಿದ್ದಾರೆ. ವೀರಪ್ಪನ್ ಸಹ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತಾನೆ. ನಾನು ಇಷ್ಟು ಜನ ಅಂದರೆ 112 ಅಥವಾ 113 ಜನರನ್ನು ಕೊಲೆ ಮಾಡಿದ್ದೇನೆ, ಆದರೆ ಆ ರೀತಿ ಕೊಲೆ ಮಾಡಿರುವವರ ಹೆಸರನ್ನೆಲ್ಲಾ ಹೇಳಿದ್ದೇನೆ. ನಾನೇನು hide and sick ಮಾಡಿಲ್ಲ. ಇವರನ್ನೂ ಮಾಡಿದ್ದರೆ, ಮಾಡಿದ್ದೆ ಎಂದು ಹೇಳುತ್ತಿದ್ದೆ. ಇಲ್ಲದೇಹೋದರೆ, ನಾನೇಕೆ ಟೇಪ್ ಕಳುಹಿಸಬೇಕಾಗಿತ್ತು. ಅದೂ ಮೂರು ದಿವಸಗಳವರೆಗೂ ಆ ಹೆಣವನ್ನು ಯಾವುದೇ ಪ್ರಾಣಿಗಳು ತಿನ್ನಬಾರದೆಂದು ರಕ್ಷಿಸಿ ಪವಿತ್ರತೆ ದೃಷ್ಟಿಯಿಂದಲೂ ಕೂಡ, ಹಿಂದೂ ಧರ್ಮದ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬಂದಿರುವವನು ಅವನು. ಇದು ಆಗಿದ್ದರೆ, ತಮಿಳುನಾಡು ವತಿಯಿಂದಲೇ ಹೊರತು, ಇದು ನಮ್ಮ ಸರ್ಕಾರದಿಂದ ಅಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಎಸ್ ಟಿ ಎಫ್ ನಿಂದ ಆಗಿದ್ದರೆ, ನಮ್ಮ ಮುಖ್ಯಮಂತ್ರಿಗಳು ಅವರು ಉತ್ತರದಲ್ಲಿ ವಿಷಾದವಾಗಿ ಹೇಳುವವರಿದ್ದಾರೆ. ನಾನು ಹೆಚ್ಚು ಹೇಳಬೇಕಾದ

ವಿಚಾರವಿಲ್ಲವೆಂದು ಹೇಳುತ್ತೇನೆ. ನಾಗಪ್ಪನವರ ದುರಂತ ಸಾವಿಗಾಗಿ ನಾನು ಬಹಳ ವಿಷಾದ ವ್ಯಕ್ತಪಡಿಸುತ್ತೇನೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ, ಪುನಃ ಇಂತಹ ಮರಿ ವೀರಪ್ಪನ್‌ಗಳು ಹುಟ್ಟಿಕೊಳ್ಳಬಾರದು. ಇಂತಹ ಸಾವು, ದುರಂತದಲ್ಲಿ ಯಾರಿಗೂ ಬರಬಾರದು. ಎಲ್ಲರೂ ಕೂಡ ಪೀಸ್‌ಫುಲ್ ಆಗಿ ಸಾಯಬೇಕೆಂದು ಇಚ್ಛಿಪಡುತ್ತೇವೆ. ಆ ಒಂದು ಪೀಸ್‌ಫುಲ್ ಸಾವು ಎಲ್ಲರಿಗೂ ಬರಬೇಕಾದ್ದು ಒಳ್ಳೆಯದು ಎಂದು ಆಸೆಪಡತಕ್ಕ ಈ ಜಗತ್ತಿನಲ್ಲಿ ಹಿಂಗಾಯಿತಲ್ಲ ಎಂಬ ಮರುಕದ ಮಾತನ್ನು ಹೇಳುತ್ತಾ ಶ್ರೀಮಾನ್ ನಾಗಪ್ಪನ್‌ವರ ಆತ್ಮಕ್ಕೆ ಶಾಂತಿ ಸಿಗಲಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ our Opposition, the Government-in-waiting, I would call them, opposition party is Government-in -waiting. ಅವರು ಏನೇನು ರೇಸ್ ಮಾಡಿದ್ದಾರೆ. ಅದಕ್ಕೆಲ್ಲಾ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಸವಿಸ್ತಾರವಾಗಿ ಉತ್ತರ ಕೊಡುವವರಿದ್ದಾರೆ. ಅವರಿಗೆ ಅವಕಾಶ ಮಾಡಿಕೊಟ್ಟು, ನಾನು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ಗುರುಸ್ವಾಮಿಯವರು ಇಷ್ಟು ಹೊತ್ತು ಮಾತನಾಡಿದ್ದು, ಸಂತಾಪ ಸೂಚಿಸಿದ್ದು ಅಷ್ಟೆ... ಬೇರೆ ಯಾವ ಸಲಹೆಗಳನ್ನೂ ಕೊಟ್ಟಿಲ್ಲ...

+ ಪ್ರೊ. ಬಿ.ಕೆ.ಚಂದ್ರಶೇಖರ್ (ಪ್ರಾಥಮಿಕ: ಪ್ರೌಢ ಶಿಕ್ಷಣ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಅತ್ಯಂತ ದುರಂತವಾದ ವಿಚಾರದಲ್ಲಿ ಚರ್ಚೆಯು ನಡೆಯುತ್ತಾ ಇದೆ. ಪತ್ರಿಕೆಗಳಲ್ಲಿ ಸಂಪಾದಕೀಯವೂ ಸೇರಿ, ಬರೆದಿರುವಂತೆ ಅಥವಾ ಬೇರೆ ಜನ ಹೇಳುತ್ತಿರುವ ರೀತಿಯಲ್ಲಿ ಸ್ವಲ್ಪ ನಾವು ಚರ್ಚೆಯಲ್ಲಿ ದಾರಿ ತಪ್ಪಿದ್ದೇವೆ ಎನ್ನುವುದನ್ನು ಸಾರ್ವಜನಿಕವಾಗಿ ಬರೆಯುತ್ತಾ ಇದ್ದರೆ, ಹೇಳುತ್ತಾ ಇದ್ದಾರೆ. ದಾರಿ ತಪ್ಪಲಿ, ತಪ್ಪದೇ ಹೋಗಲಿ ದುರಂತ ಬಹಳ ಗಂಭೀರವಾದ ವಿಚಾರ, ಲಘುವಾಗಿ ಯಾರೂ ಕೂಡ ಆಲೋಚನೆ ಮಾಡುವ ವಿಚಾರವಲ್ಲ. ಇಂಥ ಸಂದರ್ಭದಲ್ಲಿ ವಿವಾದವನ್ನು ಆದಷ್ಟು ಹೊರಗಿಟ್ಟು ಒಂದು ಸೂಕ್ಷ್ಮ ರೀತಿಯಲ್ಲಿ ವಾದ ಬೇಕಾದರೆ ಮಾಡಬಹುದೆಂದು ನನಗನ್ನಿಸುತ್ತದೆ. ದಿವಂಗತ ನಾಗಪ್ಪರವರ ಸಾವಿಗೆ, ಯಾರು ಕಾರಣೀಭೂತರು, ಯಾವ ಸಂಧರ್ಭದಲ್ಲಿ ಅವರ ಕೊಲೆಯಾಯಿತು ಅವರು ಅಲ್ಲಿಗೆ ಹೋಗಿದ್ದರು ಯಾರು ಅಲ್ಲಿಗೆ ಹೋಗಿರಲಿಲ್ಲ, ಯಾರು ಸಂಪರ್ಕಿಸಿದ್ದರು, ಯಾರು ಇಲ್ಲ, ಅವರು ದಿನಚರಿಯ ಡೈರಿ ಇತ್ತು, ಸುತ್ತಮುತ್ತಲಿನ ಸಂಗತಿಗಳು ಏನಿತ್ತು, ಇವುಗಳ ಬಗ್ಗೆ ಬಹಳ ದೀರ್ಘವಾಗಿ ಚರ್ಚೆಯಾಯಿತು. ವಾಸ್ತವಾಂಶಗಳ ಬಗ್ಗೆ ಒಬ್ಬೊಬ್ಬರು ಒಂದೊಂದು ಹೇಳುತ್ತಾ ಇದ್ದಾರೆ. ಯಾವುದು ತಪ್ಪು, ಯಾವುದು ಸರಿ ಎನ್ನುವುದನ್ನು ಹೀಗೆ, ಅಮೂರ್ತವಾಗಿ ಈ ಸಂದರ್ಭದಲ್ಲಿ ಹೇಳುವುದು ಕಷ್ಟ ಮತ್ತು ತೀರ್ಮಾನಕ್ಕೆ ಬರುವುದು ಬಹಳ ಕಷ್ಟ. ಆದರೆ ಎಲ್ಲವನ್ನೂ ಹೇಳಿ ಬಿಟ್ಟು ಕೊನೆಯಲ್ಲಿ ಈ ಸದನ ಶುರುವಾಗುವುದಕ್ಕೆ ಮುಂಚಿನಿಂದರೂ ಕೂಡ ಹಲವಾರು ಜನ ಪ್ರಮುಖ ನಾಯಕರುಗಳು, ದಿವಂಗತ ನಾಗಪ್ಪನವರ ಕುಟುಂಬದವರು, ಬೇರೆ ಇತರರು ಕೆಲವರು ಕೂಡ ಸತ್ಯ ಹೊರಗಡೆ ಬರಬೇಕಾದರೆ ಇದಕ್ಕೆ ಸಿ.ಬಿ.ಐ. ಎನ್‌ಕ್ವಾಯರಿನೇ ಆಗಬೇಕು, ಜುಡಿಶಲ್ ಎನ್‌ಕ್ವಾಯರಿ ಮಾಡಿದರೆ ಸತ್ಯವು ಹೊರಗಡೆ ಬರುವುದಿಲ್ಲ, ಮತ್ತು ನೇರವಾಗಿ ಹೇಳದಿದ್ದರೂ

ಕೂಡ ಅದರ ಒಂದು ಇಂಪ್ಲಿಕೇಶನ್ ಏನು ಅಂದರೆ, ಜುಡಿಶಿಯಲ್ ಎನ್‌ಕ್ವಾಯರಿ ಆದರೆ ಒಂದಲ್ಲ ಒಂದು ರೀತಿಯಲ್ಲಿ ಸರಕಾರ ಯಾವುದೋ ಒಂದು ಕಾಣದ ಕೈಯನ್ನು ಆ ಎನ್‌ಕ್ವಾಯರಿಯಲ್ಲಿ ಹಾಕಿ ಅಥವಾ ಇಟ್ಟು ಅವರಿಗೆ ಬೇಕಾದ ರೀತಿಯಲ್ಲಿ ಅದರ ಬಗ್ಗೆ ತೀರ್ಪು ಕೊಡಿಸಿಕೊಳ್ಳ ಬಹುದು... ಎಂದು, ನೇರವಾಗಿ ಯಾರು ಹೇಳಿಲ್ಲ. ನೇರವಾಗಿ ಯಾರೂ ಆಪಾದನೆ ಮಾಡಿಲ್ಲ, ಮಾಡುವುದೂ ಇಲ್ಲ. ಆದರೆ ಆ ಇಂಪ್ಲಿಕೇಶನ್ಸ್ ಬಹಳ ಸ್ಪಷ್ಟವಾಗಿ ಬಂದಿದೆ.. ನಂಬಿಕೆ ಅದರಲ್ಲಿ ನಮಗೆ ಸಾಲದು ಎನ್ನುವುದು ಒಂದು. ಅದರ ಜೊತೆಗೆ ಇದು ಎರಡು ರಾಜ್ಯಗಳಿಗೆ ಸಂಬಂಧಪಟ್ಟ ವಿಚಾರವಾದುದರಿಂದ ಸಿಬಿಐ ಇನ್‌ಕ್ವಾಯರಿಯೇ ಆಗಬೇಕು, ಜುಡಿಶಿಯಲ್ ಇನ್‌ಕ್ವಾಯರಿ ಆದರೆ ಒಂದೇ ರಾಜ್ಯದ ವಿಚಾರವಾಗಿದ್ದರೆ ಮಾಡಬಹುದಾಗಿತ್ತು... ಇದು ಸರಿ ಹೋಗುವುದಿಲ್ಲ, ಎಂದು ಎರಡು ಮೂರು ವಿಚಾರಗಳು ಇವೆ. ಮುಖ್ಯವಾಗಿ ಅವರು ಹೇಳುವುದು ಪರಿಣಾಮಕಾರಿ ವಿಚಾರಣೆ ಆಗಬೇಕಾದರೆ ಸಿ.ಬಿ.ಐ ನವರಿಂದಲೇ ಮಾಡಿಸ ಬೇಕು. ಜುಡಿಷಿಯಲ್ ಇನ್‌ಕ್ವಾಯರಿಯಾಗಲಿ, ಬೇರೆ ರೀತಿಯ ಪೋಲೀಸ್ ಇನ್‌ಕ್ವಾಯರಿಯಾಗಲೀ, ನಿರ್ಣಾಯಕವಾಗಿ ಅದು ತೀರ್ಪಿಗೆ ಬರುವುದು ಕಷ್ಟ ಸಾಧ್ಯ ಎಲ್ಲರೂ ಒಪ್ಪಬಹುದಾದ ತರ್ಕಬದ್ಧವಾದ ತೀರ್ಪು ಬರುವುದು ಕಷ್ಟಸಾಧ್ಯ. ಸಾಧ್ಯವೇ ಇಲ್ಲ ಎಂದು ಹೇಳಿ ಎಲ್ಲರೂ ಹೇಳುತ್ತಾರೆ. ದಿನಾ ಬೆಳಗ್ಗೆ ನಾವು ನೋಡುತ್ತಾ ಇದ್ದೇವೆ. ಸುಮಾರು ಹದಿನೈದು ದಿವಸಗಳಿಂದ ಸಿ.ಬಿ.ಐ ಇನ್‌ಕ್ವಾಯರಿ ಆಗಬೇಕೆಂದು ನಾನು ಅದಕ್ಕೆ ಒಂದು ಸ್ವಲ್ಪ ವಿಚಾರ ಮಾಡುವುದಕ್ಕೆ ಶುರು ಮಾಡಿದೆ. ಸಿ.ಬಿ.ಐ. ಇನ್‌ಕ್ವಾಯರಿಯಲ್ಲಿ ಒಂದು ಜ್ಯುಡಿಷಿಯಲ್ ಇನ್‌ಕ್ವಾಯರಿಗಿಂತ ಯಾವರೀತಿ ಮೆರಿಟ್ ಇದೆ, ವಾದ ವಿವಾದಕ್ಕೆ ಹೊರತಾದ ಮೆರಿಟ್ ಏನಿದೆ, ಸಿ.ಬಿ.ಐ.ನಲ್ಲಿ ಹಾಗೆಯೇ ಜೊತೆಜೊತೆಗೆ ಜ್ಯುಡಿಷಿಯಲ್ ಇನ್‌ಕ್ವಾಯರಿಯಲ್ಲಿ ಏನು ತೊಂದರೆಗಳಿವೆ ಅಥವಾ ಇತಿಮಿತಿಗಳು ಏನಿವೆ ಎನ್ನುವುದನ್ನು ಸ್ವಲ್ಪ ನೋಡುವುದಕ್ಕೆ ಪ್ರಯತ್ನ ಪಟ್ಟೆ. ನಾನು ಆ ವಿಚಾರವನ್ನು ಮಾತ್ರ ಹೇಳುತ್ತೇನೆ. ಏಕೆಂದರೆ ಮಾನ್ಯ ಸದಸ್ಯರುಗಳು ಬಾಕಿ ಎಲ್ಲಾ ವಿಚಾರಗಳನ್ನೂ ಸಹ ಬಹಳ ಸವಿಸ್ತಾರವಾಗಿ ಚರ್ಚೆ ಮಾಡಿದ್ದಾರೆ ಮತ್ತು ಸದನದ ಮುಂದಿಟ್ಟಿದ್ದಾರೆ. ನಾನು ಹೇಳುವ ವಿಚಾರಗಳು ವಿರೋಧ ಪಕ್ಷದ ನಾಯಕರುಗಳಿಗೆ ಗೊತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ಅದು ಒಂದು ಬಹಳ foolish assumption ಆಗುತ್ತದೆ. ಆ ವಿಚಾರವಿಲ್ಲ. ಆದರೆ ಸ್ವಲ್ಪಮಟ್ಟಿಗೆ ಎಕ್ಸ್‌ಪ್ಲೈನ್ ಮಾಡಬಹುದೋ ಏನೋ ಎಂಬ ಒಂದು ನಂಬಿಕೆಯಿಂದ ಮಾತ್ರ ನಾನು ಹೇಳುತ್ತಾ ಇದ್ದೇನೆ.

ಮಾನ್ಯ ಅಧ್ಯಕ್ಷರೇ, ಮೊದಲನೇ ಪಾಯಿಂಟ್ ಸಿ.ಬಿ.ಐ.ನ ವ್ಯಾಪ್ತಿ ಏನು? ಸಿ.ಬಿ.ಐ. ಇನ್‌ಕ್ವಾಯರಿಯ ವ್ಯಾಪ್ತಿ ಏನು? ಆದರೆ jurisdiction or frame work ಏನು? ಅದು ವಿಚಾರಣೆ ಅಲ್ಲ, ಅದು ಇನ್‌ವೆಸ್ಟಿಗೇಟಿವ್ ಏಜನ್ಸಿ. It can only be an investigation not an enquiry. ಇದು ಬಹಳ ಮೂಲಭೂತವಾದ ವಿಚಾರ. ಹಾಗಂದ ತತ್‌ಕ್ಷಣ ಏನಾಗುತ್ತದೆ ಅದು? ಸಿ.ಬಿ.ಐ.ನಿಂದ ತನಿಖೆ ಮಾತ್ರ ಸಾಧ್ಯ. ತನಿಖೆ ಬಿಟ್ಟು ಬೇರೇನೂ ಮಾಡುವುದಕ್ಕೆ ಸಾಧ್ಯವಿಲ್ಲ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಏನಿದೆ, ಅದರಲ್ಲಿ 12ನೇ ಅಧ್ಯಾಯದಲ್ಲಿ ಸೆಕ್ಷನ್ 154 ರಿಂದ ಸೆಕ್ಷನ್ 173 ರವರೆವಿಗೆ ಏನು ಚರ್ಚೆ ಮಾಡಲಾಗಿದೆ

ವಿಧಿನಿಯಮಗಳಲ್ಲಿ ಏನು ಇದೆ, ಅದಕ್ಕೆ ಸೀಮಿತವಾದ ಹಾಗೆ ಮಾತ್ರ ಸಿ.ಬಿ.ಐ.ಗೆ ಅಧಿಕಾರ ಸಿಗುತ್ತದೆ. ಅಂತಂದ್ರೆ ಪೋಲೀಸ್‌ಗೆ ಇನ್‌ಫಾರ್ಮೇಶನ್ ಕೊಟ್ಟ ಕ್ಷಣದಿಂದ ಮಾತ್ರ ಸಿ.ಬಿ.ಐ.ಗೆ ಇನ್‌ಕ್ವಾಯರಿ ಪವರ್ ಬರುತ್ತದೆ, ಇನ್‌ವೆಸ್ಟಿಗೇಶನ್ ಪವರ್ ಬರುತ್ತದೆ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಅದರಲ್ಲಿ ಮುಖ್ಯವಾದುದು ಸೆಕ್ಷನ್-173. ಅದರಡಿಯಲ್ಲಿ ಚಾರ್ಜಿಸ್‌ನ್ನು ಫ್ರೇಮ್ ಮಾಡಬೇಕು, ಅಲ್ಲಿಯವರೆಗೆ ಸಿ.ಬಿ.ಐ.ತನಿಖೆ ಮಾಡುವುದಕ್ಕೂ ಆಗುವುದಿಲ್ಲ. ಬಹಳ ಮುಖ್ಯವಾದ ವಿಚಾರ ಅದರ ಜೊತೆಗೆ ಹೋಗುವುದು ಅಂದರೆ, ಯಾವುದೇ ಮಾಹಿತಿಯ ಮೂಲವಾಗಲಿ, ಯಾವುದೇ ಸಾಕ್ಷಿ ಪುರಾವೆಗಳ ಮೂಲವಾಗಲಿ, ಅಥವಾ ಯಾವುದೇ ವ್ಯಕ್ತಿಯ ಹೆಸರುಗಳನ್ನಾಗಲಿ, ಸಿ.ಬಿ.ಐ.ಇನ್‌ವೆಸ್ಟಿಗೇಶನ್‌ನಲ್ಲಿ ಗೌಪ್ಯವಾಗಿ ಇಡುವ ಸಾಧ್ಯತೆಯೇ ಹೆಚ್ಚು.ಬಹುತೇಕ ಇನ್‌ಕ್ವಾಯಿರಿಗಳಲ್ಲಿ ಏನು ಮಾಡಿದ್ದಾರೆ ಇನ್‌ಕ್ವಾಯರಿ ಎಂದು ತಪ್ಪು ಹೇಳುತ್ತಾ ಇದ್ದೇನೆ ಬಹುತೇಕ ಇನ್‌ವೆಸ್ಟಿಗೇಶನ್‌ಗಳಲ್ಲಿ, ಸಿ.ಬಿ.ಐ.ನವರು ಇಲ್ಲಿಯವರೆಗೆ ಏನು ಮಾಡಿದ್ದಾರೆ, ಅದೆಲ್ಲದರಲ್ಲೂ ಇದೇ ಪರಿಪಾಠ ಮುಂದುವರಿದುಕೊಂಡು ಬಂದಿದೆ. ಯಾವಾಗ ಹೆಸರುಗಳನ್ನು ಹೊರಗೆ ಹಾಕಬೇಕಾಗುತ್ತದೆ, ಯಾವಾಗ ಸಾಕ್ಷಿ ಮಾಹಿತಿಗಳನ್ನು ಅವರು ಪ್ರಚಾರ ಕೊಡಬೇಕಾಗುತ್ತದೆ. ಅಂದರೆ, ಚಾರ್ಜ್‌ಸ್ ಫ್ರೇಮ್ ಮಾಡಿದಾಗ ಮಾತ್ರ ಅವರು ಅದೆಲ್ಲವನ್ನೂ ಹೇಳ ಬೇಕಾಗುತ್ತದೆ. ಅಲ್ಲಿಯವರೆಗೆ ಸಂಪೂರ್ಣ ಗೌಪ್ಯವಾಗಿ ಇರುತ್ತವೆ. ಜುಡಿಷಿಯಲ್ ಇನ್‌ಕ್ವಾಯರಿಯಲ್ಲಿ ಹಾಗಲ್ಲ. ಅದನ್ನು ಆ ಮೇಲೆ ಹೇಳುತ್ತೇನೆ. ಅದರಲ್ಲಿ ಮೊದಲನೇ ದಿನದಿಂದ ಹಿಡಿದು ಎಲ್ಲವೂ ಬಹಿರಂಗವಾಗಿ ನಡೆಯ ಬೇಕಾಗುತ್ತದೆ. ಕಾಮಗೆರೆ ಯಿಂದ ಹಿಡಿದು ಬೆಂಗಳೂರಿನ ವರೆಗೆ, ಬಿಜಾಪುರದ ವರೆಗೆ, ಯಾವು ಬೇಕಾದರೂ ಬಂದು ಸಾಕ್ಷಿ ಕೊಡಬಹುದು. ಸಿ.ಬಿ.ಐ. ಇನ್‌ವೆಸ್ಟಿಗೇಶನ್‌ನಲ್ಲಿ ಅದು ಸಾಧ್ಯವಿಲ್ಲ. A member of the public has no right at all to seek an audience with the CBI authorities during investigation. It is completely out of the question. ಜ್ಯುಡಿಷಿಲ್ ಕಮಿಶನ್ ಮುಂದೆ ಬರಬಹುದು. ಅಂದರೆ CBI is like any other police establishment. It is in fact like a police station and nothing more than that. Absolutely like a Police Station. ಬಹುತೇಕ ಜನಕ್ಕೆ ಇದು ಗೊತ್ತಾಗುವುದಿಲ್ಲ. ಏಕೆಂದರೆ ಇದುಟೆಕ್ನಿಕಲ್ ವಿಚಾರ. ಸೆಕ್ಷನ್ 154 ನಿಂದ 174 ವರೆಗೆ ನೋಡಿದವರಿಗೆ ಮಾತ್ರ ಇದು ಗೊತ್ತಾಗುತ್ತದೆ. ಸಿ.ಬಿ.ಐ.-ನ ಅಸ್ತಿತ್ವ ಏನು? ಆಧಾರ ಏನು ಎಂಬುದು ತಿಳಿಯುತ್ತದೆ. ಆಗಲೇ ಹೇಳಿದ್ದೇನೆ. ನಾನು.. ಎಫ್.ಐ.ಆರ್. ಫೈಲ್ ಆದ ನಂತರ ಜ್ಯುರಿಸ್ಡಿಕ್ಷನ್ ಬರುತ್ತದೆಯೇ ಹೊರತು ಅಲ್ಲಿಯ ವರೆವಿಗೆ ಇಲ್ಲ. ನಾಗಪ್ಪನವರನ್ನು ಯಾರು ಕೊಂದರು? ಆ ಬಗ್ಗೆ ತನಿಖೆ ಸಾಧ್ಯ ಆದರೆ ಒಂದು ವಿಚಾರವನ್ನು ಬಹುತೇಕ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ, ಕೆಲವು ಪತ್ರಿಕೆಗಳಲ್ಲಿ ಬರೆದಿದ್ದರು. ನಿರ್ಲಕ್ಷತೆ ಇತ್ತು, ಪೊಲೀಸ್ ನಿರ್ಲಕ್ಷತೆ, ಸರಕಾರದ ನಿರ್ಲಕ್ಷತೆ, ಉದಾಸೀನ ಧೋರಣೆ ಇತ್ತು ಎಂದು ಹೇಳಿದ್ದಾರೆ. ಇದು ಯಾವುದೂ ಸಿ.ಬಿ.ಐ.ನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಮಾನ್ಯ ಸ್ನೇಹಿತರುಗಳು ಇವೊತ್ತು ಮಾಡುತ್ತಿರುವ ಡಿಮ್ಯಾಂಡ್ ಏನಿದೆ it is a self-defeating deman. ಇದು ಒಂದನ್ನೂ ಸಿ.ಬಿ.ಐ. ಇನ್‌ಕ್ವಾಯರಿ ಮುಂದೆ ಇಡುವುದಕ್ಕೆ ಬರುವುದಿಲ್ಲ. ಹೇಗೋ ಏನೋ ಆದರೆ ಜನ

ಏನೆಂದುಕೊಂಡಿದ್ದಾರೆ? ಸಿ.ಬಿ.ಐ ಸಂಸ್ಥೆ ಹಾಗೂ ಅದರ ಕಾರ್ಯ ಧಕ್ಷತೆ ಏನಿದೆ, ವಿಧಿವಿಧಾನಗಳೇನಿವೆ, ಜುಡಿಷಿಯಲ್ ಇನ್‌ಕ್ವಾಯರಿಗಿಂತ ಬಹಳ ಉತ್ತಮವಾಗಿದೆ. ಅದು ಹೋಲಿಸಲಾರದಷ್ಟು ಉತ್ತಮವಾಗಿದೆ. ಎನ್ನುವ ಒಂದು ಸಾಮಾನ್ಯವಾದ ನಂಬಿಕೆ ಇದೆ. ಆದರೆ ಸಭಾಧ್ಯಕ್ಷರೇ, ಆ ದೇಶದ ಸರ್ವೋಚ್ಚ ನ್ಯಾಯಾಲಯದ ಒಂದು ಅಭಿಪ್ರಾಯವನ್ನು ತಾವು ನೋಡಿ. ಬಹಳ ಬ್ರೀಫ್ ಆಗಿ ಒಂದು ನಿಮಿಷ ಒಂದೂರವರೆ ನಿಮಿಷದೊಳಗಾಗಿ, ಇತ್ತೀಚಿನ ಒಂದು ಬಹಳ ಪ್ರಮುಖವಾದ ಕೇಸ್‌ನಲ್ಲಿ ಸುಪ್ರೀಂಕೋರ್ಟ್ ಹೇಳಿರುವುದನ್ನು ನಾನು ಇಲ್ಲಿ ತಮ್ಮ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅವರು ಹೇಳುತ್ತಾರೆ. ಇದೊಂದು ಕೇಸ್, ಯಾವ ಕೇಸ್ ಅಂದರೆ, Vinnethnaraian Vs. Union of India (All India Report 1998) ರಿಪೋರ್ಟ್ ಆಗಿದೆ. ಸುಪ್ರೀಂಕೋರ್ಟ್ ಕೇಸಸ್‌ನಲ್ಲಿ ಮಾರ್ಚ್ 1991ರಲ್ಲಿ ಅಶ್ವಾಕ್ ಹುಸೇನ್ ಲೋನ್ ಅಥವಾ ಲೋನ್ ಹೇಗಾದರೂ ಪ್ರೊನಾನ್ಸ್ ಮಾಡಬಹುದು. ಹಿಜ್‌ಬುಲ್ ಮುಜಾಹಿದೀನ್‌ಗೆ ಸೇರಿದ ಒಬ್ಬ ವ್ಯಕ್ತಿ ಅವನನ್ನು ದಸ್ತಗಿರಿ ಮಾಡಿದರು. ಆ ಸಂದರ್ಭದಲ್ಲಿ ಸುರೇಂದ್ರ ಕುಮಾರ್ ಜೈನ್ ಅವರ ವ್ಯಾಪಾರ ವಹಿವಾಟು ಸಂಸ್ಥೆಗಳ ವ್ಯಾಪಕ ಶೋಧನೆ ನಡೆಯಿತು. ಮುಂಬಯಿ, ಡೆಲ್ಲಿ, ಎಲ್ಲಾ ಕಡೆ, ಅಲ್ಲಿ ಎರಡು ಡೈರಿಗಳು ಸಿಕ್ಕಿದುವು. ಆ ಜೈನ್ ಅವರ ಡೈರಿಗಳು, ಜೈನ್ ಡೈರೀಸ್ ಕೇಸ್ ಎಂದು ಬಹಳ ಪ್ರಸಿದ್ಧವಾಯಿತು. ಪುಸ್ತಕಗಳಿತ್ತು ಅದರಲ್ಲಿ ಉನ್ನತ ಮಟ್ಟದ ರಾಜಕಾರಣಿಗಳಿಗೆ ಕೊಟ್ಟ ಹಣದ ಬಗ್ಗೆ ಆ ಡೈರಿಯಲ್ಲಿ ನಮೂದನೆ ಇತ್ತು ಇಷ್ಟೆಲ್ಲಾ ಆಗಿ ಸಿಬಿಐಗೆ ತನಿಖೆ ವಹಿಸಿದ ಮೇಲೆ ಸಿಬಿಐನವರು ತನಿಖೆ ಮುಂದುವರೆಸಲಿಲ್ಲವಲ್ಲಾ ಯಾಕೆ? ಒಂದು ಇಂಪ್ಲಿಕೇಷನ್ ನಮ್ಮ ಡಿಮಾಂಡ್ ಏನು judicial enquiry ಆದರೆ Karnataka Government ತನ್ನ ಕೈಚಳಕ ಏನೋ ಮಾಡಿಬಿಡುತ್ತದೆ. CBI is independent of political interference or possibilities of political interferece. It may be a relatively so. None of us are sure. ಇನ್ನೊಂದೆರಡು ಕೇಸ್ ನಾನು ಹೇಳುತ್ತೇನೆ ಆಮೇಲೆ ನಮ್ಮ ಸ್ನೇಹಿತರೇ ಇತ್ಯರ್ಥ ಮಾಡಲಿ. ಎಷ್ಟರಮಟ್ಟಿಗೆ ಇದರಲ್ಲಿ ಕಾರ್ಯದಕ್ಷತೆ ಒಂದು ಕಡೆ, ಇನ್ನೊಂದು ಕಡೆ ಯಾವ ರಾಜಕೀಯ ಹಸ್ತಕ್ಷೇಪ ಆಗಲಿಲ್ಲ ಅನ್ನುವುದನ್ನು ವಿನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಅವರೇ ಇತ್ಯರ್ಥ ಮಾಡಲಿ. ಇಷ್ಟೆಲ್ಲಾ ಆದರೂ ಆ ಜೈನ್ ಡೈರಿಯಲ್ಲಿ ಒಂದು ತಿಂಗಳು ಸತತವಾಗಿ front pageನಲ್ಲಿ ಎಲ್ಲಾ ಪತ್ರಿಕೆಗಳು magazineಗಳು ಬರೆದರು CBI enquiry ಮಾಡಲಿಲ್ಲವಲ್ಲಾ ಯಾಕೆ? ಅವರು ಯಾಕೆ enquiry ಮಾಡಲಿಲ್ಲ ಎಂದು ಒಂದು public interest litigation ಹಾಕಿದರು CBI enquiry ಮಾಡಬೇಕಾಗಿತ್ತು, ಅವರು ವಹಿಸಿಕೊಟ್ಟಿದ್ದರೂ ಮಾಡಲಿಲ್ಲ ಎಂದು It was a writ petition, in the form of a writ petition pubic interest litigation. ಅದರಲ್ಲಿ ಒಂದು ಬಹಳ ಅಪರೂಪದ ಹೆಜ್ಜೆ ಅಂದರೆ Supreme Court ಇಟ್ಟಿತು. ಏನು ಹೇಳಿದರು ಸುಪ್ರೀಂ ಕೋರ್ಟಿನವರುಃ ಆ ಕೇಸಿನ facts of the caseಅನ್ನು decide ಮಾಡಿಬಿಟ್ಟು ಈ ತನಿಖೆಯ ಪ್ರಗತಿಯನ್ನು ನಾವು monitor ಮಾಡುತ್ತೇವೆ ಎಂದು ಹೇಳಿದರು ಸುಪ್ರೀಂಕೋರ್ಟ್‌ನವರು Almost uprecendented, ತನಿಖೆ ಬೇಗೆ ಮಾಡಿ ಎಂದು ಸಿಬಿಐಗೆ ಅವರು ಆದೇಶ ಕೊಡಲಿಲ್ಲ.

ನೀವು ತನಿಖೆ ಮಾಡುತ್ತೀರೋ ಇಲ್ಲವೋ ದೈನಂದಿನ monitoring ನಾವು ಮಾಡುತ್ತೇವೆ ಎಂಬ ಅಪರೂಪದ ಹೆಜ್ಜೆ Supreme Courtನವರು ಇಟ್ಟರು ಆ ಕೇಸಿನಲ್ಲಿ. ಆದಕ್ಕೇ ಆ ಸಂದರ್ಭದಲ್ಲಿ ಅವರು ಹೇಳುತ್ತಾರೆಃ "The sum and substance of these orders is that the CBI and other document agencies had not carried out their public duty to investigate the offences disclosed. The none stands above the law so that an alleged offence by him is not required to be investigated. In the sense that we would do what we permissibly to do to see that the investigation progressed while yet ensuring that we not direct or channel those investigations, or in any other manner prejudies the right of those who might be accused to get fair trial ಇಷ್ಟು ಹೇಳಿದ ಮೇಲೂ ಅವರು ಏನು ಹೇಳುತ್ತಾರೆ ಅಂದರೆ. ತಾವು ದಯಮಾಡಿ ಕೇಳಬೇಕು ಸಾರ್. even after this matter was brought to the Court complaining of the inertia of CBI and the other agencies to investigate into the offences because of the alleged involvement of several persons holding high offices in the executive, quiet some time the disinclination of the agencies to procees with the investigation was apparent. The Continuing inertia of the agencies to even commence a proper investigation could not be tolerated any longer by us. ಇದು ಸುಪ್ರೀಂ ಕೋರ್ಟ್ 1998ರಲ್ಲಿ ಹೇಳಿರುವ ವಿಚಾರ. They should atleast commence a fruitful investigation ಅದನ್ನು ಹೇಳಿಬಿಟ್ಟು ನಿಮ್ಮನ್ನು ವಾಚ್ ಮಾಡುತ್ತೇವೆ ನಾವು ಪ್ರತಿ ದಿನ ಇನ್‌ವೆಸ್ಟಿಗೇಷನ್ ನೀವು ಮಾಡುತ್ತೀರೋ ಇಲ್ಲವೋ ಅನ್ನುವ ವಿಚಾರವನ್ನು ಸುಪ್ರೀಂ ಕೋರ್ಟ್ ಆ ಕೇಸಿನಲ್ಲಿ ಹೇಳಿದರು. Bombay blast caseನಲ್ಲಿ ಏನಾಯಿತು? 1993 ಜನವರಿ ಫೆಬ್ರವರಿಯಲ್ಲಿ ಆ ಘೋರ Bombay blast ಆಗಿ ನೂರಾರು ಜನ ಸತ್ತ ನಂತರ ಸಿಬಿಐಗೆ ವಹಿಸಿದರು. ಇಲ್ಲೀವರೆಗೂ ಏನಾಗಿದೆ? ಯಾವ ರೀಪೋರ್ಟ್ ಕೊಟ್ಟಿದ್ದಾರೆ, CBI investigation ನಲ್ಲಿ ಎಷ್ಟು ವರ್ಷವಾಯಿತು? ಇದು ನಾನು ರಾಜಕೀಯಕ್ಕೂ, ಒಂದು ರಾಜಕೀಯ ಪಕ್ಷಕ್ಕೂ, ಆ ನಾಯಕರು ಈ ನಾಯಕರು ಎಂದು ಮಾತನಾಡುತ್ತಿಲ್ಲ. ಕೆಲವು ಲೀಡಿಂಗ್ ಕೇಸಸ್- ಈ ದೇಶದ ಸಾಮಾನ್ಯ ಜನರಿಗೆ ಅರಿವಾಗಿರುವ ಕೇಸ್‌ಗಳ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. It has been singularly helpless, absolutely inefficient and thrown its hands off. ಏನೂ ಮಾಡುವುದಕ್ಕಾಗುವುದಿಲ್ಲ. ಇನ್ನು ಒಂದು ಉದಾಹರಣೆ ಕೊಡುತ್ತೇನೆ ನಾನು. ಇದಕ್ಕಿಂತ ದಯನೀಯವಾದ ವಿಚಾರ ಬೇರೆ ಇಲ್ಲ. ವಿ. ಕೃಷ್ಣಮೂರ್ತಿಯವರ ಕೇಸ್. Maruthi Udyogi Limitedನ Managing Director, Steel Authority of India ನ Chairman and Managing Director, ಆ Steel Authority ಮುಳುಗಿದಾಗ ಮೇಲೆತ್ತಿದರು ವಿ ಕೃಷ್ಣಮೂರ್ತಿಯವರು, ಮಾರುತಿ ಉದ್ಯೋಗ್ ಒಂದು ಕಾರ್ ಬೀದಿಗೆ

ತಂದಿರಲಿಲ್ಲ ಅದರ ಪ್ರೊಡಕ್ಷನ್ ಮಾಡಿಸಿದ್ದು ಅವರು. ಇಲ್ಲೇ ಬೆಂಗಳೂರಿನ ನಮ್ಮ Indian Institute of Management Board of Directorsನ ಅಧ್ಯಕ್ಷರಾಗಿದ್ದರು ನಾನಲ್ಲಿ ಪ್ರೊಫೆಸರ್ ಆಗಿದ್ದ ಕಾಲದಲ್ಲಿ. ಪ್ರಖ್ಯಾತ ಮ್ಯಾನೇಜರ್. ಈ ದೇಶದ ಒಬ್ಬ ಅತ್ಯಂತ powerful enterprising professional Manager. ಏನು ಮಾಡಿದರು ಅವರಿಗೆ? 8-9ವರ್ಷಗಳ ಕಿರುಕುಳ ಕೊಟ್ಟರು, investigation ಹೆಸರಿನಲ್ಲಿ, ಅಪಾರ ಹಣ ಮಾಡಿಕೊಂಡಿದ್ದಾರೆ, ಅಲ್ಲಿ ಮಾಡಿದ್ದಾರೆ ಇಲ್ಲಿ ಮಾಡಿದ್ದಾರೆ ಎಂದು ಹೇಳಿ 8-9 ವರ್ಷಗಳ ಕಿರುಕುಳ ಕೊಟ್ಟರು, ಹೆಸರಿನಲ್ಲಿ ಅಪಾರ ಹಣ ಮಾಡಿಕೊಂಡಿದ್ದಾರೆ, ಅಲ್ಲಿ ಮಾಡಿದ್ದಾರೆ ಇಲ್ಲಿ ಮಾಡಿದ್ದಾರೆ ಎಂದು ಹೇಳಿ 8-9 ವರ್ಷ ಎಳೆದರು. ಅವಮಾನ ಮಾಡಿದರು. ದೆಹಲಿಯಿಂದ ಹೊರಡುವ ಏರೋಪ್ಲೇನ್‌ನಲ್ಲಿ ಕೂತಿದ್ದಾಗ...

ಶ್ರೀ ಬಿ.ಎನ್.ಬಚ್ಚೇಗೌಡ: ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸಚಿವರಿಂದ ಇಲ್ಲಿ ಜಸ್ಟಿಫೈ ಮಾಡಿಕೊಂಡು ರಾಜ್ಯದ ಆಕ್ಷನ್ ಏನಿದೆ ಇವತ್ತು judicial probe ಮಾಡಬೇಕೆಂದು ಅದನ್ನು ಪಾಸಿಟೀವಾಗಿ ತೆಗೆದುಕೊಂಡು ಹೋಗುವಂಥಾದ್ದು ಒಬ್ಬ ಮಂತ್ರಿಗಳಾಗಿ ರಾಜ್ಯದ ಜವಾಬ್ದಾರಿ ಸ್ಥಾನದಲ್ಲಿರುವವರು ಸಿಬಿಐ ಸಂಸ್ಥೆಯ ಬಗ್ಗೆ ನೆಗೆಟೀವಾಗಿ ಮಾತನಾಡುವುದು. it is not correct. No that is not a fact. ಎಲ್ಲೋ ಲೋಪವಾಗಿದೆ ನಿಧಾನವಾಗಿದೆ ಅಂದರೆ totally CBI is wrong, Judical probe is wrong ಎಂದು ಹೇಳಿ you cannot draw that inference. ಈ ತರಹದ inferenceನ್ನು ಒಬ್ಬ ಮಂತ್ರಿಗಳು ಕೊಡುವುದಾದರೆ.. ಈಗಾಗಲೇ ಮಾನ್ಯ ಖರ್ಗೆಯವರು ಮೇಲ್ಮನೆಯಲ್ಲಿ ಹೇಳಿದರು ನಾವು ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡುಬಿಟ್ಟಿದ್ದೇವೆ. ಇನ್ನು ಯಾವ ಪ್ರಕರಣವನ್ನೂ ಸಿಬಿಐಗೆ ಒಪ್ಪಿಸುವುದಿಲ್ಲ. if this is the attitude of a Government ನಾವು ಏನೂ ಮಾತನಾಡುವುದಕ್ಕೆ ಆಗುವುದಿಲ್ಲ. I am sorry to say this. ಈ ಸಂಸ್ಥೆ ಸರಿ, ಜುಡಿಶಿಯರಿಯಲ್ಲಿ ಇಂತಹ ಜಡ್ಜ್‌ಮೆಂಟ್ ಆಗಿದೆ ಅಂದರೆ ಹೌದು ಬೇಕಾದಷ್ಟು ಆಗುತ್ತದೆ ದೇಶದಲ್ಲಿ ಬೇಗ ಮುಗಿಸಿರುವುವು ಇವೆ, ಬೇಗ ಮುಗಿಯದವೂ ಇವೆ.

ಪ್ರೊ. ಬಿ.ಕೆ ಚಂದ್ರಶೇಖರ್: ನಿಮಗ್ಯಾಕೆ ಮುಜುಗರ ಇದು ಕೇಳುವುದಕ್ಕೆ? ನಾನು ಖರ್ಗೆಯವರ ಪರವಾಗಿ ಮಾತನಾಡುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕನ್‌ಸೆಂಟ್ ಕೊಡೋದು ನಿಮ್ಮಿಂದಾನೇ ಬಂದಿದೆ ಅದನ್ನು ಕಂಟಿನ್ಯೂ ಮಾಡಿದ್ದೇವೆ ಹೊರತಾಗಿ ಹೊಸದಾಗೇನೂ ಮಾಡಿಲ್ಲ.

ಪ್ರೊ. ಬಿ.ಕೆ ಚಂದ್ರಶೇಖರ್: ವಿ.ಕೃಷ್ಣಮೂರ್ತಿಯವರು ಏರೋಪ್ಲೇನ್‌ನಲ್ಲಿ ಕೂತುಕೊಂಡು ಒಂದು ಫಂಕ್ಷನ್‌ಗೆ ನ್ಯೂಯಾರ್ಕಿಗೆ ಹೊರಟಿದ್ದಾಗ ಸಿಬಿಐನವರು ಹೋಗಿ ಅವರನ್ನು ಏರೋಪ್ಲೇನ್‌ನಿಂದ ಕೆಳಗಿಳಿಸಿ ಅರೆಸ್ಟ್ ಮಾಡಿ ಹೌಸ್ ಅರೆಸ್ಟ್ ಮಾಡಿ ಇಟ್ಟರು. ಇಷ್ಟೆಲ್ಲಾ ಆದ ಮೇಲೆ 8-9 ವರ್ಷವಾದ ಮೇಲೆ ಕಡೆಯಲ್ಲಿ ಏನಾಯಿತು? ಅದಕ್ಕೆ ಹೇಳುತ್ತಿದ್ದೇನೆ: ಏನು ಮಾಡಿದರು? ಅವರಿಗೆ ಹಾಕಿದ್ದ ದಾವೆಯನ್ನು ಹಿಂದಕ್ಕೆ ಪಡೆದುಕೊಂಡರು. ಇದಕ್ಕೆ 8-9 ವರ್ಷ ಬೇಕಾ? ಅಂತಂದರೆ acquittal ಅಲ್ಲ discharged. ಇವರ ಮುಂದೆ ಕೇಸಿಲ್ಲ ಎಂದು

ಫೈಲ್ ಮಾಡಿ ವಾಪಸ್ ತಗೊಂಡ್ರಲ್ಲಾ ಅವರು ಕೇಸ್ ಹಾಕಿ ಅಕ್ವಿಟಲ್ ಆಗಿದ್ದರೆ ಆಯಿತು ಪರವಾಗಿಲ್ಲ. ನಾವು ಹಾಕಿದ ಪ್ರಾಸಿಕ್ಯೂಷನ್ ಎಲ್ಲಾ. successfull ಆಗುವುದಿಲ್ಲ. ಈ ರೀತಿಯಾಗ ಏನನ್ನಬೇಕು? 7-8 ವರ್ಷವಾದ ಮೇಲೂ ವಿ ಕೃಷ್ಣಮೂರ್ತಿಯವರ ಮೇಲೆ ಚಾರ್ಜ್‌ಸ್ ಫ್ರೇಮ್ ಮಾಡಿರಲಿಲ್ಲ.

Sri. B.N.Bache Gowda:- Is it the opionion of the Government that you are posing?

Prof. B. Chandrashekar:- No, No, ಯಾಕೆ ಈ ತರಹ ಮಾತನಾಡುತ್ತೀರಿ? ಇದು ಒಪಿನಿಯನ್ನಾ?

Sri. B.N.Bache Gowda:- As a Minister you are preempting this opinion to the House. ಮತ್ತಿನ್ನೇನು?

ಪ್ರೋ.ಬಿ.ಕೆ ಚಂದ್ರಶೇಖರ್: ಇದು ವಾಸ್ತಾಂಶ ಒಪಿನಿಯನ್ ಎಲ್ಲಿ ಹೇಳಿದ್ದೇನೆ? ಶ್ರಿ ಸಿಂಧ್ಯರವರೆ, ತಾವೇ ಹೇಳಿ ಇದು ಒಪಿನಿಯನ್ನಾ?

ಶ್ರೀ ಪಿ.ಜಿ.ಆರ್ ಸಿಂಧ್ಯ: ನೀವು ಮಾತನಾಡುತ್ತಿರುವ ಕಂಟೆಕ್ಸ್ ಏನಿದೆ ಅಂದರೆ ಪ್ರೊಫೆಸರ್ ಇದುವರೆಗೂ participate ಮಾಡಿರತಕ್ಕಂಥವರು ಸಿಬಿಐ ತನಿಖೆಗೆ ಮಾತ್ರ ಕೇಳುತ್ತಿದ್ದಾರೆ. ನಮ್ಮ ಸರ್ಕಾರ judicial probe ಮೂಲಕ ಸತ್ಯ ಹೊರಗಡೆ ತರಬೇಕೆಂದು ಪ್ರಯತ್ನ ಮಾಡುತ್ತಿದೆ. ಸ್ವಾತಂತ್ರ್ಯ ಬಂದ ನಂತರ ಈ 52 ವರ್ಷಗಳಲ್ಲಿ ಸಿಬಿಐ ಎಲ್ಲೆಲ್ಲಿ ಫೇಲಾಗಿದೆ, ಅದೇ ತರಹ ಇದೂ ಸಹಿತ ಫೇಲ್ ಆಗುತ್ತದೆ. ಅದಕ್ಕೋಸ್ಕರ unanimous ಆಗಿ ಒಂದು resolution ಮಾಡಿಬಿಡೋಣ. ಸಿಬಿಐ ಬೇಡ ಜುಡಿಶಿಲ್ ಪ್ರೋಬ್‌ಗೆ ಎಂಬ ಅರ್ಥ ಬರುತ್ತದೆ. If that is the opinion of this Government, we have no objection. We cannot force our opinion into your mouth. ನಿಮಗೆ ಮೆಜಾರಿಟಿ ಇದೆ, ನಾವು ನ್ಯಾಯಾಂಗ ತನಿಖೆಯನ್ನೇ ಮಾಡುವುದು ಎಂಬ ತೀರ್ಮಾನಕ್ಕೆ ನೀವು ಬರುವುದಾದಲ್ಲಿ ನಾವೇನೂ ತಕರಾರು ಮಾಡುವುದಕ್ಕಾಗುವುದಿಲ್ಲ. For the last days with all the facts, I have some more facts. ನಾನು ಸದನದಲ್ಲಿ ಚರ್ಚೆಯಲ್ಲಿ ಭಾಗವಹಿಸಿದ ಮೇಲೆ ನನಗೆ ನಮ್ಮ ಅಧಿಕಾರಿಗಳು ಎಲ್ಲಿ ಮುಖ್ಯಮಂತ್ರಿಗಳಿಗೆ, ಗೃಹಮಂತ್ರಿಗಳಿಗೆ ಮೋಸವಾಗಿದೆ ಎನ್ನುವುದನ್ನು I am 100% confidence when I keep the clinching evidence before you. You have no other alternate other than that. ನನ್ನ ಹತ್ತಿರ ಇದೆ. Clarification ಸಂದರ್ಭಧಲ್ಲಿ ಆ evidenceನ್ನು ಪ್ರೊಡ್ಯೂಸ್ ಮಾಡುತ್ತೇನೆ. ನಮ್ಮ ರಾಜ್ಯ ಸರ್ಕಾರದಿಂದ ಯಾಕೆ ಆಗುವುದಿಲ್ಲ. ಈಗ ಯಾವುದೋ ಒಂದು ಹಣಕಾಸಿನ ವ್ಯವಹಾರವಾಗಿದ್ದಿದ್ದರೆ ಅಥವಾ ಎಲ್ಲೋ ಒಂದು ಕಡೆ ಪೋಲಿಸ್ ಎಕ್ಸಸಸ್ ಆಗಿದ್ದರೆ ಇದನ್ನು ನಾನು ಒಪ್ಪಿಕೊಳ್ಳುತ್ತಿದ್ದೆ. ನಾವು ಯಾಕೆ ಸಿಬಿಐ ತನಿಖೆಗೆ ಅಂದರೆ ನಿಮ್ಮನ್ನು ನಾವು ಸಿಕ್ಕಿಹಾಕಿಸಬೇಕು, ಅಲ್ಲಿ ಬಿಜೆಪಿ ಸರ್ಕಾರವಿದೆ, ನಾವೇನೋ ಬಿಜೆಪಿ ಜೊತೆ ಸಂಘರ್ಷಕ್ಕೆ ಇಳಿಯಬೇಕೆಂಬ ದೃಷ್ಟಿಯಿಂದಾನೇ ಜೆಡಿ(ಯು) ಎನ್‌ಡಿಎದಿಂದ ಹೊರಗಡೆ ಬಂದು ಅಖಿಲ ಭಾರತ ಜನತಾದಳ ಎಂದು ಮಾಡಿಕೊಂಡು ಸೆಕ್ಯುಲರ್ ಪಾರ್ಟಿಯಾಗಿ ಹೊರಟಿರುವುದು. ನಿಮಗೆ ಭಯ ಇರಬಹುದು, ಅಲ್ಲಿ ಬಿಜೆಪಿ

ಸರ್ಕಾರವಿದೆ, ನಮ್ಮನ್ನೇನೋ ಸಿಕ್ಕಿಹಾಕಿಸಬಹುದು ಎಂದು ಆ ಭಯ ಸ್ವಾಭಾವಿಕವಾಗಿ ಇರುತ್ತದೆ. ನಾನು ಅದನ್ನು ತಪ್ಪು ಎಂದು ಹೇಳುವುದಿಲ್ಲ. ಆದರೆ 40 ವರ್ಷ ಅನುಭವ ಇರುವ ಮುಖ್ಯಮಂತ್ರಿಗಳು ಈ ಸದನದ ನಾಯಕರಾಗಿರುವ ಸಂದರ್ಭದಲ್ಲಿ ಇವತ್ತು ಒಬ್ಬರು ಪ್ರಧಾನಮಂತ್ರಿಯಾಗಿರುತ್ತಾರೆ ನಾಳೆ ಮತ್ತೊಬ್ಬರು ಪ್ರಧಾನಮಂತ್ರಿಯಾಗಿರುತ್ತಾರೆ. It is different issue but CBI is an institution.

4.30 ಪಿ.ಎಂ

ನಿನ್ನೆ ಅಟಾರ್ನಿ ಜನರಲ್ ನರಿಮನ್‌ರವರು ಬೆಂಗಳೂರಿಗೆ ಬಂದಿದ್ದರು. ನಾರಿಮನ್‌ರವರು ಬೆಂಗಳೂರಿಗೆ ಬಂದಿದ್ದಾಗ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಪ್ರೆಸ್‌ನವರು ಅವರನ್ನು ಕೇಳಿದಾಗ ಅವರೇನು ಹೇಳಿದ್ದಾರೆಂದರೆ ಜುಡಿಶಿಯರಿ ಮಾಡತಕ್ಕಂಥ ತಪ್ಪನ್ನು ಎತ್ತಿ ಹಿಡಿಯಲಿಕ್ಕೆ ನಮಗೆ ಅಧಿಕಾರವನ್ನು ಕೊಡಬಾರದು ಎನ್ನತಕ್ಕ ಸರಿಯಾದ ಮಾತನ್ನು ಅವರು ಹೇಳಿದ್ದಾರೆ. ಅಸೆಂಬ್ಲಿಗೆ ಅದನ್ನು ಕೊಡಬಾರದು ಎಂದು ಹೇಳಿದ್ದಾರೆ. ಅದೇ ರೀತಿಯಲ್ಲಿ CBI is an institution wherein ಒಂದು ಡಿಸ್ಟೆನ್ಸ್‌ನ್ನು ಪೊಲಿಟಿಕಲ್ ಲೀಡರ್‌ಷಿಪ್‌ಗೂ, ಸಿಬಿಐ ಗೂ ನಾವು ಇಟ್ಟಿದ್ದೇವೆ. That has always been kept. ಸಿಬಿಐ ಡೈರೆಕ್ಟರ್ ಆಗತಕ್ಕಂಥವರು ವಿಜಿಲೆನ್ಸ್ ಕಮಿಷನರ್ ಆಗತಕ್ಕಂಥವರು ಈ ದೇಶದಲ್ಲಿ ಪಾರ್ಟಿ ಪಾಲಿಟಿಕ್ಸ್‌ನಿಂದ, ಗ್ರೂಪ್ ಪಾಲಿಟಿಕ್ಸ್‌ನಿಂದ ದೂರ ಇರುತ್ತಾರೆ ಎನ್ನುವ ಭಾವನೆ ನಮ್ಮಲ್ಲಿದೆ. ನನಗೆ ಗೊತ್ತಿದೆ. ನೀವು ನಾಗಪ್ಪನವರ ರಿಲೀಸ್‌ಗೆ ಪ್ರಯತ್ನ ಮಾಡಲಿಲ್ಲ ಎಂದು ನಾನು ಎಲ್ಲಿಯೂ ಹೇಳಲಿಲ್ಲ. ನಾನು ಒತ್ತಿ ಒತ್ತಿ ನಿಮಗೆ ಕನ್‌ವಿನ್ಸ್ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇನೆ. ನೀವು ಮಾಡಿರತಕ್ಕ ಸರಿಯಾದ ಕ್ರಮಗಳನ್ನೂ ಸಹಿತ ನಾನು ಹೇಳಿದ್ದೇನೆ. ಆದರೆ ನಿಮಗೆ ಗೊತ್ತಿಲ್ಲದೇ ಇರುವ ಹಾಗೆ ಆಡಳಿತದವರು ಎಲ್ಲಿ ತಪ್ಪು ಮಾಡಿದ್ದಾರೆ? ಬಹುಶಃ ಅದನ್ನು ಸರಿ ಮಾಡಿಕೊಂಡಿದ್ದಿದ್ದರೆ ಯಾವ ರೀತಿ ನಾಗಪ್ಪನವರನ್ನು ಬದುಕಿಸಬಹುದಾಗಿತ್ತು. ಇದು ಒಂದು ಭಾಗ. ಮತ್ತೊಬ್ಬರಿಗೆ ಈ ರೀತಿ ಆಗಬಾರದು ಎನ್ನತಕ್ಕ ದೃಷ್ಟಿಯಿಂದಾಗಿ ಯಾರು ತಪಿತಸ್ಥರು ಇದ್ದಾರೆ, ಆ ತಪ್ಪಿತಸ್ಥರುಗಳೇ ನ್ಯಾಯಾಧೀಶರುಗಳೂ ಸಹಿತ ಆಗುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಕೊಡಿ ಎಂದು ಕೇಳುತ್ತಿದ್ದೇವೆಯೇ ಹೊರತು ಬೇರೆ ಯಾವ ಉದ್ದೇಶದಿಂದ ಅಲ್ಲ. ನೀವೂ ಕೂಡ ಸದಸ್ಯರಿದ್ದೀರಿ. ಈಗ ವೈ.ಕೆ.ರಾಮಯ್ಯನವರು ಒಂದು ಅಭಿಪ್ರಾಯವನ್ನು ವ್ಯಕ್ತಮಾಡಿದರು. As a member he has got that right. ತಾವು ಅದನ್ನು ಸರಿ ಮಾಡಬೇಕೆಂದು ಹೇಳಿ ಯಾರದೇ ಭಾವನೆಗಳಿಗೆ ಧಕ್ಕೆ ಆಗುವ ರೀತಿಯಲ್ಲಿ ಮಾತನಾಡಬಾರದು ಎಂದು ತಾವು ಈ ಸದನಕ್ಕೆ ಮಾರ್ಗದರ್ಶನವನ್ನು ಮಾಡಿದಿರಿ. In a similar wat Prof.B.K.Chandrashekar is a minister of this Government. If this is the opinion of this Government about the CBI we have no objection.

ಪ್ರೊ.ಬಿ.ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಅದು ಸ್ವಲ್ಪ ಕನ್‌ಕ್ಲೂಷನ್ ಇದೆಯಲ್ಲಾ ಕಡೆಯವಾಕ್ಯ, ಮಾನ್ಯ ಸಿಂಧ್ಯಾರವರು ಏನು ಹೇಳಿದರು, ಅದೊಂದು ರೀತಿ ನಾನು ಮಾತನಾಡುತ್ತಿರುವುದಕ್ಕೆ ಡೀವಿಯೇಟ್ ಆಗುತ್ತದೆ. ನಾನು ಆ ಮಾತುಗಳನ್ನು ಹೇಳುತ್ತಿಲ್ಲ. "ದೂರದ ಬೆಟ್ಟ ನುಣ್ಣಗೆ" ಒಂದು ನಾವೇನು

ಮಾತನಾಡುತ್ತೇವೆ. ಸಿಬಿಐ ಹೆಚ್ಚು ಪರಿಣಾಮಕಾರಿ ಯಾಗಿದೆ ಎಂದೇನು ನಾವು ನಂಬಿಕೊಂಡಿದ್ದೇವೆ, ಅದು ಇಲ್ಲವೇನೋ ಎನ್ನುವುದಕ್ಕೆ ಕೆಲವು ಕೇಸ್‌ಗಳನ್ನು ಹೇಳುತ್ತಿದ್ದೇನೆ, ಅದು ಒಪಿನಿಯನ್ ಅಲ್ಲ. ಮಾನ್ಯ ಸಿಂಧ್ಯಾರವರಿಗೆ ಬಹಳ ಚೆನ್ನಾಗಿ ಗೊತ್ತು, ನಾನು ಹೇಳುತ್ತಿರುವುದು. I am not representing. I am nobody to represent the Chief Minister or the Home Minister. ಆ ಪಾಯಿಂಟನ್ನು ನಾನು ಹೇಳುತ್ತಿಲ್ಲ. ಜುಡಿಷಿಯಲ್ ಎನ್‌ಕ್ವೇರಿ ಬಗ್ಗೆಯೂ ಹೇಳುತ್ತೇನೆ. ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಅದು ಮಾತ್ರ ಹೇಳುತ್ತೇನೆ. ಏನು ಇದೆ, ಜುಡಿಷಿಯಲ್ ಎನ್‌ಕ್ವೈರಿಯಲ್ಲಿ, ಆಡಳಿತ ಲ್ಯಾಪ್ಸಸ್ ಬಗ್ಗೆ ಕೂಡ ತಾವು ಮಾತನಾಡಬಹುದು. ಇಲ್ಲಿ ಇಲ್ಲವೆಲ್ಲಾ. ಅದಕ್ಕೇ ಹೇಳುತ್ತಿದ್ದೇನೆ. ಅದು ಇಲ್ಲಿ ಇಲ್ಲಿ. ಬೇಸಿಕ್ ಮಿಸ್ಟೇಕ್ ನಾವು ಏನು ಮಾಡುತ್ತಿದ್ದೇವೆಂದರೆ ಅದು ಎನ್‌ಕ್ವೈರಿ ಎಂದು ಮಾಡುತ್ತಿದ್ದೇವೆ, It is not an inquiry. It cannot be an enquiry under the Constitution and under the Cr.P.C. It is only an investigation. ಮೂಲಭೂತವಾದ ವ್ಯತ್ಯಾಸ ಇದೆ. ನೆಗ್ಲೆಜೆನ್ಸ್ ಬಗ್ಗೆ ತಾವು ಮಾತನಾಡುತಿದ್ದೀರಿ. ನೆಗ್ಲಿಜೆನ್ಸ್ ಬಗ್ಗೆ ನೀವು ಸಿಬಿಐ ಮುಂದೆ ಚಕಾರ ಎತ್ತುವುದಕ್ಕೂ ಸಾಧ್ಯ ಇಲ್ಲ ಸಾರ್. ಇಲ್ಲವೇ ಇಲ್ಲ. You might as weel forget about it. ನನಗೆ ಗೊತ್ತು. ಸಿಬಿಐ ಗೆ ಟೈಮ್ ಲಿಮಿಟ್ ಇದೆ. ಜುಡಿಷಿಯಲ್ ಎನ್‌ಕ್ವೈರಿಗೆ ಇಲ್ಲ ಎಂದು ಹೇಳಬಹುದು. ಸ್ವಾಚ್ಯೂಟ್ ಪ್ರಕಾರ ಜುಡಿಷಿಯಲ್ ಎನ್‌ಕ್ವೈರಿಗೂ ನಾಲ್ಕು ತಿಂಗಳ ಸಮಯ ಇದೆ. ಎಲ್ಲಾ ಸರ್ಕಾರಗಳೂ ಕೂಡ ಅದನ್ನು ಎಕ್ಸ್‌ಟೆಂಡ್ ಮಾಡುತ್ತಾ ಬಂದಿದೆ. ಆದರೆ ಆದುಹೇಗೆ ಕೆಲಸ ಮಾಡಿದೆ, ಇಲ್ಲ ಎನ್ನುವುದಕ್ಕೆ ಕೆಲವು ಅಂಕಿ ಅಂಶಗಳನ್ನು ಕಲೆಕ್ಟ್ ಮಾಡುವುದಕ್ಕೆ ನಾನು ಪ್ರಯತ್ನ ಪಟ್ಟೆ. 1990 ರವರಿಗೆ ಮಾನ್ಯ ಸಿಂಧ್ಯಾರವರೂ ಕೂಡ ಗೃಹಸಚಿವರಾಗಿದ್ದರು. ಜುಡಿಷಿಯಲ್ ಎನ್‌ಕ್ವೈರಿ ಮಾಡಿದ ಕಮಿಷನ್‌ಗಳು ಕೊಟ್ಟ ಎಲ್ಲಾ ರಿಪೋರ್ಟ್‌ಗಳಲ್ಲೂ ಎರಡು ರೀತಿ ಕನ್‌ಕ್ಲೂಷನ್ ಆಗಿದೆ. ಒಂದು, ಯಾರು ತಪ್ಪಿತಸ್ಥರು ಎಂದು ಹೇಳುವ ವಿಚಾರ ಒಂದು. ಮತ್ತೊಂದು, ಕ್ಯಾಬಿನೆಟ್ ಸಬ್ ಕಮಿಟಿಗಳನ್ನು ಫಾರಂ ಮಾಡಿ ಲೆಜಿಸ್‌ಲೇಚರ್‌ನ ಈ ಟೇಬಲ್ ಮೇಲೆ ರಿಪೋರ್ಟನ್ನು ಮಂಡಿಸಿದ್ದಾರೆ. for action to be taken by any Government, that was the Government of the day. ಅಂದರೆ ವೇಗ್ ಆಗಿ ಬಿಟ್ಟಿಲ್ಲ. 1990 ನಂತರ 15 ಜುಡಿಷಿಯಲ್ ಎನ್‌ಕ್ವೈರಿ ಕಮಿಷನ್ಸ್‌ಗಳಾಗಿವೆ, to the extent I could gather figures. ಅದರ ಫೈಂಡಿಂಗ್ಸ್‌ನ್ನು ಎಂಟು ಕೇಸ್‌ನಲ್ಲಿ ಸರ್ಕಾರಗಳು ಒಪ್ಪಿಕೊಂಡಿವೆ. ಕ್ಯಾಬಿನೆಟ್ ಸಬ್ ಕಮಿಟಿ ಮಾಡಿರುವುದು 3 ಕೇಸ್‌ನಲ್ಲಿ 8+3=11 ಆಯಿತು. ಇನ್ನು ಪ್ರೋಗ್ರೆಸ್‌ನಲ್ಲಿರುವುದು ನಾಲ್ಕು ಜುಡಿಷಿಯಲ್ ಎನ್‌ಕ್ವೈರಿ ಕಮಿಷನ್‌ಗಳು. ಒಟ್ಟು 15. ಇದನ್ನು ದಯವಿಟ್ಟು ಕಂಪೇರ್ ಮಾಡಿ. CBI prosecution success rate is just 10% ಎಲ್ಲಿಂದ ಎಲ್ಲಿಗೆ ಹೋಲಿಸುವುದಕ್ಕೆ ಆಗುತ್ತದೆ ಸಾರ್ ನಾವು. this rate of report and success of judicial enquiry commissions is extraordinarily impressive. ನಾನು ಆ ಕಮಿಷನ್, ಈ ಕಮಿಷನ್, ಎಲ್ಲಾ ಸರ್ಕಾರಗಳ ವ್ಯಾಪ್ತಿಯಲ್ಲಿ ಬಂದಿರುವುದನ್ನೇ ನಾನು ಹೇಳುತ್ತಿರುವುದು. ಜುಡಿಷಿಯಲ್ ಕಮಿಷನ್. 15ರಲ್ಲಿ 8ನ್ನು ಅಕ್ಸೆಪ್ಟ್ ಮಾಡಿಕೊಂಡು

ಮೂರು ಕ್ಯಾಬಿನೆಟ್ ಬಲ್ ಕಮಿಟಿ ಮಾಡಿ 4 ಪ್ರೋಗ್ರೆಸ್‌ನಲ್ಲಿವೆ ರಿಪೋರ್ಟ್‌ಗಳು. ಈ ವಿಚಾರವನ್ನು ನಾನು ಹೇಳುತ್ತಿದ್ದೇನೆಯೇ ಹೊರತು ಒಪ್ಪಿನಿಯನ್ ಆಗಲಿ ಅಥವಾ ಸಿಬಿಐ is not a good institution ಎಂದು ನಾನು ಹೇಳುತ್ತಿಲ್ಲ. ಅಲ್ಲೂ ಅದಕ್ಕೆ ಇತಿಮಿತಿಗಳು ಇವೆ ಎನ್ನತಕ್ಕಂಥ ವಿಚಾರವನ್ನು ಹೇಳುತ್ತಿದ್ದೇನೆ. ನಾವು ಅಂದುಕೊಂಡಷ್ಟು ಅವರು ಸಲೀಸಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಎಂದು ಹೇಳುತ್ತಿದ್ದೇನೆ. ಆದಕ್ಕೆ ಇಂಗ್ಲೀಷ್‌ನಲ್ಲಿ ಹೇಳುತ್ತಾರಲ್ಲಾ, Why do you use a surgeon's knife or push a surgeon's knie into a ploushing field. ಯಾವುದೋ ಹೊಲಕ್ಕೆ ಒಬ್ಬ ಸರ್ಜನ್ ಆಪರೇಷನ್ ಥಿಯೇಟರ್‌ನಲ್ಲಿ ಉಪಯೋಗಿಸುವ ಚಾಕನ್ನು ತೆಗೆದುಕೊಂಡು ಹೋಗಿ ಆಗೆದಂತೆ. ಇದನ್ನೂ ನಾವು ಮಾಡುತ್ತಿರುವ ಡಿಮ್ಯಾಂಡ್ ಎಂದು ಮಾತ್ರ ನಾನು ಹೇಳುತ್ತಿದ್ದೇನೆ. ಇದು ನಾವು ಆಗುತ್ತದೆ ಅಂದುಕೊಂಡಂಥ ಇಂಪ್ರೆಸ್ಸೀವ್ ರೆಕಾರ್ಡ್ ಇಲ್ಲ. ಬಹಳ ಕಾಮೆಂಟ್ಸ್ ಇದೆ. ಸಿಬಿಐ ಪ್ರೋಗ್ರೆಸ್ ಮೇಲೆ. ನಾನು 1998ರ ರಿಪೋರ್ಟ್, ಆ ಕೇಸ್ ಬಗ್ಗೆ ಏನು ಹೇಳಿದೆ. ವಿನೀತ್ ನಾರಾಯಣ ಕೇಸ್, ಅದಾದ ಮೇಲೆ ಸಿಬಿಐ ಸಂಸ್ಥೆಯನ್ನು ಕೊಂಚಮಟ್ಟಿಗೆ ಸುಧಾರಿಸುವ ದಿಕ್ಕಿನಲ್ಲಿ ಸುಪ್ರೀಂ ಕೋರ್ಟ್ ಆದೇಶ ಮಾಡಿ ಸ್ವಲ್ಪ ಮಟ್ಟಿಗೆ ಯಶಸ್ವಿ ಕೂಡ ಆಗಿದೆ. "CBI "is not an useful organisation ಎಂದು ನಾನು ಖಂಡಿತಾ ಹೇಳುತ್ತಿಲ್ಲ. How can we say? ಆದರೆ ಅದರ ಇತಿಮಿತಿ ಬಹಳ ಸ್ಪಷ್ಟವಾಗಿದೆ. ಇದನ್ನು ಅರಿತುಕೊಳ್ಳದೆ ಅದರ ಲೀಗಲ್ ಬೇಸಿಸ್ ಗೊತ್ತಿಲ್ಲದೆ ಬಹುತೇಕ ಜನ ಎಲ್ಲೋ ಒಂದು ಕಡೆ ಅದನ್ನು ಮಾಡಿಬಿಟ್ಟರೆ ಎಲ್ಲವೂ ನಮಗೆ ಗೊತ್ತಾಗಿಬಿಡುತ್ತೆ ಏನೋ ಆಗುತ್ತೆ ಎನ್ನುವ ಮಾತನ್ನು ಹೇಳುತ್ತಿದ್ದಾರೆ. It is absolutely and totaly without foundation. ಅಷ್ಟು ಮಾತ್ರ ನಾನು ಹೇಳುತ್ತೇನೆ ಸಾರ್ ಧನ್ಯವಾದಗಳು.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಉಪಾಧ್ಯಕ್ಷರೇ, ಈಗ ಸಿಬಿಐ ಇನ್‌ವೆಸ್ಟಿಗೇಷನ್‌ಗೆ ವಹಿಸಬೇಕಾದರೆ ನಮ್ಮ ಸಚಿವರು ಮಾತನಾಡುತ್ತಾ ಹೇಳಿದರು, ಯಾವುದೇ ಹೆಸರುಗಳು ಮೆನ್‌ಷನ್ ಆಗದೇ ಇದ್ದಾಗ ಅಂಥವುಗಳನ್ನು ಸಿಬಿಐ ಯಲ್ಲಿ ಎನ್‌ಕ್ವೈರಿ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆ ಕಾರಣಕ್ಕೆ ಇದು ಅಷ್ಟೊಂದು ಸೂಕ್ತವಾಗುವುದಿಲ್ಲ ಎನ್ನುವಮಾತನ್ನು ಹೇಳಿದ್ದಾರೆ. 25 ನೇ ತಾರೀಖು ಏನು ನಾಗಪ್ಪನವರ ಅಪಹರಣವಾಯಿತು, ಅವತ್ತೇ ಕೊಳ್ಳೇಗಾಲ ರೂರಲ್ ಪೋಲೀಸ್ ಸ್ಟೇಷನ್‌ನಲ್ಲಿ ಅಬ್‌ಡಕ್ಷನ್ ಕೇಸ್ ರಿಜಿಸ್ಟರ್ ಆಗಿದೆ. ಎಫ್.ಐ.ಆರ್.ಹಾಕಿದ್ದಾರೆ. ಅದಾದಮೇಲೆ 8ನೇ ತಾರೀಖು ನಾಗಪ್ಪನವರ ಹತ್ಯೆಯಾಗಿ ಅವರ ಬಾಡಿ ಟ್ರೇಸ್ ಆದಮೇಲೆ ಅದನ್ನು ಐ.ಪಿ.ಸಿ. 302ಗೆ ಕನ್‌ವರ್ಟ್ ಮಾಡಿದ್ದಾರೆ. ಅದರಲ್ಲಿ ಆರೋಪಿಗಳು ವೀರಪ್ಪನ್, ಸೇತುಕುಳಿ ಗೋವಿಂದನ್, ಚಂದ್ರೇಗೌಡ ಮತ್ತು ಇತರರು ಎಂದು ಮೆನ್‌ಷನ್ ಮಾಡಿದ್ದಾರೆ. ಅಲ್ಲಿಗೆ ಈಗಾಗಲೇ ಪೋಲೀಸರಲ್ಲಿ ಒಂದು ಕೇಸ್ ವಿತ್ ನೇಮ್ ರಿಜಿಸ್ಟರ್ ಆಗಿದೆ. ರಿಜಿಸ್ಟರ್ ಆದಮೇಲೆ ಈ ಇನ್‌ವೆಸ್ಟಿಗೇಷನ್, ಈ ಕೇಸ್ ಪೋಲಿಸ್ ಸ್ಟೇಷನ್‌ನಲ್ಲಿ ರಿಜಿಸ್ಟರ್ ಆದಮೇಲೆ ಅದನ್ನು ಪೋಲೀಸ್ ಇನ್‌ವೆಸ್ಟಿಗೇಷನ್ ಮಾಡದೆಯೇ ಎನ್‌ಕ್ವೈರಿ ಯಾವ ರೀತಿ ಮಾಡುತ್ತಾರೆ?

ಪ್ರೊ: ಬಿ.ಕೆ.ಚಂದ್ರ ಶೇಖರ್: ಮಾನ್ಯ ಉಪಾಧ್ಯಕ್ಷರೇ, ನನ್ನ ಪಾಯಿಂಟ್ ಅದಲ್ಲ. ನಾನು ಹೆಸರು ಹೇಳುವುದಕ್ಕಾಗುವುದಿಲ್ಲ, ಸಾಕ್ಷಿ ಪುರಾವೆಗಳ ಮೂಲ ಹೇಳುವುದಕ್ಕಾಗುವುದಿಲ್ಲ ಎಂದು ಹೇಳಲಿಲ್ಲ. ಸಿಬಿಐ ಇನ್‌ವೆಸ್ಟಿಗೇಷನ್ ಮಾಡುವಾಗ ಅವರು ಛಾರ್ಜ್‌ಶೀಟನ್ನು ಫ್ರೇಮ್ ಮಾಡುತ್ತಾರಲ್ಲಾ, ಆಗ ಮಾತ್ರ ಅವರು ಹೆಸರುಗಳನ್ನು ಹೊರಗಡೆ ತರಬಹುದು. ಇನ್‌ವೆಸ್ಟಿಗೇಟಿವ್ ಪ್ರೊಸಸ್‌ನಲ್ಲಿ ಯಾವುದೇ ಮೂಲ, ಯಾವುದೇ ಹೆಸರನ್ನು ಅವರು ಹೊರಗಡೆ ಹಾಕಲಿಕ್ಕೆ ಸಾಧ್ಯವಿಲ್ಲ. ಅಧಿಕೃತವಾಗಿ ಆಗುವುದಿಲ್ಲ ಅದು.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಉಪಾಧ್ಯಕ್ಷರೇ, ನ್ಯಾಯಾಂಗ ತನಿಖೆಯಲ್ಲಿ ಆರೋಪಿಗಳು ಯಾರ‍್ಯಾರು ಎನ್ನುವುದನ್ನು ತಿಳಿಸುವುದಕ್ಕೆ ನೀವು ನ್ಯಾಯಾಂಗ ತನಿಖೆಯನ್ನು ಮಾಡುತ್ತೀರಿ. ಈಗ ಆಲ್‌ರೆಡಿ ಪೋಲೀಸ್ ಸ್ಟೇಷನ್‌ನಲ್ಲಿ ಆರೋಪಿಗಳು ಯಾರ‍್ಯಾರು ಎಂದು ಮೆನ್‌ಷನ್ ಆಗಿರುವುದರಿಂದ ಈ ಕೇಸ್‌ನ ಫ್ಯೂಚರ್ ಏನು?

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬಹ್ಮಾವರ): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರು ಹೇಳಿದರು, ಕಾಣದ ಕೈಗಳೇನಾದರೂ ಇಲ್ಲಿ ಹಸ್ತಕ್ಷೇಪ ಎಂದು. ಇಲ್ಲಿ ಅದು ಇಲ್ಲ. ಆ ಅನುಮಾನ ನಮಗೆ ಇಲ್ಲ. ಕಾಣದ ಕೈಗಳು ಜುಡಿಷಿಯಲ್ ಎನ್‌ಕ್ವೈರಿಯಲ್ಲಿ ಹಸ್ತಕ್ಷೇಪ ಮಾಡುತ್ತವೆ ಎನ್ನುವ ಅನುಮಾನ ಇಲ್ಲ. ಇನ್‌ವೆಸ್ಟಿಗೇಷನ್ ಆಗಲೇಬೇಕಾಗುತ್ತದೆ. ಜುಡಿಷಿಯಲ್ ಎನ್‌ಕ್ವೈರಿ ಆದರೂ ಸಹಿತ ಇನ್‌ವೆಸ್ಟಿಗೇಷನ್ ಆಗಲೇಬೇಕಾಗುತ್ತದೆ. Without investigation ಜುಡಿಷಿಯಲ್ ಎನ್‌ಕ್ವೈರಿಗೆ ನೀವು ಮೆಟೀರಿಯಲ್‌ನ್ನು ಸಪ್ಲೈ ಮಾಡಲಿಕ್ಕಾಗುವುದಿಲ್ಲ. ಆದ್ದರಿಂದ ಇನ್‌ವೆಸ್ಟಿಗೇಷನನ್ನು ನೀವು ಏನು ಮಾಡುತಿದ್ದೀರಿ ಅದು ಸಿಬಿಐ ಇನ್‌ವೆಸ್ಟಿಗೇಷನ್ ಆಗಲಿ, ಏಕೆಂದರೆ there are three states involved in this ಈಗ ನಮ್ಮ ಪೋಲೀಸರು ತಮಿಳುನಾಡಿಗೆ ಹೋಗಿ ತನಿಖೆಯನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಜುಡಿಷಿಯಲ್ ಎನ್‌ಕ್ವೈರಿಗೆ ನೀವು ಇನ್‌ವೆಸ್ಟಿಗೇಷನನ್ನು ಮಾಡುವಾಗ ಬರೀ ಕರ್ನಾಟಕ ಪೋಲೀಸರು ಇನ್‌ವೆಸ್ಟಿಗೇಷನ್‌ನ್ನು ಮಾಡಿ ರಿಪೋರ್ಟ್‌ನ್ನು ಕೊಟ್ಟರೆ ಸಾಕಾಗುತ್ತದಾ? ಸಾಕಾಗುವುದಿಲ್ಲ. ಆದ್ದರಿಂದ ಸಿಬಿಐ ನವರು ತನಿಖೆಯನ್ನು ಮಾಡಿದಾಗ ಮಾತ್ರ ತಮಿಳುನಾಡಿನವರು ಏನು ಮಾಡಿದ್ದಾರೆ, ಕೇರಳ ಭಾಗದಲ್ಲಿ ಏನು ಆಗಿದೆ, ಕರ್ನಾಟಕದಲ್ಲಿ ಏನು ಆಗಿದೆ, ಇದನ್ನು ಸಿಬಿಐ ಎನ್‌ಕ್ವೈರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಖಂಡಿತವಾಗಿ ಈ ನ್ಯಾಯಾಂಗ ತನಿಖೆಯಲ್ಲಿ ಸಂಪೂರ್ಣವಾಗಿ ಹೊರಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪ್ರೊಫೆಸರ್ ರವರು ಸಿಬಿಐ ವಿಫಲತೆ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಾ ಮೂರು ಅಂಶಗಳನ್ನು ಇಲ್ಲಿ ಕೋಟ್ ಮಾಡಿದರು. ನ್ಯಾಯಾಂಗ ವಿಚಾರಣೆಯಲ್ಲಿ ಇದುವರೆಗೂ ವಿಚಾರಣೆ ಆಗಿರುವುದಕ್ಕೆ ಎಷ್ಟು ಸಕ್ಸಸ್ ಆಗಿವೆ ಎಂಬುದನ್ನೂ ಕೂಡ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಚಿಕ್ಕವನಾಗಿ ಕೇಳತಕ್ಕಂಥದ್ದೇನೆಂದರೆ ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕು. ಈ ನ್ಯಾಯಾಂಗ ತನಿಖೆಯನ್ನು ಇವತ್ತು ಮಾಡುವುದಕ್ಕೆ ಒಂದು ಸರ್ಕಾರ ನಿರ್ಧಾರ ಮಾಡಿದೆ. ಇದರ ವಿಸ್ತರಣೆ ಏನು? ಮಾನ್ಯ ಜಯಪ್ರಕಾಶ್ ಹೆಗಡೆಯವರು ಹೇಳಿದ ಹಾಗೆ can a Judicial body constituted by

the State Government can they enquire Tamil Nadu counterpart? ಎನ್ನುವುದೂ ಕೂಡ ಮುಂದೆ ಬರತಕ್ಕಂಥದ್ದು. ಹಾಗಾಗಿ ಇದು ಎರಡೂ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವಾದ್ದರಿಂದ ಇದು ಎಷ್ಟರಮಟ್ಟಿಗೆ ಈ ಒಂದು ಸಮಿತಿ ನಮ್ಮ ರಾಜ್ಯದಿಂದ ಸ್ಥಾಪನೆ ಆಗಿದೆ? ಅದು ಎಷ್ಟರಮಟ್ಟಿಗೆ ತಮಿಳುನಾಡಿನ ಭಾಗದಲ್ಲಿ ವಿಚಾರಣೆ ಮಾಡಬಹುದು ಎನ್ನುವುದಕ್ಕೆ ಬೆಳಕು ಚೆಲ್ಲಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಒಂದು ಉದಾರಣೆಯನ್ನು ಮಾನ್ಯ ಸಚಿವರು ಕೊಟ್ಟರು. ವಿ.ಕೃಷ್ಣಮೂರ್ತಿಯವರದ್ದು, ಮಾರುತಿ ಉದ್ಯೋಗ್‌ನವರ ವಿಚಾರ. ನಮ್ಮಲ್ಲಿ ತಪ್ಪುಗಳು ಆಗಿಲ್ಲ. ಡಾ. ಮಂಜುನಾಥ, ಚಿಕ್ಕಮಗಳೂರು ಕೇಸು. ಹೆಂಡತಿ ಸತ್ತಾಗ ಗಂಡನನ್ನು ಜೈಲಿಗೆ ಹಾಕಿ 6 ತಿಂಗಳುಗಳ ಕಾಲ ಒಳಗೆ ಇಟ್ಟರು. ಕೊನೆಗೆ ಯಾವುದೋ ಒಂದು ಇನ್‌ವೆಸ್ಟಿಗೇಷನ್ ಮಾಡುವಾಗ ಕಲ್‌ಪ್ರಿಟ್ ಸಿಕ್ಕಿದಾಗ ಗಂಡನ ಬಿಡುಗಡೆ ಆಯಿತು. ಅದು ಹ್ಯುಮಿಲಿಯೇಷನ್ ಆಗಲಿಲ್ಲ-ವಾ? ಇದು ಸಿಓಡಿ. ಕರ್ನಾಟಕ ಸಿಓಡಿ ಮಾಡಿರುವಂತಹ ಇಂತಹ ತಪ್ಪುಗಳು, ಅಲ್ಲಿ ಸಿಬಿಐನಲ್ಲೂ ಆಗುತ್ತದೆ. ಸಿಓಡಿಯಲ್ಲೂ ಆಗುತ್ತದೆ.

ಪ್ರೊ: ಬಿ.ಕೆ ಚಂದ್ರಶೇಖರ್: ಮಾನ್ಯ ಗೃಹ ಮಂತ್ರಿಯವರು ಈಗ ಮಾತನಾಡುತ್ತಾರೆ ಒಂದೇ ಒಂದು ಮಾತು ಹೇಳಿ ಬಿಡಬೇಕು. ಡಾ: ಚಿತ್ತರಂಜನ್ ಕೇಸ್, ಸಿಬಿಐಗೆ ಕೊಟ್ಟಿದ್ದೇವೆ. ಬಹಳ ದಿವಸ ಆಯಿತು. ನಾನು ಇಲ್ಲಿ ಮಾಡಿದ್ದೇಲ್ಲಾ ಸರಿ ಇರುತ್ತದೆ, ಅವರು ಮಾಡಿದ್ದು ತಪ್ಪು ಎಂದು ಖಂಡಿತ ಹೇಳುತ್ತಿಲ್ಲ. ಎಲ್ಲದರಲ್ಲೂ ತಪ್ಪು ಇರುವುದನ್ನು ನಾನು ಒಪ್ಪುತ್ತೇನೆ. ಆದರೆ ಆ ಜುಡಿಷಿಯಲ್ ಎನ್‌ಕ್ವೈರಿಗೆ ಇರುವ ಸ್ಕೋಪ್ ಏನು ಇದೆ ಅದು ಇದಕ್ಕಿಲ್ಲ. ಎರಡನೆಯದು ಜುಡಿಷಿಯಲ್ ಎನ್‌ಕ್ವೈರಿ ಮಾಡಿದರೆ ತಮಿಳುನಾಡು ಸರ್ಕಾರನ್ನಾ ಅಥರಾ ತಮಿಳುನಾಡು ಸರ್ಕಾರಕ್ಕೆ ಸೇರಿದವರನ್ನು ವಿಚಾರಣೆ ಮಾಡಬಹುದಾ ಎಂದರೆ ಖಂಡಿತ ಮಾಡಬಹುದು. It depends on the co-operation of the Government of India ಒಂದು ನೋಟಿಫಿಕೇಶನ್ ಅವರು ಒಪ್ಪಿಸಿಕೊಟ್ಟರೆ ಆಯಿತು. ದುರದೃಷ್ಟವಾಶತ್ ಮಾನ್ಯ ಲಾಲ್ ಕೃಷ್ಣ ಅಡ್ವಾನಿಯವರು ತಮಿಳುನಾಡಿನ ಎಸ್‌ಟಿಎಫ್ ಇದರಲ್ಲಿ ಪಾತ್ರ ವಹಿಸಿಲ್ಲ ಎಂದು ಹೇಳಿರುವ ವಿಚಾರ ಯಾವುದೋ ಪತ್ರಿಕೆಯಲ್ಲಿ ಬಂದಿತ್ತು. ನನಗೆ ಗೊತ್ತಿಲ್ಲ. ಗೃಹ ಮಂತ್ರಿಗಳು ರೆಫರೆನ್ಸ್ ಮಾಡಿದ್ದನ್ನು ನಾನು ನೋಡಿಲ್ಲ. ಈ ತರಹ ಆದಾಗ ಇದು ಯಾವ ರೀತಿ ಆಗುತ್ತದೆ ಎಂಬುದು ಗೊತ್ತಿಲ್ಲ. ಆದರೆ ಖಂಡಿತ ಮಾಡಬಹುದು.

ಶ್ರೀ ಎ.ಆರ್.ಕೃಷ್ಣಮೂರ್ತಿ: ತಮಿಳುನಾಡಿನ ಸಹಕಾರ ಇದ್ದರೆ ಮಾತ್ರ ಎಂಬ ಪ್ರಶ್ನೆ ತಾವು ಮುಂದೆ ಇಟ್ಟಿದ್ದೀರಿ. ಇದು ಎಷ್ಟರಮಟ್ಟಿಗೆ ಸಾಧ್ಯ ಎನ್ನುವುದನ್ನು ತಾವೇ ಊಹಿಸಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಉಪಾಧ್ಯಕ್ಷರೆ, ನಾನು ಈಗ ಹೆಚ್ಚು ಹೊತ್ತು ಸಮಯ ತೆಗೆದುಕೊಳ್ಳುವುದಿಲ್ಲ. ಸರ್ಕಾರ ಯಾವುದನ್ನು ಮಾಡಬಹುದಿತ್ತು, ಯಾವುದನ್ನು ಮಾಡಬಾರದಿತ್ತು ಎಂದು ಚರ್ಚೆಯನ್ನು ಮಾಡುವಾಗ ಮುಂದೆ ಏನು ಮಾಡಬಹುದಿತ್ತು ಎನ್ನುವ ಬಗ್ಗೆ ಚರ್ಚೆಯನ್ನು ಮಾಡಬೇಕಾಗುತ್ತದೆ. ಈಗ ಬೇಲ್ ಅಪ್ಲಿಕೇಷನ್ ಬಗ್ಗೆ ಬಹಳಷ್ಟು ಜನ ಕಾಳಜಿ ವಹಿಸಿ ಚರ್ಚೆಯನ್ನು ಮಾಡುತ್ತೇವೆ. ಕೊಳತ್ತೂರು ಮಣಿ ಕಡೆಯವರು ಬೇಲ್ ಅರ್ಜಿ

ಹಾಕಲಿಲ್ಲ ಎನ್ನುವುದನ್ನು ಮಾನ್ಯ ಕಾನೂನು ಸಚಿವರು ನಿನ್ನೆ ತಿಳಿಸಿದರು. ಆದರೆ ಸರ್ಕಾರ ಏನು ತೀರ್ಮಾನವನ್ನು ಕೇಸಸ್ ವಿತ್‌ಡ್ರಾ ಮಾಡುವ ಬಗ್ಗೆ 321, ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ವಾಪಸ್ ಪಡೆಯಬೇಕೆಂಬ ತೀರ್ಮಾನತೆಗೆದುಕೊಳ್ಳುವುದನ್ನು ಸ್ವಲ್ಪ ತಡಮಾಡಿದ್ದರಿಂದ ಮಾನ್ಯ ದಿವಂಗತ ನಾಗಪ್ಪ ಹಾಗೂ ಅವರ ಕುಟುಂಬದವರಿಗೆ ಅನ್ಯಾಯ ಮಾಡಿದ್ದೇವೆ ಎಂದು ನನಗೆಲ್ಲೋ ಒಂದು ಕಡೆ ಅನ್ನಿಸುತ್ತದೆ. ಏಕೆಂದರೆ delay in justice has denied the justice to his family. ಏನಾಗುತ್ತದೆ ಅಂದರೆ, ಅವತ್ತು ಕೇಸನ್ನು ವಿತ್‌ಡ್ರಾ ಮಾಡುವುದಕ್ಕೆ ಅವಕಾಶ ಇತ್ತು. ಅದರ ಬಗ್ಗೆ ನಿನ್ನೆ ಚರ್ಚೆ ಆಯಿತು. ಎಕ್ಸ್‌ಪ್ಲೋಸೀವ್ ಆಕ್ಟ್‌ನಲ್ಲಿ ಕೇಸಸ್ ಅನ್ನು ವಿತ್‌ಡ್ರಾ ಮಾಡಲಿಕ್ಕೆ ಆಗುತ್ತದೆ ಆರ್ಮ್ಸ್ ಕೇಸಸ್‌ನಲ್ಲಿ ವಿತ್ ಡ್ರಾ ಮಾಡುವುದಕ್ಕೆ ಆಗುತ್ತದಾ? ಎಂದು ಆದರೆ 321 ರಲ್ಲಿ ಅಪ್ಲಿಕೇಷನ್ ಅನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಹಾಕುತ್ತಾರೆ ಅಲ್ಲಿ ರೀಅಪ್ರೀಶಿಸಿಯೇಷನ್ ಆಫ್ ಎವಿಡೆನ್ಸ್ ಬರುವುದಿಲ್ಲ 321ನಲ್ಲಿ ಸರ್ಕಾರದ ತೀರ್ಮಾನವನ್ನು ತೆಗೆದುಕೊಂಡು ಪಬ್ಲಿಕ್ ಪ್ರಾಸಿಕ್ಯೂಟರ್ ಅಪ್ಲಿಕೇಷನ್ ಅನ್ನು ಕೋರ್ಟ್ ಮುಂದೆ ಹಾಕಲು ಹೇಳುತ್ತದೆ. ಆದರೆ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಕಿದಂತಹ ಅರ್ಜಿ ಸರಿಯೋ ತಪ್ಪೋ ಎಂದುದನ್ನು ಕೋರ್ಟ್ ತೀರ್ಮಾನ ಮಾಡುವುದಿಲ್ಲ. ಕೋರ್ಟ್ ಏನನ್ನು ತೀರ್ಮಾನ ಮಾಡುತ್ತದೆ? whether he has applied his mind while filing the application ಎನ್ನುವುದನ್ನು ಮಾತ್ರ ತೀರ್ಮಾನ ಮಾಡುತ್ತದೆ. ಆದನ್ನು ಬಿಟ್ಟರೆ ಅಲ್ಲಿ ರೀಅಪ್ರೀಶಿಯೇಕ್ಷನ್ ಅಫ್ ಎವಿಡೆನ್ಸ್ ಇಲ್ಲ. ಅತಿ ಸುಲಭ ಆಗುತ್ತಿತ್ತು. ಸರ್ಕಾರ ಬೇಲ್ ಅಪ್ಲಿಕೇಶನ್ ಆಲೋಚನೆ ಮಾಡಿ ಎಷ್ಟು ತಲೆ ಕೆಡಿಸಿಕೊಂಡರು ಅದಕ್ಕೆ ಬದಲಾಗಿ 321 ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಅಪ್ಲೀಕೇಶನ್ ಹಾಕಿದ್ದರೆ ಸರಿಯಾಗುತ್ತಿತ್ತು. ಆದರ ಬಗ್ಗೆ ಸುಪ್ರೀಂ ಕೋರ್ಟ್ ಆದೇಶದ ಬಗ್ಗೆ ಮಾನ್ಯ ಚಂದ್ರಶೇಖರ್ ಅವರು ಹೇಳಿದರು. ಸುಪ್ರೀಂ ಕೋರ್ಟ್ ಆದೇಶದ ಬಗ್ಗೆ ನಾನು ಇಲ್ಲಿ ಒಂದು ಕಡೆ ಹೇಳುತ್ತೇನೆ. 321 ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ withdrawal from Prosecutions: " Course of Public Prosecutor's executive discretions to act independently in place of Government instructions or suggestions for withdrawal from Prosecutions. Public Prosecutor's request is subject to judicial discretion of the court before it accedes to request. Nature and scope of trial, codes for explain". ಇದು ಪ್ಯಾರಾ 72ರಲ್ಲಿ ಪುನಃ ಇದನ್ನು ಹೇಳುತ್ತಾರೆ. ನಾನು ಒಂದೆರಡು ಪ್ಯಾರಾವನ್ನು ಓದಿ ಕೆಲವು ಬೇರೆ ವಿಷಯಕ್ಕೆ ಟಚ್ ಮಾಡುತ್ತಿದ್ದೇನೆ. ಇದರಲ್ಲಿ ಏನಾಗಿದೆ ಎಂದರೆ ಒಂದು Shivanandan Paswan ಎಂದು ಅವರು ಒಂದು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಹಾಕುತ್ತಾರೆ. ಹಿಂದೆ ಬಿಹಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇತರ ಸಚಿವರ ಮೇಲೆ ಹಾಕಿದಂತಹ ಕೇಸುಗಳನ್ನು ವಾಪಸ್ ಪಡೆದ ಬಗ್ಗೆ. ಅಲ್ಲಿ ಅದರ ಬಗ್ಗೆ ಚರ್ಚೆ ಆಗುತ್ತದೆ. ಇದನ್ನು ವಾಪಸ್ ಪಡೆದಿದ್ದು ಸರಿಯಾ? ಎಂದು ಚರ್ಚೆ ಆಗುತ್ತದೆ. ಆದರಲ್ಲಿ ಕೋರ್ಟಿನವರು ಏನು ಹೇಳುತ್ತಾರೆ ಎಂದರೆ The public Prosecutor is the counsel of the Government. ಗವರ್ನಮೆಂಟ್ ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಅದನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಮಾಡಬೇಕಾಗುತ್ತದೆ ಎನ್ನುವುದನ್ನು ಕ್ಲಿಯರ್ ಆಗಿ ಎಕ್ಸ್‌ಪ್ಲೈನ್ ಮಾಡಿ they further go to the case ಜಾರ್ಜ್ ಫರ್ನಾಂಡಿಸ್ ಅವರ ಮೇಲೆ ಎಕ್ಸ್‌ಪ್ಲೊಸೀವ್ ಆಕ್ಟ್‌ನಲ್ಲಿ ಕೇಸನ್ನು ರಿಜಿಸ್ಟರ್ ಮಾಡಿದ್ದರು ಹಿಂದೆ ಎಮರ್ಜೆನ್ಸಿಯಲ್ಲಿ ರೈಲ್ವೆ ಲೈನನ್ನು ಬ್ಲಾಸ್ಟ್ ಮಾಡಿದ್ದರು ಎಂದು ಅದರ ಬಗ್ಗೆ ಚರ್ಚೆಯನ್ನು ಮಾಡುತ್ತಾ ಕೇಸಸ್ ವಿತ್‌ಡ್ರಾ ಆಯಿತು. ಅದರಲ್ಲಿ ಏನಾಗಿದೆ ಎಂದರೆ ಇಬ್ಬರು ಅಕ್ಯೂಸ್ಡ್‌ಗೆ ಅಕ್ವಿಟಲ್ ಆಗುತ್ತದೆ. ಇಬ್ಬರಿಗೆ ಕನ್‌ವಿಕ್ಷನ್ ಆಗುತ್ತದೆ. ನಂತರ ಕೇಸಸ್ ಅನ್ನು ವಿತ್‌ಡ್ರಾ ಮಾಡಿದ್ದು ಇದರಲ್ಲಿದೆ. ಆ ಕೇಸಸ್‌ನಲ್ಲಿ ವಿತ್‌ಡ್ರಾ ಆಯಿತು. ಅದರಲ್ಲಿ ಏನಾಗಿದೆ ಎಂದರೆ ಇಬ್ಬರು ಅಕ್ಯೂಸ್ಡ್‌ಗೆ ಅಕ್ವಿಟಲ್ ಆಗುತ್ತದೆ, ಇಬ್ಬರಿಗೆ ಕನ್‌ವಿಕ್ಷನ್ ಆಗುತ್ತದೆ. ನಂತರ ಕೇಸಸ್ ಅನ್ನು ವಿತ್‌ಡ್ರಾ ಮಾಡಿದ್ದು ಇದರಲ್ಲಿದೆ. ಆ ಕೇಸಸ್‌ನಲ್ಲಿ ವಿತ್‌ಡ್ರಾ ಮಾಡುವಾಗ ಪ್ರಾಯಶಃ ಕೊಳತ್ತೂರು ಮಣಿ ಮೇಲೆ ಕೇಸ್ ಬಗ್ಗೆ ಯಾರೋ ಒಬ್ಬರು ಹೇಳಿದ ಆಪಾದನೆ ಮೇಲೆಗೆ ಕೇಸಸ್‌ನ್ನು ರಿಜಿಸ್ಟರ್ ಮಾಡಿದ್ದು ಬಿಟ್ಟರೆ ಅಲ್ಲಿ ಟ್ರಯಲ್ ಸ್ಟಾರ್ಟ್ ಆಗಿರಲಿಲ್ಲ. ಆದ್ದರಿಂದ ಯಾವ ಕೇಸ್ ಸೆಷನ್ಸ್ ಕೋರ್ಟ್‌ನಲ್ಲಿ ಟ್ರಯಲ್ ಆಗುವಂತಹದು ಇದೆ. ಅದರಲ್ಲಿ ಸಹಿತ ಕೇಸಸ್ ಅನ್ನು ವಿತ್‌ಡ್ರಾ ಮಾಡಲು ಅವಕಾಶ ಇದೆ ಎನ್ನುವುದನ್ನು ಸುಪ್ರೀಂ ಕೋರ್ಟ್‌ನವರು ಹೇಳುತ್ತಾರೆ. ಪ್ಯಾರಾ 80 ನಲ್ಲಿ ಒಂದು ಮಾತನ್ನು ಹೇಳುತ್ತಾರೆ . ಅದು ಈ ರೀತಿ ಇದೆ:- " The Court's duty is not to re-appreciate the grounds which led to the Public Prosecutor to request withdrawal from the Prosecution. But to consider whether the Public Prosecutor applied his mind as a free agent un-influenced by the irrelevant and extraneous-consideration. The Court has a special duty in this regard as it is the ultimate repository of legislative confidence in granting or withholding its consent to withdrawal from the prosecution." ಆದ್ದರಿಂದ ಗವರ್ನಮೆಂಟ್ ವಿತ್‌ಡ್ರಾ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದರಲ್ಲಿಯೇ ಹೇಳುತ್ತಾರೆ ಜಡ್ಜ್‌ಸ್ ಇಂಡಿಪೆಂಡೆಂಟ್ ಆಗಿ ಅಪಾಯಿಂಟ್ ಆಗಿರುವವರು ಪಬ್ಲಿಕ್ ಪ್ರಾಸಿಕ್ಯೂಟರ್‌ನ್ನು ಅಪಾಯಿಂಟ್ ಮಾಡುವುದು ಗವರ್ನಮೆಂಟ್ ಆದ್ದರಿಂದ ಗವರ್ನಮೆಂಟ್ ಹೇಳಿದ್ದನ್ನು ಪಬ್ಲಿಕ್ ಪ್ರಾಸಿಕ್ಯೂಟರ್ ಕೇಳಬೇಕಾಗುತ್ತದೆ ಎನ್ನುವ ಮಾತು ಇದೆ ಆದರೆ ವಿತ್‌ಡ್ರಾಯಲ್ ಅಪ್ಲಿ ಕೇಶನ್ ಹಾಕುವಾಗ whether he has applied his mind ಎನ್ನುವುದನ್ನು ಮಾತ್ರ ಕೋರ್ಟ್‌ನವರು ತೀರ್ಮಾನ ಮಾಡಬಹುದೇ ಹೊರತು re-appreciation of evidence ಬರುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಸರ್ಕಾರ ಇದನ್ನು ಮಾಡಿದಿದ್ದರೆ delayed justice is justice denied ಎಂದು ಹೇಳಿ ನಾಗಪ್ಪನವರ ಕುಟುಂಬಕ್ಕೆ ಈ ಸರ್ಕಾರ ಜಸ್ಟೀಸ್ ಅನ್ನು ಡಿನೈ ಮಾಡಿದ್ದಾರೆ ಕೊನೆಯಲ್ಲಿ ಅಪ್ಲಿಕೇಶನ್‌ಹಾಕುವುದಕ್ಕಿಂತ ಮೊದಲೇ ಹಾಕಿದ್ದರೆ ಪ್ರಾಯಶಃ ಈ ಸಮಸ್ಯೆ ಬರುತ್ತಿರಲಿಲ್ಲ. ನಾಗಪ್ಪನವರನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯ ಆಗುತ್ತದೆ ಎಂಬ ಮಾತನ್ನು ಈ ಸದನದಲ್ಲಿ ಹೇಳಲಿಕ್ಕೆ ಇಚ್ಛೆಯನ್ನು ಪಡುತ್ತೇನೆ. ಮತ್ತೆ ಸಿಬಿಐ ಇನ್‌ವೆಸ್ಟಿಗೇಷನ್ ಮತ್ತು ಜುಡಿಷಿಯಲ್ ಎನ್‌ಕ್ವೈರಿ. ಪುನಃ ಹೇಳುತ್ತೇನೆ. ನಮಗೆ ಜುಡಿಷಿಯಲ್ ಎನ್‌ಕ್ವೈರಿ ಬಗ್ಗೆ ತಪ್ಪು ಅಭಿಪ್ರಾಯ

ಇಲ್ಲ. ಸಿಬಿಐ ಇನ್‌ವೆಸ್ಟಿಗೇಷನ್ ಮಾಡಿದಾಗ ಮಾತ್ರ ಹೆಚ್ಚಿನ ವಿಷಯಗಳನ್ನು ಹೊರಗೆ ತರಲಿಕ್ಕೆ ಸಾಧ್ಯವಾಗುತ್ತದೆ. ನಾವೇ ಒಂದು ಸಂಸ್ಥೆಯ ಮೇಲೆ ಅನುಮಾನವನ್ನು ಮಾಡಲಿಕ್ಕೆ ಶುರು ಮಾಡಿದರೆ, ಸಿಬಿಐ ಮೇಲೆ ನಾವು ಅನುಮಾನವನ್ನು ಶುರು ಮಾಡಿದರೆ, ಸಾಧುವಲ್ಲ. ಮುಂದೆ ತಪ್ಪುಗಳನ್ನು ಎಲ್ಲರೂ ಮಾಡಿದ್ದಾರೆ. ಸರ್ಕಾರಗಳೂ ತಪ್ಪು ಮಾಡುತ್ತದೆ, ಅಧಿಕಾರಿಗಳೂ ತಪ್ಪು ಮಾಡುತ್ತಾರೆ. ಅದಕ್ಕೋಸ್ಕರ ಒಂದು ತಪ್ಪನ್ನು ಮಾಡಿದ ಕೂಡಲೇ ಆ ಸಂಸ್ಥೆಯನ್ನೇ ಬಿಟ್ಟು ಬೇರೆ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಸಿಬಿಐ ಅನ್ನು ಬಿಟ್ಟು ಈಗ ಬೇರೆ ವ್ಯವಸ್ಥೆ ಏನು ಇದೆ, ಅದನ್ನು ನಾವು ಆಲೋಚನೆ ಮಾಡಬೇಕು ಎಂದು ಹೇಳುತ್ತೇನೆ. ಮಂತ್ರಿಗಳ ಹೇಳಿಕೆಯಿಂದಾಗಿ ಬಹಳಷ್ಟು ತೊಂದರೆ ಆಗಿದೆ. ಪ್ರಾಯಶಃ ಒಬ್ಬೊಬ್ಬ ಮಂತ್ರಿಯವರು ಒಬ್ಬೊಬ್ಬರ ಮೇಲೆ ಹೇಳಿಕೆಯನ್ನು ಕೊಟ್ಟಂಥದ್ದು. ರಾಜೂಗೌಡರ ಬಗ್ಗೆ ಪ್ರಾಯಶಃ ನಾನು ಆಪಾದನೆ ಮಾಡುತ್ತಿಲ್ಲ. ರಾಜೂಗೌಡರು ಅರಣ್ಯಕ್ಕೆ ಹೋಗಿ ಬಿಡಿಸಿಕೊಂಡು ಬರಲಿ ಎಂದು ಮಾನ್ಯ ವಿಶ್ವನಾಥ್ ಅವರು ಹೇಳುವಂಥದ್ದು. ಮಹದೇವ್ ಅವರು ಒಂದು ಮಾತು ಹೇಳುವಂಥದ್ದು. ಮಾನ್ಯ ಮಹದೇವ್ ಅವರು ಅನಿಮಲ್ ಹಸ್ಬೆಂಡರಿ ಮಿನಿಸ್ಟರ್ ಆಗಿದ್ದಾರೆ. Foot and mouth disease ಎಂದು ಇದೆ. ಪ್ರಾಯಶಃ ಅದು ಮಂತ್ರಿಗಳಿಗೆ ಎಲ್ಲಾದರೂ ಬಂತಾ ಎಂದು ನನಗೆ ಅನುಮಾನ ಬರುತ್ತಿದೆ. ಏಕೆಂದರೆ ಇಷ್ಟೊಂದು ಗಂಭೀರವಾದಂತಹ ಕೇಸಿನ ಬಗ್ಗೆ ನಾವು ಚರ್ಚೆ ಮಾಡುತ್ತೇವೆ. ಸರ್ಕಾರ ಅದರ ಬಗ್ಗೆ ಚಿಂತನೆಯನ್ನು ಮಾಡುವಂತಹ ಪರಿಸ್ಥಿತಿಯಲ್ಲಿ ಇವರು ಒಬ್ಬರ ಮೇಲೆ ಒಬ್ಬರು ಗೇಲಿಯನ್ನು ಮಾಡುವಂಥದ್ದು, ಆ ರೀತಿ ಮಾಡುತ್ತಿರುವಂಥದ್ದು ಬಹಳ ತಪ್ಪು ಎಂದು ನನ್ನ ಅಭಿಪ್ರಾಯ. ಯಾವುದಾದರೂ ಒಂದು ಸಂದರ್ಭದಲ್ಲಿ: ನಾವು ಎಷ್ಟೊಂದು ಗಂಭೀರವಾಗಿ ಚಿಂತನೆಯನ್ನು ಮಾಡಬೇಕಾಗುತ್ತದೆ. ಅದರಿಂದ ಬಿಡುಗಡೆಯನ್ನು ಮಾಡಿಸುವುದಕ್ಕೆ ಏನು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ ಎಂದು ಹೇಳುತ್ತಾ ಅನೇಕ ವಿಷಯದ ಬಗ್ಗೆ ನನ್ನ ಸಹೋದ್ಯೋಗಿಗಳು ಚರ್ಚೆ ಮಾಡಿದ್ದಾರೆ. ಚಿಂತನೆ ಮಾಡಿದ್ದಾರೆ. ಆದ್ದರಿಂದ ಈ ಎಲ್ಲಾ ವಿಷಯಗಳೂ from the dayone ಅವರ ಅಪಹರಣಕ್ಕೆ ಮುಂಚೆ ಸರ್ಕಾರ ಏಕೆ ಸರಿಯಾದ "ವೈ" ಕೆಟಗರಿ ಸೆಕ್ಯೂರಿಟಿಯನ್ನು ಕೊಡಲಿಲ್ಲ ಎನ್ನುವುದರಿಂದ ಹಿಡಿದು ಇವತ್ತಿನವರೆಗೆ ಏನೇನು ಆಗುತ್ತಿದೆ? ಅವರ ದುರಂತ ಮರಣದಿಂದ ಹಿಡಿದು ನಂತರದ ಘಟನೆ ಬಗ್ಗೆ ಸಹ ಆಲೋಚನೆಯನ್ನು ಮಾಡಬೇಕಾಗುತ್ತದೆ. ನಾನೂ ಸಹ ಅವರ ಫ್ಯೂನರಲ್‌ಗೆ ಹೋಗಿದ್ದೆ. ಆ ಫ್ಯೂನರಲ್‌ನಲ್ಲಿ ನಡೆದಂತಹ ಘಟನೆ ಒಳಗೆ ಖಂಡಿತವಾಗಿ ನಾಗಪ್ಪನವರ ಅಭಿಮಾನಿಗಳು ಯಾರೂ ಕೆಲಸವನ್ನು ಮಾಡಲಿಲ್ಲ. ನಾಗಪ್ಪನವರ ಅಭಿಮಾನಿಗಳು ದುಃಖದಲ್ಲಿದ್ದಾಗ ಯಾರು ಬಂದು ಈ ಘಟನೆಗಳಿಗೆಲ್ಲಾ ಕಾರಣರಾದರು ಎನ್ನುವುದರ ಬಗ್ಗೆ ತನಿಖೆಯಾಗಬೇಕಾಗುತ್ತದೆ. ನಂತರ ಸಿಂಧ್ಯಾರವನ್ನು ಹುಡುಕಿಕೊಂಡು ಹೋದ ಬಗ್ಗೆಯಾಗಲಿ, ನಾಗೇಗೌಡರ ಹೆಸರು ಹೇಳಿ ಅವರನ್ನು ಹುಡುಕಿಕೊಂಡು ಹೋದ ಬಗ್ಗೆಯಾಗಲೀ, ಇವೆಲ್ಲದರ ಬಗ್ಗೆ ಮತ್ತು ಈ ಘಟನೆಯಾದ ಬಳಿಕ ಇವೊತ್ತು ಅವರ ಕುಟುಂಬಕ್ಕೆ ಸೆಕ್ಯೂರಿಟಿ ಕೊಡುವ ವಿಷಯದ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಿತ್ತು. ಇಷ್ಟು ಗಂಭೀರವಾದ ಪರಿಸ್ಥಿತಿಯಲ್ಲಿ ಅವರ ಕುಟುಂಬಕ್ಕೆ ಭದ್ರತೆ ಕೊಡುವ ವಿಷಯದಲ್ಲಿ ವಿರೋಧ ಪಕ್ಷಗಳು ಚರ್ಚೆ ನಡೆಸಿದ ನಂತರ ಭದ್ರತೆ ಒದಗಿಸುವ ಬಗ್ಗೆ ಆಲೋಚನೆ

ಮಾಡುವುದೇ ಅಥವಾ ಮುಂಚಿತವಾಗಿಯೇ ಆಲೋಚನೆ ಮಾಡಬೇಕಿತ್ತೇ? ಆ ಭಾಗದಲ್ಲಿ ನಮ್ಮ ಪಕ್ಷದ ಶಾಸಕರುಗಳಿದ್ದಾರೆ. ಅವರುಗಳಿಗೆ ಸೆಕ್ಯೂರಿಟಿ ಕೊಡುವ ಬಗ್ಗೆ ಆಲೋಚನೆ ಮಾಡಬೇಕು. ಎರಡು ವಿಚಾರಗಳ ಬಗ್ಗೆ ಮಿತ್ರರಾದ ಗುರುಸ್ವಾಮಿಯವರು ಮಾತನಾಡುತ್ತಾ ಇನ್‌ವೆಸ್ಟಿಗೇಷನ್ ಮತ್ತಿತರ ವಿಚಾರಗಳ ಕುರಿತಂತೆ ಏನು ಚರ್ಚೆ ಮಾಡಿದ್ದಾರೆ, ಅದನ್ನು ಸಮರ್ಥಿಸುತ್ತಾ, ಶಾಸಕರಾದ ಎ.ಆರ್.ಕೃಷ್ಣಮೂರ್ತಿಯವರ ಮೇಲೆ ಆವೋತ್ತು ಲಾಠಿ ಚಾರ್ಜ್ ಮಾಡಿದ ಸಂದರ್ಭದಲ್ಲಿ ಪ್ರಾಯಶಃ ಅವರ ಸೆಕ್ಯೂರಿಟಿಯವರು ಎಲ್ಲಿದ್ದರೋ ನನಗೆ ಗೊತ್ತಿಲ್ಲ. ಸೆಕ್ಯೂರಿಟಿಯವರೇ ಓಡಿ ಹೋದರೆ ಸೆಕ್ಯೂರಿಟಿ ವ್ಯವಸ್ಥೆ ಯಾವ ರೀತಿ ಇದೆಯೆಂಬ ಬಗ್ಗೆ ಆಲೋಚಿಸಿಬೇಕಾಗುತ್ತದೆ. ಶಾಸಕರ ಮೇಲೆ ಹಲ್ಲೆ ಮಾಡುವಾಗ ಕೊನೇ ಪಕ್ಷ ಒಬ್ಬ ಸೆಕ್ಯೂರಿಟಿಯವನಾದರೂ ಅಡ್ಡ ಬರಬೇಕಿತ್ತು. ಅವರೇ ಹೊಡೆದರೆ ಅಥವಾ ಬೇರೆ ಯಾರಾದರೂ ಹೊಡೆದರೇ? ಇದರ ಬಗ್ಗೆ ಆಲೋಚಿಸಬೇಕು. ಮುಂದಿನ ದಿವಸಗಳಲ್ಲಾದರೂ ಇಂತಹ ತಪ್ಪುಗಳಾಗದ ರೀತಿಯಲ್ಲಿ ಸರ್ಕಾರ ಆಲೋಚಿಸಬೇಕೆಂದು ಹೇಳುತ್ತಾ. ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಿ.ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಾಗಪ್ಪನವರ ಅಪಹರಣ ಹಾಗೂ ಅವರ ಹತ್ಯೆಯ ಬಗ್ಗೆ ಈ ಸದನದಲ್ಲಿ ಮಾತನಾಡುವಾಗ ಕೆಲವು ಮಾನ್ಯ ಸದಸ್ಯರುಗಳು ವೈಯಕ್ತಿಕವಾಗಿ ನನ್ನ ಮೇಲೆ ಸತ್ಯಕ್ಕೆ ದೂರವಾದ ಆರೋಪಗಳನ್ನು ಮಾಡಿದ್ದಾರೆ. ಆರೋಪಗಳೇನೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ಉತ್ತರ ಕೊಡಬೇಕೆಂದು ತಮ್ಮಿಂದ ಅನುಮತಿ ಪಡೆದು ಈಗ ಮಾತನಾಡುತ್ತಿದ್ದೇನೆ. ನಾನು ಮಾತನಾಡುವಾಗ ಮಧ್ಯೆ ದಯವಿಟ್ಟು ಯಾರೂ ಡಿಸ್ಟರ್ಬ್ ಮಾಡಬೇಡಿ. ಸ್ವಾಮಿ, ಇದು 11ನೇ ವಿಧಾನಸಭೆ. ಕೊಳ್ಳೇಗಾಲ ತಾಲ್ಲೂಕಿಗೆ 10ನೇ ವಿಧಾನ ಸಭೆಯಾಗಿದೆ ಏಕೆಂದರೆ 1956ನೇ ಇಸವಿಯಲ್ಲಿ ಕೊಳ್ಳೇಗಾಲ ತಾಲ್ಲೂಕು ಕರ್ನಾಟಕಕ್ಕೆ ಬಂದು ಸೇರಿಕೊಂಡಿತು. 1951ನೇ ಇಸವಿಯಲ್ಲಿ ನಾವು ತಮಿಳುನಾಡು ಚುನಾವಣೆಯಲ್ಲಿದ್ದೆವು. ಆದುದರಿಂದ, ನನ್ನ ತಾಲ್ಲೂಕಿಗೆ ಇದು 10ನೇ ವಿಧಾನಸಭೆ. ಹತ್ತು ವಿಧಾನಸಭಾ ಚುನಾವಣೆಗಳ ಪೈಕಿ ದಿವಂಗತ ಮಾನ್ಯ ನಾಗಪ್ಪನವರು ಎಂಟು ಬಾರಿ ಚುನಾವಣೆಯಲ್ಲಿ ಸೋತಿದ್ದಾರೆ. ನನ್ನ ವಿರುದ್ಧ ಐದು ಸಲ, ದಿವಂಗತರಾದ ನನ್ನ ಸಹೋದರನ ಮೇಲೆ ಮೂರು ಸಲ. 1972ರಿಂದ 1975ರವರೆಗೆ ಶ್ರೀಮಾನ್ ರಾಜೇಗೌಡರು ಎಂದು ಹೇಳಿ ಅವರ ವಿರುದ್ಧ ನಿಂತ ಸೋತ್ತಿದ್ದಾರೆ. ಸುಮಾರು ಎಂಟು ಬಾರಿ ಚುನಾವಣೆಯಲ್ಲಿ ಸೋಲಿಸಲಾಗಿದೆ. ಈ ಎಂಟು ಬಾರಿಯಲ್ಲಿ ನನ್ನನ್ನು ಒಂದು ಬಾರಿ ಹಾಗೂ ನನ್ನ ಅಣ್ಣನವರನ್ನು ಒಂದು ಬಾರಿ ಸೋಲಿಸಿದ್ದಾರೆ. 1967 ಮತ್ತು 1996 ರಲ್ಲಿ ಸೋಲಿಸಿದ್ದಾರೆ. ನನ್ನನ್ನು ಸುಮಾರು ಇಪ್ಪತ್ತು ಸಾವಿರ ಮತಗಳಿಂದ ಸೋಲಿಸಿದ್ದಾರೆ. ಆದರೆ, ಎಂಟು ಚುನಾವಣೆಗಳು ನಡೆದಾಗ ಚುನಾವಣಾ ಪೂರ್ವದಲ್ಲಿ ಹಾಗೂ ನಂತರದಲ್ಲಿ ಯಾವುದಾದರೂ ಸಣ್ಣ ಕ್ರಿಮಿನಲ್ ಕೇಸ್ ಆಗಲಿ ಅಥವಾ.. ಆಗಲೀ ಯಾವುದಾದರೂ ಒಂದು ಕೇಸ್ ನಮ್ಮ ತಲ್ಲೂಕಿನಲ್ಲಿ ರಿಜಿಸ್ಟರ್ ಆಗಿದ್ದರೆ, ಅದು ಬಹಳ ಕೆಟ್ಟ ತಾಲ್ಲೂಕು, ತುಂಬಾ... ತಾಲ್ಲೂಕು, ರಾಜಕೀಯ... ತಾಲ್ಲೂಕು ಎಂದು ಹೇಳಿಬಹುದಾಗಿತ್ತು.

ಮಾನ್ಯ ಸಿಂಧ್ಯಾಜಿಯವರು ಮಾತನಾಡುವಾಗ ಹನೂರಿನಲ್ಲಿ ಮೊದಲಿನಿಂದಲೂ ದ್ವೇಷದ ರಾಜಕೀಯ ಇದೆ, ಈ ದ್ವೇಷದ ಗಾಳಿಯಲ್ಲಿ ನಾಗಪ್ಪನವರ ಹತ್ಯೆ ನಡೆದಿದೆಯೆಂದು ಹೇಳಿದ್ದಾರೆ. ಇದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಸ್ವಾಮಿ, ದಯಮಾಡಿ... ಹೇಳಿ. ನಾಗಪ್ಪನವರ ಹೆಸರಿನ ಮೇಲೆ ನನ್ನ ಹೆಸರಿನ ಮೇಲಾಗಲಿ ಒಂದು ಸಣ್ಣ ಕ್ರಿಮಿನಲ್ ಕೇಸ್ ತೋರಿಸಿ. 224 ಕ್ಷೇತ್ರದಲ್ಲಿ ಹನೂರಿನಂತಹ ಒಳ್ಳೆಯ ಕ್ಷೇತ್ರ ಮತ್ಯಾವುದೂ ಇಲ್ಲ, ಅಲ್ಲಿ ರಾಜಕೀಯ ಕೇಸ್ ಇಲ್ಲ. ಕ್ರಿಮಿನಲ್ ಕೇಸ್ ಇಲ್ಲ, ಯಾರು ಯಾರನ್ನೂ ಹತ್ಯೆ ಮಾಡಿಲ್ಲ. ಆದರೆ, ಮಾನ್ಯ ಸಿಂಧ್ಯಾಜಿಯವರು ಈ ಮಾತು ಆಡಿದ್ದನ್ನು ಕೇಳಿ ನನಗೆ ತುಂಬಾ ಆಶ್ಚರ್ಯವಾಯಿತು. ದಯಮಾಡಿ ಒಂದು ವಿಷಯ ಹೇಳಲು ಇಚ್ಛಿಪಡುತ್ತೇನೆ. ಮಾನ್ಯ ಸೋಮಶೇಖರ್‌ರವರು ಮಾತನಾಡುತ್ತಾ. ಶ್ರೀಮಾನ್ ಸಂಪಂಗಿರಾಮಯ್ಯ ಮಗನ ಅಪಹರಣದಲ್ಲಿ ರಾಜುಗೌಡರು ಸಂಧಾನಕಾರರಾಗಿದ್ದರು ಎಂದರು. 1985ರಲ್ಲಿ ಆರ್ಕೇಶ್‌ರವರ ವರದಿಯಲ್ಲಿ ಪ್ರಸ್ತಾಪಿಸಿರುವ ಒಂದು ಮಾತು ಬಹಳ ಚೆನ್ನಾಗಿದೆ. ರಾಜ್‌ಕುಮಾರ್‌ರವರು, ನಾಗಪ್ಪನವರು ಮತ್ತು ರಾಜೂಗೌಡರು ಹಿಟ್‌ಲಿಸ್ಟ್‌ನಲ್ಲಿದ್ದಾರೆಂಬುದು. ವೀರಪ್ಪನ್‌ನ ಹಿಟ್‌ಲಿಸ್ಟ್‌ನಲ್ಲಿರುವಾಗ ನಾನು ಯಾರ ಸಂಧಾನಕಾರರಾಗಲು ಸಾಧ್ಯ? ಇಂತಹ ಮಾತನ್ನಾಡಿರುವುದು ಸರಿಯಿಲ್ಲ ಇದು ಸತ್ಯಕ್ಕೆ ದೂರವಾದ ಮಾತು ಮತ್ತೊಂದು ವಿಚಾರವನ್ನು ಮಾನ್ಯ ಸಿಂಧ್ಯಾಜಿಯವರು ಹೇಳಿದರು. ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅವರು ಯಾವ ರೀತಿ ತಮ್ಮ ಕ್ಷೇತ್ರವನ್ನು ಇಟ್ಟುಕೊಂಡಿದ್ದಾರೆಂಬುದು ನನಗೆ ಚೆನ್ನಾಗಿ ಗೊತ್ತಿದೆ, ಜನರ ಜೊತೆ ಯಾವ ರೀತಿ ಇದ್ದಾರೆಂಬುದೂ ಚೆನ್ನಾಗಿ ಗೊತ್ತಿದೆ. ಆದರೆ, ಅವರು ಏಕೆ ಆ ರೀತಿ ಮಾತನಾಡಿದರು ಎನ್ನತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ನಾನು ಮಳವಳ್ಳಿಗೆ ಹೋಗಿದ್ದೆ. ಮಳವಳ್ಳಿಯಿಂದ ಗೋಪಿನಾಥಂಗೆ ಹೋದೆ. ಗೋಪಿನಾಥಂನಲ್ಲಿ ಪ್ರಿತಿಯೊಂದು ಗೋಡೆಯ ಮೇಲೆ ಕೂಡಾ 'ಕೈ" ಗುರ್ತು ಇತ್ತು. ಮತ್ತು ಗೋಡೆಯ ಮೇಲೆ ಏನು ಬರೆದಿತ್ತು ಎಂದರೆ, ಯಾರು 'ಕೈ' ಗುರ್ತಿಗೆ ಮತ ಹಾಕುವುದಿಲ್ಲವೋ ಅವರ ಕೈ ಕತ್ತರಿಸಿ ಹಾಕಲಾಗುವುದು ಎಂದು. 1985ರಲ್ಲಿ ಆ ರೀತಿ ಆಗಿದೆ ಎನ್ನುವ ಮಾತನ್ನು ಹೇಳಿದರು. ಸ್ವಾಮಿ, ದಯಮಾಡಿ ತಮ್ಮ ಗಮನಕ್ಕೆ ತರಲು ಇಚ್ಛಿಪಡುತ್ತಿರುವುದೇನೆಂದರೆ, 1985ರ ಕರ್ನಾಟಕ ವಿಧಾನಸಭೆ ಸದಸ್ಯರ ಪರಿಚಯ ಪುಸ್ತಕದಲ್ಲಿರುವ ಭಾಗವೊಂದನ್ನು ಇದರಲ್ಲಿ ಲಗತ್ತಿಸಿದೆ. 1985ರ ಸಾರ್ವತ್ರಿಕ ಚುನಾವಣೆಯಲ್ಲಿ ಹನೂರು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅಭ್ಯರ್ಥಿಗಳ ವಿವರ ಕೆಳಕಂಡಂತಿದೆ: ಜಿ.ರಾಜುಗೌಡ, ಪಕ್ಷೇತರರು, 37,075 ಮತಗಳು, ಹೆಚ್.ನಾಗಪ್ಪ, ಜನತಾ 33,213 ಮತಗಳು, ಚಿಕ್ಕಮರಿಗೌಡ ಕಾಂಗ್ರೆಸ್(ಐ), 2,129 ಮತಗಳನ್ನು ತೆಗೆದುಕೊಂಡರು. ಆವೊತ್ತು ನನ್ನ ಗುರ್ತು ಸೈಕಲ್ ಆಗಿತ್ತು. ಸ್ವತಂತ್ರ ಅಭ್ಯರ್ಥಿ. ನನಗೆಲ್ಲಿ ಸ್ವಾಮಿ ಅವರು ಕೊಟ್ಟರು? ಕೈ ಗುರ್ತು ಹಾಕಿಬಿಟ್ಟು ಕೈ ಕಡಿಯುವುದಕ್ಕೆ?.... ಬಹುಶಃ ಮಾನ್ಯ ಸಿಂಧ್ಯಾಜಿಯವರು ಈ ವಿಷಯವನ್ನು ಪ್ರಸ್ತಾಪ ಮಾಡುವಾಗ ರಾಜುಗೌಡಟು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರೇ ಎಂಬುದನ್ನು ತಿಳಿದುಕೊಂಡು ಹೇಳಬೇಕು. 1985 ಎಂದು ನೀವು ಹೇಳಿದಿರಿ. ಆ ರೀತಿ ನೀವು ಹೇಳಿದ್ದು ನಿಜ ತಾನೇ?

ಶ್ರೀ ಬಿ.ಸೋಮಶೇಖರ್: ಮಾನ್ಯ ಸಿಂಧ್ಯಾರವರು 1985 ಅಥವಾ 1989 ಎಂದು ಗೊತ್ತಿಲ್ಲದೆ 1985 ಎಂದು ಹೇಳಿದ್ದಾರೆ. ಆದರೆ, ನನ್ನ ಭಾಷಣದಲ್ಲಿ ನಾನು 1989 ಎಂದು ಕ್ಲಾರಿಫೈ ಮಾಡಿದ್ದೇನೆ.

ಶ್ರೀ ಜಿ.ರಾಜುಗೌಡ: ದಯಮಾಡಿ ಮಾತನಾಡಬೇಡಿ. ನಿಮಗಿಂತಲೂ ಹೆಚ್ಚಿಗೆ ನನಗೂ ಮತ್ತು ನಾಗಪ್ಪನವರಿಗೂ ಬಹಳ ಗೌರವವಾದ ಬಾಂಧವ್ಯವಿತ್ತು. ಚಾಮರಾಜನಗರದ ಎಂಎಲ್‌ಎ ಆಗಿದ್ದಂತಹ ಶ್ರೀಮಾನ್ ಪುಟ್ಟಸ್ವಾಮಿಯವರು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. ಅವರು ಸತ್ತಾಗ ಅವರಿಗಾಗಿ ಏರ್ಪಡಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಒಂದೇ ವೇದಿಕೆಯಡಿ ನಾನು ಹಾಗೂ ನಾಗಪ್ಪನವರು ಇದ್ದೆವು. ನಾಗಪ್ಪನವರು ಪುಟ್ಟಸ್ವಾಮಿಯವರ ಬಗ್ಗೆ ನನ್ನ ಬಳಿ ವಿಚಾರಿಸಿದಾಗ ನಾನು ಅವರ ಬಗ್ಗೆಯೂ ವಿಚಾರಿಸಿದ್ದೇನೆ. ಒಬ್ಬರಿಗೊಬ್ಬರು ವಿರೋಧ ಮಾಡಿಕೊಂಡಿದ್ದರಿಂದ ವಿಚಾರ ವಿನಮಯ ಮಾಡಿಕೊಂಡೆವು. ಜೊತೆಗೆ ನಾಗಪ್ಪ ಅಪಹರಣವಾಗುವುದಕ್ಕೆ ಮೊದಲು ಒಂದು ಎಂಟು ದಿವಸ ಅಂತಾ ಹೇಳಿ ಬೆಂಗಳೂರಿನಲ್ಲಿನ ನನ್ನ ಮನೆಗೆ ದೊಡ್ಡ ಗುರುಸ್ವಾಮಿ ಎನ್ನುವವರನ್ನು ನನ್ನ ಮನೆಗೆ ಕಳುಹಿಸಿದರು. ಏತಕ್ಕೆ ಕಳುಹಿಸಿದ್ದರು ಎಂದರೆ, ರಾಜುಗೌಡ ನಮ್ಮ ಮನೆ ಹತ್ತಿರ ಇರುವ ಭೂಮಿಯನ್ನು ಅಕ್ವೈರ್ ಮಾಡಿಸಿ ಹರಿಜನರಿಗೆ ಮನೆ ಕಟ್ಟಿಸುತ್ತಿದ್ದಾನೆ, ತಾವು ಅಲ್ಲಿ ಕಟ್ಟಿಸುವುದು ಬೇಡಿ, ಅಷ್ಟೇ ಜಮೀನನ್ನು ನಾನು ಕೊಡುತ್ತೇನೆಂಬ ವಿಷಯವನ್ನು ಹೇಳಿ ಕಳುಹಿಸಿದ್ದರು. ನಾನು ಅದನ್ನು ಒಪ್ಪಿಕೊಂಡೆ. ನಾಗಪ್ಪನವರ ಮಾತನ್ನು ಒಪ್ಪಿಕೊಂಡೆ, ಅಷ್ಟೊಂದು ಬಾಂಧವ್ಯ ನಮ್ಮಿಬ್ಬರಲ್ಲಿತ್ತು ಎಂದರೆ.. ರಾಜಕಾರಣದಲ್ಲಿ ವಿರೋಧವಿರಬಹುದು, ನಾನು ಅವರ ಬಗ್ಗೆ ಎಷ್ಟು ಗೌರವವಿಟ್ಟುಕೊಂಡಿದ್ದೆನೋ ಅವರೂ ಕೂಡ ನನ್ನ ಬಗ್ಗೆ ಅಷ್ಟೇ ಗೌರವವಿಟ್ಟುಕೊಂಡಿದ್ದರು. ಆದ್ದರಿಂದ, 1985ರ ಸಾರ್ವತ್ರಿಕ ಚುನಾವಣೆಯಲ್ಲಿ ನಾನು ಸ್ವತಂತ್ರ ಅಭ್ಯರ್ಥಿಯಾಗಿದ್ದೆ. ಮತ್ತು 1983-84ರಲ್ಲೂ ನಾನು ಸ್ವತಂತ್ರ ಅಭ್ಯರ್ಥಿಯಾಗಿದ್ದಾಗಲೂ ಸೋತಿದ್ದೆ. ಈ ರೀತಿ ಇರುವಾಗ ನನ್ನ ಬಗ್ಗೆ ಇವರು ಮಾತನಾಡುತ್ತಾ, ಶಾಮೀಲಾಗಿದ್ದಾರೆ ಎಂದು ಹೇಳುವುದು ಸರಿಯಲ್ಲ, 1985ರಿಂದಲೂ ಆರ್ಕೇಶ್ ವರದಿ ಪ್ರಕಾರ ನಾನು ವೀರಪ್ಪನ್ ಹಿಟ್‌ಲಿಸ್ಟ್‌ನಲ್ಲಿರುವಾಗ ನಾನು ಅಪರಾಧಿ ಹೇಗಾಗುತ್ತೇನೆ? ಇವರು ಏನು ಹೇಳುತ್ತಾರೆಂದರೆ, ಕೊಳತ್ತೂರು ಮಣಿಯ ಬಂಧನದಿಂದ ನಾಗಪ್ಪನವರ ಅಪಹರಣವಾಯಿತು ಎಂದು ರಾಜ್‌ಕುಮಾರ್ ಬಿಡುಗಡೆಯಾಗುವಾಗ ಏನು ಒಪ್ಪಂದವಿದೆ. ಆ ಒಪ್ಪಂದವನ್ನು ಪರಿಪಾಲಿಸಿಲ್ಲದ್ದರಿಂದಲೇ ನಾಗಪ್ಪನವ ಅಪಹರಣವಾಯಿತೆಂದು ಹೇಳುತ್ತೀರಿ ಇದರಲ್ಲಿ ರಾಜುಗೌಡ ಕೈವಾಡ ಎಲ್ಲಿದೆ? ಯಾಕೆ ಈ ಮಾತನ್ನೆಲ್ಲಾ ಆಡುತ್ತೀರಿ? ಮತ್ತೊಂದು ಮುಖ್ಯವಾಗಿರುವ ಪ್ರಶ್ನೆಯೇನೆಂದರೆ, ಬಸವರಾಜು ಎನ್ನತಕ್ಕಂಥವನು ಬಸವರಾಜು ಅನ್ನತಕ್ಕಂಥವನು ಇರೋದು ನಿಜ. ಆದರೆ, ಯಾವ ಊರಿನ ಬಸವರಾಜು ಅನ್ನತಕ್ಕಂಥಾದ್ದನ್ನು ಅವರು ವಿವರಿಸಿಲ್ಲ. ಅದನ್ನು ನಾನು ಹೇಳುತ್ತೇನೆ. ದಿವಂಗತ ನಾಗಪ್ಪನವರ ಅಪಹರಣವಾದಾಗ, ಗಡ್ಡವನ್ನು ಬಿಟ್ಟಿರುವ ಬಸವರಾಜು ಎನ್ನುವವರು ಯಾರು? ನಾಗಪ್ಪನವರ ಅಪಹರಣವಾಯಿತು. ಅವರ ಅಪಹರಣದಿಂದ ಅವರ ಶಿಷ್ಯ ಬಸಪ್ಪದೊಡ್ಡಿ ಬಸವರಾಜು ಎಂದು ಆತ ಗಡ್ಡ ಬಿಟ್ಟುಕೊಂಡು

ಅಷ್ಟು ದಿನದಿಂದ ಬೋಳಿಸಲಿಲ್ಲ? ಆ ಬಸವರಾಜು ಯಾರು? ಕೊಳತ್ತೂರು ಮಣಿಯನ್ನು ಕೊಳ್ಳೇಗಾಲ ಕೋರ್ಟ್‌ನಿಂದ ಜಾಮೀನು ಮೇಲೆ ಬಿಡಿಸಿದಾಗ.. ಆ ಬಸವರಾಜು ಯಾರು? 22-12-2002ರ ಭಾನುವಾರ ರಾತ್ರಿ ಹತ್ತು ಗಂಟೆಗೆ ಉದಯ ಟಿ.ವಿಯಲ್ಲಿ ಸಂದರ್ಶನದಲ್ಲಿ ಪ್ರಸ್ತಾಪಿಸಿದ ಬಸವರಾಜು ಯಾರು? ನಾಗಪ್ಪನವರ ದರ್ಶನಕ್ಕೆ ಅವಕಾಶ ಕೊಡದ ವೀರಪ್ಪನ್ ಯಾವ ರೀತಿಯಲ್ಲಿ ಬಸವರಾಜು ನಾಗಪ್ಪನವರ ದರ್ಶನ ಮಾಡುತ್ತಾನೆ? ಪೊನ್ನಾಚ್ಚಿ ಮಹದೇವಸ್ವಾಮಿ ಎರಡನೇ ಸಲ ಹೋದಾಗ ನಾಗಪ್ಪನವರ ದರ್ಶನ ಮಾಡಬೇಕೆಂದು ಬಹಳ ಪ್ರಯತ್ನಪಟ್ಟ. ವೀರಪ್ಪನ್ ಒಪ್ಪಲಿಲ್ಲ. ಅವರು ವಾಪಸ್ಸು ಬಂದುಬಿಟ್ಟರು. ಈ ಬಸವರಾಜ್ ಎನ್ನತಕ್ಕವನು ನಾಗಪ್ಪನವರ ದರ್ಶನ ಮಾಡಿದ್ದಾನೆ. ವೀರಪ್ಪನ್ ದರ್ಶನವನ್ನೂ ಮಾಡಿದ್ದಾನೆ, ಇದು ಹೇಗೆ ಸಾಧ್ಯ? ನಂಬಿಲಿಕ್ಕೆ ಇದು ಸಾಧ್ಯವಿದೆಯೇ? ಆದುದರಿಂದ, ಈ ಬಸವರಾಜು ಎನ್ನತಕ್ಕವರು ಯಾರು ಎಂದರೆ ನಾಗಪ್ಪನವರು ಮಂತ್ರಿಯಾಗಿದ್ದಾಗ ಈ ಬಸವರಾಜು ಪಿ.ಡಬ್ಲ್ಯು.ಡಿ ಗುತ್ತಿಗೆದಾರನಾಗಿ ಬಹಳ ದುಡ್ಡನ್ನು ಸಂಪಾದನೆ ಮಾಡಿದ್ದಾನೆ. ಇವೊತ್ತು ಎರಡು ಕಣ್ಣೂ ಸಾಲದು. ಬೇಕಾದರೆ ನೀವು ಪೊಲೀಸ್ ಎನ್‌ಕ್ವೈರಿ ಮಾಡಿಸಿ. ನೀವು ಹೇಳುವ ಪ್ರಕಾರ ಬಸವರಾಜುವಿಗೆ ಕೇವಲ 39 ವರ್ಷ, ಅವನು ಚಿಕ್ಕ ಹುಡುಗ. ದಯಮಾಡಿ ತಾವು ಈ ಬಗ್ಗೆ ಒಳ್ಳೆಯದನ್ನು ಹೇಳಿದರೆ ನಾನು ಒಪ್ಪಿಕೊಳ್ಳಲು ತಯಾರಿದ್ದೇನೆ. ರಾಜೀನಾಮೆ ಕೊಡಬೇಕು, ಸರ್ಕಾರ ರಾಜೀನಾಮೆ ಕೊಡಬೇಕು, ರಾಜುಗೌಡ ರಾಜೀನಾಮೆ ಕೊಡಬೇಕು, ರಾಜುಗೌಡರ ಬಗ್ಗೆ ಕೇಸ್ ಹಾಕಿಸಬೇಕೆಂದು ಹೇಳುತ್ತಿದ್ದೀರಲ್ಲಾ, ನಾನು ಒಪ್ಪಿಕೊಳ್ಳುತ್ತೇನೆ. ಕೇಸ್ ಹಾಕಿಸಿ. ನಿಮ್ಮ ಕಾಲದಲ್ಲಿ ವೀರಪ್ಪನ್ ಎಷ್ಟು ಜನರನ್ನು ಅಪಹರಣ ಮಾಡಿದ್ದ? ಎಷ್ಟು ಜನರನ್ನು ಸಾಯಿಸಿದ್ದ? ನೀವೇಕೆ ರಾಜೀನಾಮೆ ಕೊಡಲಿಲ್ಲ? ಒಂದು ವಿಚಾರವನ್ನು ಮಾನ್ಯ ಬಚ್ಚೇಗೌಡರು ಹೇಳಿರುವುದಕ್ಕೆ ನಾನು ಬಹಳ ಸಂತೋಷ ಪಡುತ್ತೇನೆ. ವೀರಪ್ಪನ್ ಇರುವವರೆಗೆ ನಾವು ಇರುವುದಕ್ಕಾಗುವುದಿಲ್ಲ ಎಂದು ಬಚ್ಚೇಗೌಡರೆ, ನೀವು ಒಂದು ಕೆಲಸ ಮಾಡಿ. ನಿಮ್ಮ ಪಕ್ಷದವರಿಗೂ ಮುಂದೆ ಈ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದುಕೊಳ್ಳಬೇಕೆಂಬ ಆಸೆ ಇದೆ. ಬನ್ನಿ, ನಾನು ಸಂತೋಷ ಪಡುತ್ತೇನೆ. ಮುಂದೆ ನನ್ನ ಕ್ಷೇತ್ರದಲ್ಲಿ ನಿಮ್ಮ ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ವೀರಪ್ಪನ್‌ನ್ನು ನಿಲ್ಲಿಸಿ. ನನ್ನನ್ನು ಸೋಲಿಸಬೇಕೆಂಬುದು ತಾನೇ ನಿಮ್ಮ ಇಷ್ಟ. ದಯಮಾಡಿ ನಿಲ್ಲಿಸಿ. ಮತ್ತೆ ಅವನ ಪ್ರಭಾವವನ್ನು ಬೇರೆ ಕಡೆಯಿಂದ ಉಪಯೋಗಿಸಿಕೊಂಡು ಈ ರಾಜ್ಯದ ಆಡಳಿತವನ್ನು ನಡೆಸಿ. ಮಾಡುತ್ತೀರಾ?

5.20 ಪಿ.ಎಂ

ನಾನು ಇರುವವರೆಗೆ ಇನ್ಯಾರಿಗೂ ನನ್ನನ್ನು ಚುನಾವಣೆಯಲ್ಲಿ ಸೋಲಿಸಲು ಆಗುವುದಿಲ್ಲ. ವೀರಪ್ಪನ್‌ನ್ನು ನಿಲ್ಲಿಸಿ ನೀವು, ನಿಮ್ಮ ಪಕ್ಷದ ವತಿಯಿಂದ ಬೇರೆಯವರನ್ನು ನಿಲ್ಲಿಸಿ, ನನ್ನನ್ನು ಸೋಲಿಸಿ ದಯಮಾಡಿ, ನಾನು ಹೆಚ್ಚಿನ ಮಟ್ಟದಲ್ಲಿ ಸಾವಿರಾರು..

ಶ್ರೀ ಎಂ.ಚಂದ್ರಪ್ಪ: ವೀರಪ್ಪನ್ ನಮಗೆ ಸ್ನೇಹಿತರಲ್ಲ ಸ್ವಾಮಿ, ನಿಮಗೆ ಸ್ನೇಹಿತರು. ನಾವೇಕೆ ಅವನನ್ನು ನಿಲ್ಲಿಸಲು ಹೋಗೋಣ?

ಶ್ರೀ ಜಿ.ರಾಜೂಗೌಡ: ಸ್ವಾಮಿ, ನನ್ನನ್ನು ಚುನಾವಣೆಯಲ್ಲಿ ಸೋಲಿಸಬೇಕು ಎಂಬುದು ನಿಮ್ಮ ಇಷ್ಟ. ನಿಮಗೆ ಅಭ್ಯರ್ಥಿ ಯಾರು? ಯಾರೂ ಇಲ್ಲ? ನೀವು ವೀರಪ್ಪನ್‌ನ್ನು ನಿಲ್ಲಿಸಿ ನೀವು

ಅವನೊಬ್ಬನನ್ನು ಸೇರಿಸಿಕೊಳ್ಳಿ ನಿಮ್ಮ ಸರ್ಕಾರ ಬರಲಿ. ಮುಂದಕ್ಕೆ ಗೊತ್ತಾಗುತ್ತೆ ನೋಡೋಣ. ಏಕೆ ಸಾರ್ ಇವೆಲ್ಲಾ ಮಾತನಾಡುತ್ತೀರಿ. ಹುಚ್ಚುಚ್ಚು ಮಾತು. ಒಂದು ವಿಷಯ ಮಾನ್ಯ ಸಿಂಧ್ಯಾಜೀ, ಇದು ಡಿಸೆಂಬರ್ 19, ರಂದು "ಪತ್ರಿಕೆಯಲ್ಲಿ ಬಂದಿರುವ ವಿಷಯ ಸಚಿವ ರಾಜೂಗೌಡ ಹತ್ಯೆ ಸಾಧ್ಯತೆ? ಮಾಜಿ ಸಚಿವ ನಾಗಪ್ಪನವರ ಅಪಹರಣ ಮತ್ತು ಹತ್ಯೆ ಘಟನೆಯ ನಂತರದಲ್ಲಿ ಉದ್ಭವಿಸಿರುವ ಪರಿಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಜಿ. ರಾಜೂಗೌಡರ ಹತ್ಯೆ ಸಾಧ್ಯತೆ ಇದ್ದು ಸರ್ಕಾರ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವಂತೆ ಅಗತ್ಯವಿದೆಯೆಂದು ಗುಪ್ತಾಚಾರ ಇಲಾಖೆ ಸರ್ಕಾರಕ್ಕೆ ಮನವಿ ಮಾಡಿದೆ." ಇದು ಹೇಗೆ ಸ್ವಾಮಿ ಸಾಧ್ಯ? ನಾಗಪ್ಪನವರ ಹತ್ಯೆಯಾಗಿ ಅದರ ಹಿನ್ನೆಲೆಯಲ್ಲಿ ಸಚಿವ ರಾಜೂಗೌಡರ ಹತ್ಯೆಗೆ ಸಾಧ್ಯತೆ ಇದೆಯೆಂದು 19ನೇ ಡಿಸೆಂಬರ್‌ನಲ್ಲಿ ಪತ್ರಿಕೆಯಗಳಲ್ಲಿ ಬಂದಿದೆ, ಯಾರು ಮಾಡಿದ್ದು ಈ ವರದಿಯನ್ನು? ಗುಪ್ತಾಚಾರದವರು, ಯಾರಿಗೆ? ಸರ್ಕಾರಕ್ಕೆ, ಎಚ್ಚರಿಕೆ ವಹಿಸಿಕೊಳ್ಳಿ ಎಂದು. ಇವೆಲ್ಲಾ ಇರುವಾಗ ವೀರಪ್ಪನ್‌ಗೂ ನನಗೂ ಯಾವ ರೀತಿಯ ಸಂಬಂಧವಿದೆಯೆಂದು ಹೇಗೆ ಹೇಳುತ್ತೀರಿ ಸ್ವಾಮಿ? ಇದು ಧರ್ಮವೇ? ನ್ಯಾಯವೇ? ಯಾವುದೋ ಒಂದು ಫೋಟೋ ತೋರಿಸಿಬಿಟ್ಟಿದ್ದಾರೆ, ಯಾವ ರೀತಿಯ ಸಂಬಂಧವಿದೆ? ಎಲ್ಲಿದೆ? ಸ್ವಾಮಿ, ನನ್ನ ಕ್ಷೇತ್ರದಲ್ಲಿ ನಾಲ್ಕು ಸಾವಿರ ಜನ ಇರುವುದು, ನನ್ನ ಮತ ಇರುವುದು ನಾಲ್ಕು ಸಾವಿರ. ನನ್ನನ್ನು ಪ್ರತಿಯೊಂದು ಸಂದರ್ಭದಲ್ಲೂ ಗೆಲ್ಲಿಸಿದ್ದಾರೆ. ಅಂಥದ್ದು ಇರುವಾಗ ಒಬ್ಬ ಕೆಟ್ಟ ದ್ರೋಹಿಯ ಸ್ನೇಹ ಮಾಡಿದ್ದಾರೆ ಎಂದು ಹೇಳಿದರೆ ಏನು ಅರ್ಥ? ಧರ್ಮನಾ ಇದು? ನಿಮ್ಮ ಸರ್ಕಾರ ಇದ್ದಾಗ ಎಷ್ಟು ಜನ ಸತ್ತರು? ಆವಾಗ ಏಕೆ ರಾಜೀನಾಮೆ ಕೊಡಲಿಲ್ಲ? ಈ ರಾಜ್ಯದಲ್ಲಿ ಗಂಗಾರಾಮ್ ಕಟ್ಟಡ ಕುಸಿದು ಬಿತ್ತು, ಬೇಕಾದಷ್ಟು ಜನ ಸತ್ತರು, ಯಾರೂ ರಾಜೀನಾಮೆ ಕೊಡಲಿಲ್ಲ, ಕಳ್ಳಭಟ್ಟಿ ದುರಂತದಲ್ಲಿ ಬೇಕಾದಷ್ಟು ಜನ ಸತ್ತರು, ಆಗ ಯಾರೂ ರಾಜೀನಾಮೆ ಕೊಡಲಿಲ್ಲ ಆದರೆ ಈಗ ನನ್ನ ರಾಜೀನಾಮೆ ಕೇಳುತ್ತೀರಿ? ಏನು ತಪ್ಪು ಮಾಡಿದ್ದೇನೆ ಎಂಬುದನ್ನು ಹೇಳಿ ದಯಮಾಡಿ ಈ ರೀತಿ ಮಾಡತಕ್ಕದ್ದು ಸರಿಯಲ್ಲ. ನಾನು ಸಾಕಷ್ಟು ಉದಾಹರಣೆಗಳನ್ನು ಕೊಟ್ಟಿದ್ದೇನೆ. ಮಾನ್ಯ ಶ್ರೀನಿವಾಸಗೌಡರು, ರಾಜೂಗೌಡ ಅವಿತು ಕೊಂಡುಬಿಟ್ಟದ್ದಾರೆ, ಕ್ಷೇತ್ರಕ್ಕೇ ಹೋಗುವುದಿಲ್ಲ ಎಂದು ಹೇಳಿದ್ದಾರೆ. ಸ್ವಾಮಿ, 28ನೇ ತಾರೀಖು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ಒಂದು ಮಾತು, ಮಾನ್ಯ ರಾಜೂಗೌಡರೇ ಸ್ವತಃ ಹೇಳಿದಂಥದ್ದು, ನಾನು ಅಪರಾಧಿಯಲ್ಲ, ಆರೋಪಿ ಎಂದು ಒಪ್ಪಿ ಕೊಂಡಂಥದ್ದು. ಅದಕ್ಕೆ ರಾಜೀನಾಮೆ ಕೊಡಿ ಎಂದು ತಾವು ಸ್ವತಃ ಹೇಳಿದಿರಿ, ಸದನದಲ್ಲಿ ಹೇಳಿದ್ದು, ನಾನು ಅಪರಾಧಿಯಲ್ಲ ಆರೋಪಿ ಎಂದು ಒಪ್ಪಿಕೊಂಡಿರಿ. ಅದಕ್ಕೆ ರಾಜೀನಾಮೆ ಕೇಳುವಂಥ ಪರಿಸ್ಥಿತಿ ಬಂತು.

ಶ್ರೀ ಜಿ.ರಾಜೂಗೌಡ: ಇಲ್ಲ, ನನ್ನ ಮೇಲೆ ಅಸತ್ಯವಾದ ಆರೋಪ ಹೊರಿಸುತ್ತಾರೆ ಎನತಕ್ಕಂಥ ಮಾತನ್ನು ಹೇಳಿದನೆ ಹೊರತು ...

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಬೇಕಾದರೆ ಕಡತ ತೆಗೆದು ನೋಡಿ.

ಶ್ರೀ ಜಿ.ರಾಜೂಗೌಡ: ಕಡತ ತೆಗೆದು ನೋಡಿ. ನನ್ನ ಮೇಲೆ, ಈಗಲೂ ಹೇಳುತ್ತೇನಲ್ಲಾ ನನ್ನ ಮೇಲೆ ಅಸತ್ಯವಾದ ಆರೋಪಗಳನ್ನು ಹೊರಿಸುತ್ತಾರೆಂದು ಹೇಳಿದೆನೇ

ಹೊರತು ನಾನೆಂದೂ ಆ ರೀತಿ ಹೇಳಲಿಲ್ಲ. ಆದ್ದರಿಂದ, ದಯಮಾಡಿ, ಈವತ್ತಲ್ಲ ಎಷ್ಟು ದಿನಕ್ಕಾದರೂ ಆಗಲಿ, ನಾನು ಆರೋಪಿಯೂ ಅಲ್ಲ, ತಪ್ಪಿತಸ್ಥನೂ ಅಲ್ಲ ತಾವು ತಪ್ಪು ತಿಳಿದು ಕೊಂಡಿದ್ದಿರಿ 28ನೇ ತಾರೀಖು ನಾನು ನನ್ನ ಜಿಲ್ಲಾ ಕೇಂದ್ರಕ್ಕೆ ಹೋಗಿದ್ದೆ. ನನ್ನ ಜೊತೆಯಲ್ಲಿ ಶಾಸಕರಾದ ಗುರುಸ್ವಾಮಿಯವರು ಬಂದಿದ್ದರು, ಮಾನ್ಯ ಕೃಷ್ಣಮೂರ್ತಿಯವರು ಬಂದಿದ್ದರು, ಕೇಂದ್ರ ಸರ್ಕಾರದ ಮಂತ್ರಿಗಳಾದ ಮಾನ್ಯ ಶ್ರೀನಿವಾಸ್‌ಪ್ರಸಾದ್‌ರವರು ಬಂದಿದ್ದರು, ಸಾವಿರಾರು ಜನ ಸೇರಿದ್ದರು, ಏಕೆ ಅವಿತುಕೊಳ್ಳುತ್ತೇನೆ? ನಾನೇನು ಕಳ್ಳನೇ? ನಾನೇಕೆ ಅವಿತು ಕೊಳ್ಳುವುದು? ಶಾಸಕ ಮಿತ್ರ ಶ್ರೀ ಶ್ರೀನಿವಾಸಗೌಡರನ್ನು ನಾನೊಂದು ಸಲ ನನ್ನ ಕ್ಷೇತ್ರಕ್ಕೆ ಕರೆದುಕೊಂಡು ಹೋಗುವ ಆಸೆ ಇದೆ, ಅವರನ್ನು ಕರೆದುಕೊಂಡು ಹೋಗಿ ಮಹದೇಶ್ವರನ ದರ್ಶನ ಮಾಡಿಸಿ ನನ್ನ ಭಾಂದವ್ಯವೇನು ಜನರೊಂದಿಗೆ ಎಂಬುದನ್ನು ಹೇಳಲು ಇಚ್ಛಿ ಪಡುತ್ತಿದ್ದೇನೆ ಆದ್ದರಿಂದ ಯಾವ ರೀತಿಯಲ್ಲೂ ಕೂಡ ನಾನು ಅಪರಾಧಿಯಲ್ಲ, ನಾನು ಆರೋಪಿಯಲ್ಲ, ನನಗೂ ಆ ಕಳ್ಳನಿಗೂ ಯಾವುದೇ ಸಂಬಂಧವಿಲ್ಲ, ದಯಮಾಡಿ ಕೇಳಬೇಕು, ಮೂರು ಸಲ ನಮ್ಮಣ್ಣನವರು ಗೆದ್ದಿದ್ದಾರೆ ಆರು ಸಲ ನಾನು ಗೆದ್ದೆ, ಒಂದು ಸಲ ನಾಗಪ್ಪನವರನ್ನು ಗೆಲ್ಲಿಸಿ, ಜನರ ಬಗ್ಗೆ ನನಗೆ ವಿಶ್ವಾಸವಿದೆ. ನನ್ನ ಬಗ್ಗೆ ಜನರಿಗೆ ಗೌರವವಿದೆ, ಪ್ರತಿಯೊಬ್ಬ ಮತದಾರರೂ ಕೂಡ ನನ್ನನ್ನು ಗುರುತಿಸಿದ್ದಾರೆ, ನನ್ನ ಯೋಗ್ಯತೆ ಏನು ಎಂದು ಮತದಾರರಿಗೆ ನನಗೆ ಚೆನ್ನಾಗಿ ಗೊತ್ತಿದೆ, ದಯಮಾಡಿ ಈ ರೀತಿಯ ಮಾತುಗಳನ್ನು ಮುಂದೆ ಆಡಬೇಡಿ ಎಂದು ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ (ವೇಮಗಲ್): ಮಾನ್ಯ ಉಪಾಧ್ಯಕ್ಷರೆ, ಈ ದಿವಸ ಮತ್ತು ಕಳೆದ ಮೂರು-ನಾಲ್ಕು ದಿವಸಗಳಿಂದ ನಾವು ಬಹಳ ದುಃಖಕರವಾದಂಥ ವಿಚಾರ ಈ ಸದನದಲ್ಲಿ ಚರ್ಚೆಯಾಗುತ್ತಿದೆ. ಬಹುಶಃ ನನ್ನ ಜ್ಞಾಪಕದ ಪ್ರಕಾರ ಈ ಸದನದ ಚರಿತ್ರೆಯಲ್ಲೇ ಇಷ್ಟೊಂದು ದುಃಖಕರವಾದಂಥ ವಿಚಾರವನ್ನು ಇಷ್ಟು ದೀರ್ಘಾವಧಿಯಾಗಿ ಚರ್ಚೆ ಮಾಡತಕ್ಕಂಥದ್ದು ಮತ್ತೊಂದು ಇರಲಿಲ್ಲ, ಒಬ್ಬ ವ್ಯಕ್ತಿಯ ಸಾವಿನ ಬಗ್ಗೆ ಅಥವಾ ಕೊಲೆಯ ಬಗ್ಗೆ ಇಷ್ಟೊಂದು ಪೂರ್ತಿ ಈ ಅಧಿವೇಶನದ ಪೂರ್ತಿ ಹಿಂದೆ ಯಾವ ವಿಚಾರದಲ್ಲೂ, ಇಂಥ ವಿಚಾರದಲ್ಲೂ ಚರ್ಚೆಯಾಗಿರಲಿಲ್ಲ, ಇದಕ್ಕೆ ಕಾರಣವೂ ಸಹ ಇದೆ, ಕಾರಣ ಏನು ಎಂದರೆ, ಅನೇಕ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಹುಟ್ಟಿತಕ್ಕಂಥದ್ದು ಒಂದು ಜೈವಿಕ ಕ್ರಿಯೆ, ಸಾಯ ತಕ್ಕಂಥದ್ದು ಸ್ವಾಭಾವಿಕ, ಹುಟ್ಟಿರತಕ್ಕಂಥವರೆಲ್ಲರೂ ಸಾಯಲೇ ಬೇಕು, ಅದು ಸ್ವಾಭಾವಿಕ. ಆದರೆ, ಸ್ವಾಭಾವಿಕವಾದಂಥ ಸಾವು ಇದಾಗಿದ್ದಿದ್ದರೆ ಇಲ್ಲಿ ಚರ್ಚೆಗೆ ಬರುತ್ತಿರಲಿಲ್ಲ. ಈ ಸದನದ ಸದಸ್ಯರು ಮಾನ್ಯ ನಾಗಪ್ಪನವರು ಆಗಿರುವುದರಿಂದ ಬೇರೆ ಮಾನ್ಯ ಸದಸ್ಯರು ತೀರಿ ಹೋದಂಥ ಸಂದರ್ಭದಲ್ಲಿ ಯಾವ ರೀತಿಯಲ್ಲಿ ನಾವು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೋ ಅದೇ ರೀತಿಯಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಿ ನಾವು ಮರೆಯುತ್ತಿದ್ದೆವು. ಆದರೆ, ಈ ಸದಂರ್ಭದಲ್ಲಿ ಅದು ಆಗಲಿಲ್ಲ, ದೀರ್ಘವಾದಂಥ ಚರ್ಚೆ ಅನೇಕ ವಿಚಾರಗಳನ್ನು ಹೊರತಕ್ಕಂಥ ಚರ್ಚೆ ಇಲ್ಲಿ ನಡೆದಿದೆ. ಕಾರಣ ಏನು ಎಂದರೆ, ಅವರ ಸಾವು ಸ್ವಾಭಾವಿಕ ಅಲ್ಲ ಮತ್ತು ಅಷ್ಟೇ ಅಲ್ಲದೇ ಆ ಸಾವನ್ನು ತಪ್ಪಿಸಬಹುದಾಗಿತ್ತು. ಖಂಡಿತಾ ತಪ್ಪಿಸಬಹುದಾಗಿತ್ತು. ಈ ಪ್ರಯತ್ನ,

ಪ್ರಮಾಣಿಕವಾದಂಥ ಪ್ರಯತ್ನ ನಡೆದಿದ್ದರೆ ಮಾನ್ಯ ನಾಗಪ್ಪನವರು ನಮ್ಮ ಜೊತೆಯಲ್ಲಿ ಅವರು ಇಲ್ಲಿಯವರೆಗೂ ಕೂಡ ಬದುಕಿರುತ್ತಿದ್ದರು, ಸ್ವಾಭಾವಿಕ ಸಾವು ಬರುವವರೆಗೆ ಅವರು ಬದುಕಿರುತ್ತಿದ್ದರು. ಆದರೆ ದುರಾದೃಷ್ಟವಶಾತ್ ಆ ರೀತಿಯಾಗಿ ಆಗಲಿಲ್ಲ. ಆದ್ದರಿಂದ ಇಷ್ಟೊಂದು ದೀರ್ಘಾವಧಿ ಚರ್ಚೆ ಈ ಸದನದಲ್ಲಿ ಇವತ್ತು ನಡೆಯುತ್ತಿದೆ. ಸ್ವಾಮಿ ಈ ಸರ್ಕಾರ ಹೆಜ್ಜೆಹೆಜ್ಜೆಯಲ್ಲೂ ಎಡವಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ನಾನು ಎಲ್ಲಾ ವಿವರಗಳಿಗೆ ಹೋಗುವುದಿಲ್ಲ. ಮಾನ್ಯ ಸದಸ್ಯ ಅನೇಕರು ಹೇಳಿದ್ದಾರೆ. ಹೆಜ್ಜೆಹೆಜ್ಜೆಗೂ ಕೂಡ ಸರ್ಕಾರ ಎಡವಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಅರ್ಕೇಶ್ ರವರ ವರದಿಯಲ್ಲಿ ಅವರ ಹೆಸರು ನಮೂದಾಗಿತ್ತು, ಹೇಳಿದ್ದಾರೆ, ಇಂಥ ಇಂಥವರನ್ನು ಅಪಹರಣ ಮಾಡತಕ್ಕ ಸಂಭವವಿದೆಯೆಂದು ಹೇಳಿದ್ದಾರೆ. ಆ ವರದಿಯನ್ನು ಆಧರಿಸಿ ಪೊಲೀಸಿನ ವರಿಷ್ಠರು, ಅಲ್ಲಿನ ಜಿಲ್ಲಾ ವರಿಷ್ಠಗೆ ಪತ್ರಗಳನ್ನು ಬರೆಯುತ್ತಾರೆ, ಅವರು ಪುನಃ ಮುಂದಿನ ಕ್ರಮ ತೆಗೆದುಕೊಂಡು ಇವರಿಗೆ ರಕ್ಷಣೆಯನ್ನು ಕೊಡಿ ಎಂದು ಹೇಳುತ್ತಾರೆ. ಅವರಿಗೆ ಕೊಟ್ಟಿರತಕ್ಕ ರಕ್ಷಣೆ, ನಾವು "ವೈ" ಕ್ಯಾಟಗರಿ ರಕ್ಷಣೆಯನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಸ್ವಾಮಿ, ನಾಗಪ್ಪನವರನ್ನು ವೀರಪ್ಪನ್ ಹಿಡಿದುಕೊಂಡು ಹೋದಂಥ ಸಂದರ್ಭದಲ್ಲಿ ಯಾವ ಕ್ಯಾಟಗರಿ ರಕ್ಷಣೆ ಅಲ್ಲಿ ಇದ್ದದ್ದು? ಕಾಗದದ ಮೇಲೆ ಇದ್ದದ್ದು 'ವೈ' ಕ್ಯಾಟಗರಿ. ಆದರೆ ವಾಸ್ತವವಾಗಿ ಇದ್ದದ್ದು, ಬಂದೂಕನ್ನೂ ಮಟ್ಟಲು ಸಾಧ್ಯವಿಲ್ಲದೇ ಇದ್ದಂಥ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್. ಈ ವೀರಪ್ಪನ್‌ನ ಅಟ್ಟಹಾಸ ಸುಮಾರು ಕಳೆದ 30 ವರ್ಷಗಳಿಂದ ನಡೆಯುತ್ತಿದೆ ಬಹುಶಃ ಇಷ್ಟೊಂದು ಹತ್ತಿರ, ಕೇವಲ 2-3 ಅಡಿ ಹತ್ತಿರದಲ್ಲಿ ವೀರಪ್ಪನ್ ಯಾವತ್ತೂ ಕೂಡ ಪೊಲೀಸರ ಕೈಗೆ ದೊರಕಿರತಕ್ಕಂಥ ಸಂದರ್ಭ ಒದಗಿರಲಿಲ್ಲ. ಮಾನ್ಯ ಖರ್ಗೆಯವರೂ ಕೂಡ ಗೃಹ ಮಂತ್ರಿಗಳಾಗಿದ್ದಿರಿ ತಮಗೆ ಗೊತ್ತಿದೆ, ಯಾವತ್ತೂ ಕೂಡ ಅವನು ಇಷ್ಟು ಹತ್ತಿರ ಬಂದಿರಲಿಲ್ಲ, ಪೊಲೀಸ್‌ನವರು ಅವನನ್ನು ಹಿಡಿಯತಕ್ಕಂಥ ಲವಕಾಶ ಸಿಕ್ಕಿರಲಿಲ್ಲ. ಆದರೆ ಅಲ್ಲಿರತಕ್ಕಂಥವನು ಒಂದು ಗುಂಡು ಹಾರಿಸಿದ್ದಿದ್ದರೆ, ಏಕೆಂದರೆ ಅದಕ್ಕೇನೂ ಗುರಿ ಇಡಬೇಕಾಗಿರಲಿಲ್ಲ, ಹತ್ತಿರದಿಂದ ಕಾಣುವಾಗ ಗುರಿ ಇಡಬೇಕಾಗಿರತಕ್ಕಂಥದ್ದೇನೂ ಇರಲ್ಲಿಲ್ಲ, ಗುರಿ ಹಿಡಿದು ಹೊಡೆಯಬೇಕಾಗಿರತಕ್ಕಂಥ ಅವಶ್ಯಕತೆ ಏನೂ ಇರಲಿಲ್ಲ. ಬಂದೂಕನ್ನು ಅವನ ಕಡೆಗೆ ತೋರಿಸಿ, ಗುಂಡು ಹಾರಿಸಿದ್ದಿದ್ದರೆ, ವೀರಪ್ಪನ್ ಕಥೆ ಅಲ್ಲೇ ಅಂದೇ ಮುಗಿಯುತ್ತಿತ್ತು, ಇಲ್ಲೇ ತೋರಿಸುತ್ತದೆ, ಆ ಕೆಲಸ ಆಗಲಿಲ್ಲ, ಆಗದಿರುವ ಕಾರಣದಿಂದ ಎಷ್ಟು ದೊಡ್ಡ ಅಪರಾಧ ಸರ್ಕಾರದಿಂದ ಆಗಿದೆ ಅನ್ನತಕ್ಕಂಥದ್ದಕ್ಕೆ ಇದು ಉದಾಹರಣೆಯಾಗಿದೆ. ಅದಕ್ಕಂತ ಮೊದಲು ರಾಜ್‌ಕುಮಾರ್‌ರವರ ಅಪಹರಣವಾಗಿತ್ತು ರಾಜ್‌ಕುಮಾರ್ ಅಪಹರಣವಾದ ಮೇಲೆ, ಅಲ್ಲಿಂದ ಸುಮಾರು ಎರಡು ವರ್ಷಗಳ ಕಾಲ ನಿಮಗೆ ಸಮಯ ಇತ್ತು. ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಏನು ಕ್ರಮ ತೆಗೆದುಕೊಂಡಿರಿ? ಆದರೆ ನಮ್ಮ ಕಡೆ ಬೆರಳು ಕೋರಿಸತಕ್ಕಂಥ ಕೆಲಸ ಏನು ಮಾಡಿದಿರಿ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾ, ವೀರಪ್ಪನ್ ಅಟ್ಟಹಾಸಕ್ಕೆ ಅಥವಾ ನಾಗಪ್ಪನವರ ಸಾವಿಗೆ ಜವಾಬ್ದಾರಿಯನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ವಿರೋಧ ಪಕ್ಷದವರು ಹೇಳಿದಂತೆ ನಾವು ನಡೆದುಕೊಂಡಿದ್ದೇವೆ ಅನ್ನತಕ್ಕಂಥ ಮಾತನ್ನು ಹೇಳಿದರು, ಹೌದು ಸ್ವಾಮಿ, ನಾವು ನಾಗಪ್ಪನವರು ಯಾವತ್ತು ಅಪಹರಣವಾದರೋ, ಅವತ್ತು ಮಾರನೆಯ ದಿವಸವೇ, ಅವತ್ತು ಬೆಳಿಗ್ಗೆಯೇ ನಾವು

ಅಲ್ಲಿಗೆ ಹೋಗಿದ್ದೆವು. ಅಲ್ಲಿಂದ ಬರುತ್ತಾ ದಾರಿಯಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿ, ಸಭೆ ಕರೆಯಬೇಕೆಂದು ಹೇಳಿದ್ದೆವು. ಅದರಂತೆ ಅವರು ಸಭೆಯನ್ನೂ ಕರೆದಿದ್ದರು. ಆ ಸಭೆಯಲ್ಲಿ ನಾವು ಒತ್ತಾಯ ಮಾಡಿರತಕ್ಕಂಥದ್ದು ಏನಪ್ಪ ಅಂದರೆ, ನಿಮ್ಮ ಎಸ್.ಟಿ.ಎಫ್. ಕಾರ್ಯಾಚರಣೆ ಏನಿದೆ, ಅದನ್ನು ನಿಲ್ಲಿಸಬೇಕು ಎನ್ನತಕ್ಕಂಥ ಒತ್ತಾಯವನ್ನು ನಾವು ಮಾಡಿದ್ದೇವೆ. ಇವತ್ತೂ ಕೂಡ ನಾವು ಅದಕ್ಕೆ ಬದ್ಧರು. ಸಭೆಗಳಲ್ಲಿ ಅಂದರೆ ಸರ್ವ ಪಕ್ಷಗಳ ಸಭೆಯಲ್ಲಿ ತೆಗೆದುಕೊಂಡಂತಹ, ನಾವು ಏನು ಸಲಹೆ ಕೊಟ್ಟೆವು. ಈ ಸಲಹೆಯಿಂದ ಒಂದು ಮಾತೂ ಕೂಡ ನಾವು ಹಿಂದೆ ಸರಿದಿಲ್ಲ. ಯಾರನ್ನು ಕುರಿತು ಈ ಮಾತನ್ನು ಹೇಳಿದರೋ ಎಂಬುದು ನನಗಂತೂ ಕೂಡ ಅರ್ಥವಾಗುತ್ತಿಲ್ಲ, ಅವತ್ತು ಏನು ಹೇಳಿದ್ದೆವೋ, ಇವತ್ತೂ ಸಹ ಅದೇ ಮಾತನ್ನು ಹೇಳುತ್ತಿದ್ದೇವೆ. ಆದರೆ ಈ ರೀತಿಯಾಗಿ, ನೀವು ಮಾಡಿದ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ, ವಿರೋಧ ಪಕ್ಷದ ಮೇಲೆ, ನಮ್ಮ ಮೇಲೆ ಬೆರಳು ತೋರಿಸತಕ್ಕಂಥ ಚಾಳಿ ನಿಮಗೆ ಏಕೆ? ಅಂದರೆ, ನಿಮ್ಮ ಕೈಯ್ಯಲ್ಲಿ ಆಗದೇ ಇರುವಂತಹ ಕೆಲಸಕ್ಕೆ ಬೇರೆಯವರನ್ನು ಗುರಿ ಮಾಡತಕ್ಕಂಥ ಚಾಳಿ ನಿಮಗೇಕೆ ಎಂದು ನಾನು ಇವತ್ತು ಇಲ್ಲಿ ನಿಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ. ನಿಮಗೆ ಎಂತಹ ಅವಕಾಶ ಒದಗಿ ಬಂದಿತ್ತು ಎಂದರೆ, ರಾಜ್‌ಕುಮಾರ್ ಬಿಡುಗಡೆಯಾದ ತಕ್ಷಣ ನಿಮ್ಮ ಎಸ್.ಟಿ.ಎಫ್.ಯನ್ನು ಎರಡು ವರ್ಷ ಸುಮ್ಮನೆ ಇದ್ದಿರಿ ಎಸ್.ಟಿ.ಎಫ್.ಕ್ರಮವನ್ನು ನಿಲ್ಲಿಸಬೇಕು ಎಂದು ನಾವು ಹೇಳಿದ ಮೇಲೂ ಕೂಡ 15 ದಿವಸಗಳ ಕಾಲ ನೀವು ನಿಲ್ಲಿಸಲಿಲ್ಲ, ಕ್ರಮ ನಡೆಯುತ್ತಲೇ ಇದೆ. 25ನೇ ತಾರೀಖು ಅಪಹರಣವಾಗುತ್ತದೆ. ನಿಮ್ಮ ಅಧಿಕೃತ ಹೇಳಿಕೆಯ ಪ್ರಕಾರವೇ ನೀವು ಕಾರ್ಯಾಚರಣೆಯನ್ನು ನಿಲ್ಲಿಸಿರತಕ್ಕಂಥದ್ದು ಯಾವತ್ತು ಅಂದರೆ, 8ನೇ ತಾರೀಖು. 8ನೇ ತಾರೀಖಿನ ದಿವಸದಿಂದ ತಾವು ಕಾರ್ಯಾಚರಣೆಯನ್ನು ನಿಲ್ಲಿಸತಕ್ಕ ಕ್ರಮ ಕೈಗೊಂಡಿದ್ದೀರಿ. ಹೋಗಲಿ, ನಮ್ಮ ಮಾತನ್ನೂ ಸಹ ನೀವು ಕೇಳಲಿಲ್ಲ. ಕೇಳುವ ಮಟ್ಟದಲ್ಲೂ ಕೂಡ ಅವತ್ತು ನೀವು ಇರಲಿಲ್ಲ. ನಮ್ಮ ಎದುರುಗಡೆ ಹೇಳತಕ್ಕಂಥದ್ದು ಒಂದು, ನಾವು ವೈಯಕ್ತಿಕವಾಗಿಯೂ ಭೇಟಿಯಾಗಿದ್ದೇವೆ, ಮತ್ತು ಎಲ್ಲರ ಸಮ್ಮುಖದಲ್ಲೂ ಕೂಡ ಭೇಟಿಯಾಗಿದ್ದೇವೆ. ನಮ್ಮ ಎದುರಿನಲ್ಲಿ ಹೇಳಿರತಕ್ಕಂಥದ್ದು ಒಂದು, ನೀವು ತೆಗೆದುಕೊಂಡಿರತಕ್ಕಂಥ ಕ್ರಮ ಮತ್ತೊಂದು. ಇದನ್ನು ನಿಮ್ಮ ಹೇಳಿಕೆಯೇ ಹೇಳುತ್ತದೆ. ನಾವು ಅವತ್ತಿನ ದಿವಸ, ಮೊದಲನೇ ದಿವಸ ಒತ್ತಾಯ ಮಾಡಿದಾಗ, ಎಸ್.ಟಿ.ಎಫ್. ಕಾರ್ಯಾಚರಣೆಯನ್ನು ನಿಲ್ಲಿಸಬೇಕೆಂದು ಹೇಳಿದಾಗ, ಮಾಡುತ್ತೇವೆ ಎಂದು ಹೇಳಿದರು. ಅದೇ ಒತ್ತಾಯವನ್ನು ನಾಗಪ್ಪನವರ ಕುಟುಂಬದ ಮಕ್ಕಳು ಮತ್ತು ಶ್ರೀಮತಿಯವರೂ ಕೂಡ ಒತ್ತಾಯ ಮಾಡಿದ್ದರು. ಮುಖ್ಯಮಂತ್ರಿಗಳಲ್ಲಿ ಹೋದಂತಹ ಸಂದರ್ಭದಲ್ಲೂ ಕೂಡ ಆ ಮಾತನ್ನು ಕೊಟ್ಟಿದ್ದರು, ರಾಜ್‌ಕುಮಾರ್‌ರವರ ಅಪಹರಣವಾದಂತಹ ಕಾಲದಲ್ಲಿ ಏನೇನು ಕ್ರಮಗಳನ್ನು ನಾವು ತೆಗೆದುಕೊಂಡಿದ್ದೆವೋ, ಆ ಎಲ್ಲಾ ಕ್ರಮಗಳನ್ನೂ ಕೂಡ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಶ್ರೀಮತಿ ನಾಗಪ್ಪನವರಿಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟು ಬಂದರು. ಮಾಡಿದ್ರಾ ಆ ಕೆಲಸ? ಮಾಡಲಿಲ್ಲ. ನಿಮ್ಮ ಹೇಳಿಕೆಯಿಂದಲೇ ಗೊತ್ತಾಗುತ್ತದೆ, 15 ದಿವಸಗಳ ಕಾಲ ಎಸ್.ಟಿ.ಎಫ್. ಕಾರ್ಯಾಚರಣೆಯನ್ನು ನೀವು ನಿಲ್ಲಿಸಲಿಲ್ಲ. ನಿಲ್ಲಿಸದೇ ಇರುವುದಕ್ಕೆ ಕಾರಣವೇನು ಎಂಬುದನ್ನು ನೀವು ಹೇಳಬೇಕಾಗುತ್ತದೆ. ಎಸ್.ಟಿ.ಎಫ್. ಆ್ಯಕ್ಷನ್

ಮೂಲಕವೇ ನಾವು ಅವನನ್ನು ಹಿಡಿಯುತ್ತೇವೆ, ಅದರಲ್ಲೂ ಕೂಡ ನಮಗೆ ಕೊಟ್ಟಂತಹ ಭರವಸೆ ಏನು? ನಾಗಪ್ಪನವರನ್ನು ಕ್ಷೇಮವಾಗಿ ಕರೆದುಕೊಂಡು ಬರುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟರು. ನಾವು ಇನ್ನೂ ಮುಂದೆ ಹೋಗಿ ಒಂದು ಮಾತು ಹೇಳುತ್ತೇವೆ ಸ್ವಾಮಿ, ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ನಿಮಗೇ ಬಿಡುತ್ತೇವೆ, ಆದರೆ ನಮಗೆ ಬೇಕಾಗಿರತಕ್ಕಂಥದ್ದು, ನಾಗಪ್ಪನವರು ಕ್ಷೇಮವಾಗಿ ಎಲ್ಲರ ಮುಂದೆಯೂ ಬರಬೇಕು, ಅವರ ಕುಟುಂಬದ ಮುಂದೆ ಕಾಣಬೇಕು ಅನ್ನತಕ್ಕಂಥ ಒತ್ತಾಯವನ್ನು ನಾವು ಮಾಡಿದೆವು. ಆ ಕೆಲಸವನ್ನು ಮಾಡುತ್ತೇವೆ ಎಂದು ಹೇಳಿರತಕ್ಕಂಥವರು, ಆ ರೀತಿಯಾದಂತಹ ಕ್ರಮವನ್ನು ಎಲ್ಲಿಯೂ ಕೂಡ ತೆಗೆದುಕೊಳ್ಳದೇ, ನಮ್ಮ ಮುಂದೆ ಹೇಳಿರತಕ್ಕಂಥದ್ದು ಒಂದು, ಮತ್ತೆ ಮಾಡಿರತಕ್ಕಂಥದ್ದು ಒಂದು ಎನ್ನುವುದನ್ನು ಇವತ್ತು ದಾಖಲೆಗಳ ಮೂಲಕ ಹೇಳುತ್ತಿದ್ದೇನೆ. ಇದಕ್ಕೆ ಕಾರಣವೇನು? ಈ ರೀತಿಯಾಗಿ ಸರ್ಕಾರ ವರ್ತನೆ ಮಾಡುವುದಕ್ಕೆ ಕಾರಣವೇನು ಎನ್ನುವುದು ಈ ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ಸರ್ಕಾರ ಅನ್ನತಕ್ಕಂಥದ್ದು ಏನಾದರೂ ಕೂಡ ಹೇಳಿದ ಮೇಲೆ, ಸರ್ಕಾರದಿಂದ ಒಂದು ಭರವಸೆ ಹೊರಗಡೆ ಬಂದ ಮೇಲೆ, ಅದು ಅಧಿಕೃತವಾಗುತ್ತದೆ, ಅಧಿಕೃತವಾಗಿ ಹೇಳತಕ್ಕಂಥದ್ದು ಒಂದು, ಕಾರ್ಯಗತ ಮಾಡತಕ್ಕಂಥದ್ದು ಮತ್ತೊಂದು. ಈ ದ್ವಿಮುಖ ನೀತಿ ಏಕೆ? ಇದಕ್ಕೆ ಕಾರಣವೇನು? ರಾಜ್ಯದ ಜನತೆಗೆ ಇವತ್ತಿನ ದಿವಸ ಈ ಸತ್ಯವನ್ನು ತಿಳಿದುಕೊಳ್ಳಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಇದಕ್ಕೆ ತಾವು ಉತ್ತರವನ್ನು ಕೊಡಬೇಕಾಗುತ್ತದೆ ಅನ್ನತಕ್ಕಂಥ ಮಾತನ್ನೂ ಸಹ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಸ್ವಾಮಿ, ನಾನು ಆಗಲೇ ಹೇಳಿದೆ, ಸುಮಾರು 30 ವರ್ಷಗಳಿಂದ ವೀರಪ್ಪನ್ ಅಟ್ಟಹಾಸ ಅಲ್ಲಿ, ಆ ಭಾಗದಲ್ಲಿ ನಡೆಯುತ್ತಿದೆ. ನಾನು ಅಲ್ಲಿ ಸ್ವಲ್ಪ ಮಟ್ಟಿಗೆ ಅಭ್ಯಾಸ ಮಾಡಿದ್ದೇನೆ, ಕೊಳ್ಳೇಗಾಲ ತಾಲ್ಲೂಕಿನ ಸುಮಾರು 50 ಹಳ್ಳಿಗಳನ್ನು, ಮಾನ್ಯ ರಾಜೂಗೌಡರು ಆ ಕ್ಷೇತ್ರದ ಪ್ರತಿನಿಧಿಯಾಗಿರಬಹುದು, ಬಹಳ ಒಳ್ಳೆಯ ಕ್ಷೇತ್ರವೆಂದು ಹೇಳುತ್ತಾರೆ, ಹೌದು ಸ್ವಾಮಿ, ಬಹಳ ಒಳ್ಳೆಯ ಕ್ಷೇತ್ರ. ಅಲ್ಲಿ ಸುಮಾರು 50 ಹಳ್ಳಿಗಳಲ್ಲಿ ಈ ದೇಶದ, ಈ ನೆಲದ ಕಾನೂನು ಅಲ್ಲಿ ಇಲ್ಲ. ಈ ನೆಲದ ಕಾನೂನು ಅಲ್ಲಿ ಇಲ್ಲ. ಆದರೆ ಅಲ್ಲಿ ಯಾರ ಕಾನೂನು ಇದೆ ಎಂದರೆ, ವೀರಪ್ಪನ್ ಕಾನೂನು ಅಲ್ಲಿ ಜಾರಿಯಲ್ಲಿದೆ. ಅದನ್ನು ನೋಡಿಕೊಂಡು ಇವತ್ತಿನ ದಿವಸ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಇಲ್ಲದೇ ಇದ್ದಿದ್ದರೆ ಮೂವತ್ತು ವರ್ಷಗಳಿಂದ ವೀರಪ್ಪನ್ ಅಲ್ಲಿ ತಪ್ಪಿಸಿಕೊಂಡು ಓಡಾಡುವುದಕ್ಕೆ ಯಾವ ರೀತಿ ಸಾಧ್ಯವಾಗುತ್ತದೆ? ಈ ನೆಲದ ಕಾನೂನು ಅಲ್ಲಿ ಜಾರಿಯಲ್ಲಿ ಇದ್ದಿದ್ದರೆ, ಅಲ್ಲಿಯ ಹಳ್ಳಿಯಲ್ಲಿ ಇರತಕ್ಕಂಥವರೆಲ್ಲರೂ ಸಹಕಾರ ನೀಡಿ, ಅವನ ಚಲನವಲನಗಳನ್ನು ಯಾರಿಗೆ ತಿಳಿಸಬೇಕಾಗುತ್ತೋ, ಅವರಿಗೆ ತಿಳಿಸತಕ್ಕಂಥ ಕೆಲಸ ಆಗಿದ್ದಿದ್ದರೆ, ಅಲ್ಲಿ ವೀರಪ್ಪನ್ ಅನ್ನು ಯಾವತ್ತೋ ಹಿಡಿಯಬಹುದಾಗಿತ್ತು. ಇವತ್ತು ಸಾಧ್ಯವಿಲ್ಲ. 30 ವರ್ಷಗಳಿಂದಲೂ ಕೂಡ ಅವನು ಅಲ್ಲಿ ಇದ್ದಾನೆ. ಎಲ್ಲರಿಗೂ ಕೂಡ ಚಳ್ಳೆಹಣ್ಣು ತಿನ್ನಿಸತಕ್ಕಂಥ ಕೆಲಸವನ್ನು ಅವನು ಮಾಡುತ್ತಿದ್ದಾನೆ ಎಂದಾದರೆ, ಅಲ್ಲಿ ಈ ನೆಲದ ಕಾನೂನು ಜಾರಿಯಲ್ಲಿ ಇಲ್ಲ. ಈಗಲೂ ಕೂಡ ಅವನನ್ನು ಹಿಡಿಯಬೇಕಾಗಿದ್ದರೆ, ಸ್ವಾಮಿ, ಮುಲಾಜಿಲ್ಲದೇ, ಈ ಮಾತನ್ನು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಮುಲಾಜಿಲ್ಲದೇ ಈ ನೆಲದ ಕಾನೂನನ್ನು ಅಲ್ಲಿ

ಜಾರಿ ಮಾಡಿ. ಒಂದು ವೇಳೆ ಏನಾದರೂ ಕೂಡ, ಏಕೆಂದರೆ ತಮಗೆ ಬೇರೆ ಬೇರೆ ಕಾಟವೆಲ್ಲವೂ ಕೂಡ ಇದೆ, ಹ್ಯೂಮನ್ ರೈಟ್ಸ್ ಇವೆಲ್ಲವೂ ಕೂಡ ಈಗಾಗಲೇ ಅಲ್ಲಿ ನಡೆಯುತ್ತಿದೆ, ಕೆಲವು ಸಂದರ್ಭಗಳಲ್ಲಿ, ನಾನು ಬಹಳ ಜವಾಬ್ದಾರಿಯಿಂದ ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಹ್ಯೂಮನ್ ರೈಟ್ಸ್ ವಾಯ್‌ಲೇಷನ್ ಆದರೂ ಕೂಡ ಚಿಂತೆ ಇಲ್ಲ, ಏಕೆಂದರೆ, ಪುನಃ ಕೂಡ ನಾಗಪ್ಪನಂತಹವರಿಗೆ ಆದ ಗತಿ ಯಾರಿಗೂ ಬರಬಾರದು, ಬರಲಾರದಂತಹ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ನಿರ್ಧಾರ ಸರ್ಕಾರದ್ದಾದರೆ, ಹ್ಯೂಮನ್ ರೈಟ್ಸ್ ವಾಯ್‌ಲೇಷನ್ ಆದರೂ ಕೂಡ ಚಿಂತೆ ಇಲ್ಲ. ಯಾರ್‍ಯಾರು ಅವನಿಗೆ ಸಹಕಾರ ನೀಡುತ್ತಿದ್ದಾರೆ, ಯಾರ್‍ಯಾರು ಅವನಿಗೆ ಮಾಹಿತಿಯನ್ನು ನೀಡುತ್ತಿದ್ದಾರೆ, ಇವರನ್ನೆಲ್ಲಾ ಹಿಡಿಯತಕ್ಕಂಥ ಕೆಲಸವನ್ನು ಮೊದಲು ಮಾಡಿ. ಈ ಕೆಲಸ ಮೊದಲು ಆದರೆ, ವೀರಪ್ಪನ್ ತನ್ನ ಪಾಡಿಗೆ ತಾನೇ ನಿಮ್ಮ ಕೈಗೆ ಸಿಗುತ್ತಾನೆ. ಇಲ್ಲಿಯವರೆಗೂ ಕೂಡ ಎಷ್ಟು ಹಣ ಖರ್ಚಾಗಿದೆ? ಸ್ವಾಮಿ, ಏನಾದರೂ ಅದಕ್ಕೆ ಲೆಕ್ಕ ಉಂಟೇ 100-150 ಕೋಟಿ ರೂಪಾಯಿಗಳ ಮೇಲೆ ಖರ್ಚಾಗಿರಬಹುದು ಎಂದು ನನಗನ್ನಿಸುತ್ತದೆ. ನನ್ನ ಊಹೆ ಪ್ರಕಾರ 150 ಕೋಟಿ ರೂಗಳಿಗಿಂತ ಹೆಚ್ಚು ಹಣ ಖರ್ಚಾಗಿರಬಹುದು ಎಂದು ನಾನಂತೂ ಕೂಡ ಭಾವಿಸಿದ್ದೇನೆ. ಇನ್ನು 150 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಕೂಡ, ಖಂಡಿತವಾಗಿಯೂ ಕೂಡ ಅವನು ಸಿಗುವುದಿಲ್ಲ. ಮೊದಲು ನೆಲದ ಕಾನೂನನ್ನು ಅಲ್ಲಿ ಜಾರಿ ಆಗುವುದಕ್ಕೆ ಕ್ರಮ ತೆಗೆದುಕೊಳ್ಳಿ ನಮ್ಮ ಮುಖ್ಯಮಂತ್ರಿಗಳಿಗೆ ತಮಾಷೆಗೆ ಕೆಲವರು ಐಟಿ ಕೃಷ್ಣ ಎಂದು ಕರೆಯುತ್ತಾರೆ. ಎಲ್ಲಿ ಹೋಯಿತು ನಿಮ್ಮ ಐಟಿ? ಮಾನ್ಯ ಮುಖ್ಯಮಂತ್ರಿಗಳ ಇನ್‌ಫಾರ್ಮೇಷನ್ ಟೆಕ್ನಾಲಜಿಗಿಂತ Veerappan Information Technology is far far superior. ವೀರಪ್ಪನ್ ತನ್ನ ಟೆಕ್ನಾಲಜಿಯಿಂದ ಯಾರ ಕೈಗೂ ಸಿಗದೆ ಎಲ್ಲರಿಗೂ ಚಳ್ಳೆ ಹಣ್ಣು ತಿನ್ನಿಸುತ್ತಾನೆ. ಪೋಲೀಸ್‌ನವರು ಎಲ್ಲಿ ಬರುತ್ತಾರೆ, ಯಾವ ಅಧಿಕಾರಿ ಎಲ್ಲಿ ಓಡಾಡುತ್ತಾನೆ, ಹೇಗೆ ಬರುತ್ತಾನೆ ಎನ್ನತಕ್ಕಂಥದ್ದು ಅವನಿಗೆ ಮೊದಲು ಗೊತ್ತಾಗುತ್ತದೆ. ಪೋಲೀಸ್‌ನವರಿಗೆ ಗೊತ್ತಾಗುವುದಕ್ಕಿಂತ ಮೊದಲು ವೀರಪ್ಪನ್‌ಗೆ ಇವರ ಚಲನವಲನಗಳು ಅವನಿಗೆ ಗೊತ್ತಾಗುತ್ತವೆ. ಇಂತಹ ಇನ್‌ಫಾರ್ಮೇಷನ್ ಟೆಕ್ನಾಲಜಿ ಅವನ ವಶದಲ್ಲಿ ಇದೆ. ಆ ಇನ್‌ಫಾರ್ಮೇಷನ್ ಟೆಕ್ನಾಲಜಿ ಅನ್ನು ಮುಗಿಸಬೇಕಾಗಿದ್ದರೆ, ಈ ನೆಲದ ಕಾನೂನನ್ನು ಜಾರಿ ಮಾಡುವುದಕ್ಕೆ ನೀವು ತೀವ್ರವಾಗಿ ಪ್ರಯತ್ನ ಪಡಬೇಕು. ಆದ್ದರಿಂದ ನಾನು ಆಗಲೇ ಹೇಳಿದ ಹಾಗೆ ಕೆಲವು ಅಚಾತುರ್ಯಗಳು ಆದರೂ ಚಿಂತೆ ಇಲ್ಲ ಅವನ ಉಪಟಳವನ್ನು ಮಟ್ಟು ಹಾಕಬೇಕಾಗಿರತಕ್ಕಂಥದ್ದು, ಸರ್ಕಾರದ ಮುಖ್ಯ ಕೆಲಸ. ಜನರಿಗೆ ರಕ್ಷಣೆ ಕೊಡಬೇಕಾಗಿರತಕ್ಕಂಥದ್ದು ಮುಖ್ಯ ಕೆಲಸ. ಆ ಕೆಲಸವನ್ನು ನೀವು ದಯವಿಟ್ಟು ಮಾಡಬೇಕು ಎನ್ನತಕ್ಕಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುವುದಕ್ಕೆ ಇಷ್ಟಪಡುತ್ತೇನೆ. ವೀರಪ್ಪನ್‌ನಿಂದ ಲಾಭ ಹೊಂದಿರತಕ್ಕಂಥವರು ಕಡಿಮೆ ಏನೂ ಇಲ್ಲ. ಅಸಂಖ್ಯಾತ ಜನ ಇದ್ದಾರೆ. ಆದ್ದರಿಂದಲೇ ಅವನ ಆ ಲಾಭ ಪಡೆಯತಕ್ಕಂಥವರು ಅಸಂಖ್ಯಾತವಾಗಿರತಕ್ಕಂಥಹ ಜನರು ಇರುವ ಕಾರಣದಿಂದ ಇವತ್ತು ಅವನು ಯಾರ ಕೈಗೂ ಸಿಗದೆ ಓಡಾಡುತ್ತಿರವುದು. ಇದು ಸ್ಪಟಿಕ ಸ್ಪಷ್ಟ. ಆದ್ದರಿಂದಲೇ 35 ವರ್ಷಗಳಿಂದ ಸಿಗದೆ ಇರುವುದು. ಅಲ್ಲಿರತಕ್ಕಂಥಹ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ

ಕೇಳಿದರೆ ಹೇಳುತ್ತಾರೆ. ಯಾರ ಕೈಯಲ್ಲಿಯೂ ಕೂಡ 5 ರೂಪಾಯಿ, 10 ರೂಪಾಯಿ ಮತ್ತು 100 ರೂಪಾಯಿಗಳ ನೋಟ್ ಚಲಾವಣೆ ಆಗತಕ್ಕಂಥದ್ದು ಇಲ್ಲ. 500 ರೂಪಾಯಿ ನೋಟ್ ಚಲಾವಣೆಯಾಗುತ್ತಿದೆ. ಹೌದಾಸ್ವಾಮಿ ರಾಜೂಗೌಡರೇ? ನಿಮ್ಮ ಕ್ಷೇತ್ರ ಒಳ್ಳೆಯದ್ದು. ಆದ್ದರಿಂದ ಒಳ್ಳೆಯ ಕ್ಷೇತ್ರದಲ್ಲಿ 500 ರೂಪಾಯಿ ನೋಟ್ ಚಲಾವಣೆಯಾಗುತ್ತಿದೆ. ಎಲ್ಲಿಂದ ಬರುತ್ತದೆ. ಇದಕ್ಕೆ ಮೂಲ ಯಾವುದು? ಕಾಡಿನಲ್ಲಿರತಕ್ಕಂಥವರಿಗೆ 500 ರೂಪಾಯಿ ನೋಟ್ ಸಿಗುತ್ತದೆ ಎಂದರೆ ಎಲ್ಲಿಂದ ಬರುತ್ತದೆ? ಇದು ಸಾಮಾನ್ಯವಾದ ವಿಚಾರ, ಜನ ಅಲ್ಲಿ ಮಾತನಾಡುತ್ತಿರತಕ್ಕಂಥದ್ದು. ಇದ್ದಕ್ಕೆ ಮೂಲ ವೀರಪ್ಪನ್ ಅವನಿಗೆ ಹೆದರಿಸತಕ್ಕಂಥದ್ದು ಮೊದಲು ಗಂಧ ಪ್ರಾರಂಭ ಮಾಡಿದ, ಆನೆ ಪ್ರಾರಂಭ ಮಾಡಿದ, ಇಷ್ಟೆಲ್ಲಾ ತಾಪತ್ರಯ ಏಕೆ ಎಂದು ಹೇಳಿ ಯಾರನ್ನ ಹಿಡಿಯಬೇಕೆಂದು ಹೊಂಚು ಹಾಕಿ ಹಿಡಿಯತಕ್ಕಂಥದ್ದಕ್ಕೆ, ಇದರಿಂದ ಸಾಕಷ್ಟು ಹಣ ಅವನ ಕೈಗೆ ಸೇರಿದೆ. ಸೇರಿದ ಹಣ ಅಲ್ಲಿರತಕ್ಕಂತಹ ಸುಮಾರು 50 ಹಳ್ಳಿಗಳಲ್ಲಿ ಇರತಕ್ಕಂಥ ಸುಮಾರು 15 ರಿಂದ 20 ವರ್ಷಕಿಂತ ಮೀರಿರತಕ್ಕಂಥವರಿಗೆ ಮತ್ತು 50ರಿಂದ 55 ವಯಸ್ಸು ಮೀರಿದಂತಹವರಿಗೆ ಬಹಳ ಜನ ನಾನು ಎಲ್ಲರೂ ಎಂದು ನಾನು ಹೇಳಲು ಇಷ್ಟಪಡುವುದಿಲ್ಲ ಎಲ್ಲರಿಗೂ ಕೂಡ ಆ ಹಣ ಪಟ್ಟಿ ಕಟ್ಟುವುದಕ್ಕೆ ತಯಾರಿಲ್ಲ. ಬಹಳ ಜನ ಇವತ್ತಿನ ದಿವಸ ಅವನ ಅನುಯಾಯಿಗಳಾಗಿರುವವರು ಅಲ್ಲಿದ್ದಾರೆ. ಸುಮಾರು 50 ಹಳ್ಳಿಗಳಲ್ಲಿದ್ದಾರೆ. ಈ ಬೇರುಗಳನ್ನು ಕೀಳುವವರಿಗೆ ಅವನು ನಿಮ್ಮ ಕೈಗೆ ಸಿಗುವುದಿಲ್ಲ. ಇನ್ನೂ ಕೂಡ ನಾಗಪ್ಪನಂಥವರ ಯಾರ ಸರದಿ ಕಾಯುತ್ತಿದೆ ನನಗಂತೂ ಗೊತ್ತಿಲ್ಲ. ಬೇರೆಯವರ ಸರದಿ ಬರುವುದಕ್ಕಿಂತ ಮೊದಲು ದಯವಿಟ್ಟು ಈ ಕೆಲಸ ಮಾಡಬೇಕೆಂಬ ಒತ್ತಾಯವನ್ನು ನಾನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಅಲ್ಲಿ ನಾಗಪ್ಪನವರು ಅಪಹರಣವಾದ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳ ಹೇಳಿಕೆ ಕೂಡ ನೋಡಿದೆ, ನಾವು ಅವತ್ತಿನದಿವಸ ನಮಗೆ ದೊರೆತ ಮಾಹಿತಿ ಪ್ರಕಾರ ವೀರಪ್ಪನ್ ಬರುತ್ತಾನೆ, ಬಾಗಿಲು ತಟ್ಟುತ್ತಾನೆ, ಬಾಗಿಲು ತೆಗೆಯುವುದಿಲ್ಲ, ಬಂದೂಕಿನಿಂದ ಗುಂಡು ಹಾರಿಸುತ್ತಾನೆ. ಅಲ್ಲಿಗೂ ಬಾಗಿಲು ತೆಗೆಯುವುದಿಲ್ಲ. ಪಕ್ಕದಲ್ಲಿರತಕ್ಕಂಥ ಕಿಟಕಿ ತೆಗೆಯುತ್ತಾನೆ. ಅದಕ್ಕಿಂತ ಮೊದಲು ಒಬ್ಬ 3-4 ದಿವಸಗಳ ಮೊದಲು ಅಲ್ಲಿ ಬಂದು ಕಾದು ಎಲ್ಲರ ಚಲನವಲನಗಳನ್ನು ಗಮನಿಸಿ, ಗಮನಿಸುವುದರ ಜೊತೆಗೆ ಎಷ್ಟು ಹೊತ್ತಿಗೆ ಅವರು ಸಿಗುತ್ತಾರೆ ಏನು ಎನ್ನುವುದನ್ನು ಎಲ್ಲವನ್ನೂ ಕೂಡ ಗಮನಿಸುತ್ತಾನೆ. ಕಾಮಗೆರೆಯಲ್ಲಿ ವಾಸ ಕೂಡ ಮಾಡುತ್ತಾನೆ. ವಾಸ ಇದ್ದು ಎಲ್ಲವನ್ನೂ ಕೂಡ ಮಿನಿಟ್‌ಟು ಮಿನಿಟ್, ನಿಮಿಷ ನಿಮಿಷಕ್ಕೆ ಈ ಎಲ್ಲಾ ಮಾಹಿತಿ ಕೂಡ ವೀರಪ್ಪನ್‌ಗೆ ಸಿಗುತ್ತದೆ. ಅವೆಲ್ಲಾ ಬಹಳ ಕಾರಾರುವಕ್ಕಾಗಿ ಮಾಹಿತಿ ಪಡೆದೇ ವೀರಪ್ಪನ್ ನಾಗಪ್ಪನವರ ಮನೆಗೆ ತಲುಪುತ್ತಾನೆ. ಅವರ ಮನೆಯ ಕಿಟಕಿಯಲ್ಲಿ ಒಬ್ಬನಿಗಿಂತ ಹೆಚ್ಚಿಗೆ ಜನ ನುಗ್ಗುವುದಕ್ಕಾಗುವುದಿಲ್ಲ. ಅಲ್ಲಿರತಕ್ಕಂಥಹ ಪೋಲೀಸರು ಗುಂಡು ಹಾರಿಸಿರುವುದು ಒಂದು ಕಡೆ ಇರಲಿ, ಅದರಲ್ಲಿ ಗುಂಡು ಇದೆಯೋ ಇಲ್ಲವೋ ಬೇರೆ ಪ್ರಶ್ನೆ. ಆದರೆ ಬಂದೂಕನ್ನು ತಿರುಗಿಸಿಕೊಂಡು ಕಿಟಕಿ ಪಕ್ಕದಲ್ಲಿ ನಿಂತು ತಲೆ ಮೇಲೆ ಒಂದು ಇಟ್ಟಿದ್ದರೆ ಅವನು ಅಲ್ಲಿಯೇ ಮುಗಿದು ಹೋಗುತ್ತಿದ್ದ. ಆ ಕೆಲಸ ಕೂಡ ಆಗಲಿಲ್ಲ. ಸ್ಥಳ ನೋಡಿದಾಗ ನನಗೆ ಆ ರೀತಿ ಅನ್ನಿಸಿತು. ಆ ಕೆಲಸ ಕೂಡ ಪೋಲೀಸ್‌ನವರ ಕೈಯಲ್ಲಿ ಆಗಲಿಲ್ಲ. ವೀರಪ್ಪನ್

ನಾಗಪ್ಪನವರನ್ನು ದರ ದರ ಎಳೆದುಕೊಂಡು ಹೋಗುತ್ತಿದ್ದಾನೆ. ಆ ಸಂದರ್ಭದಲ್ಲಿ ಕೂಡ ಪೋಲಿಸ್‌ನವರು ಏನೂ ಮಾಡಲಿಲ್ಲ. ದೂರದಲ್ಲಿರತಕ್ಕಂಥ ಪೋಲಿಸ್‌ನವರಿಗೆ ಅಲ್ಲಿದಂತಹ ಜನ ಹೇಳುತ್ತಾರೆ, ಸ್ವಾಮಿ, ವೀರಪ್ಪನ್ ಇಲ್ಲೇ ಇದ್ದಾನೆ ಎಂದು ಅದರ ಬಗ್ಗೆ ಈಗಾಗಲೇ ಅನೇಕ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ, ಅವರಿಗೆ ಆರ್ಡರ್ ಬರಬೇಕೆಂದು ಅವನು ಕೊನೆಗೆ ಬಸ್‌ನಲ್ಲಿ ಕರೆದುಕೊಂಡು ಹೋಗಿರುತ್ತಾನೆಂದು ಆ ವಿವರಗಳು ಬಹಳ ಜನ ಹೇಳಿದ್ದರಿಂದ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಎಷ್ಟು ಪೋಲಿಸ್‌ನವರ ವೈಫಲ್ಯತೆ ಪರಮಾವಧಿ ಇವತ್ತಿನ ದಿವಸ ಪ್ರತಿ ಪ್ರತಿ ಹೆಜ್ಜೆಯಲ್ಲೂ ಕೂಡ ಎದ್ದು ಕಾಣುತ್ತಿದೆ. ಎಸ್‌ಟಿಎಫ್‌ನ ಹಿಂದಿನ ಮುಖ್ಯಸ್ಥರು ಸುಮಾರು 45 ದಿನ ರಜ ಹೋಗುತ್ತಾರೆ. ಅಂಥ ಜವಾಬ್ದಾರಿ ಇರತಕ್ಕಂಥ ಸ್ಥಾನದಲ್ಲಿ ಇರತಕ್ಕಂಥಹವರು 45 ದಿವಸಗಳು ರಜೆ ಹೋಗುತ್ತಾರೆಂದರೆ, ಬದಲಿ ವ್ಯವಸ್ಥೆ ಏನು ಮಾಡಿದ್ದೀರಿ? ಬದಲಿ ವ್ಯವಸ್ಥೆ ಏಕೆ ಮಾಡಲಿಲ್ಲ? ಅಂಥ ಅನಾನುಕೂಲ ಅವರಿಗೆ ಇದ್ದರೆ ವೈಯುಕ್ತಿಕವಾದ ಕಾರಣಗಳು ಅವರಿಗೆ ಏನಾದರೂ ಕೂಡ ಪಬಲವಾದವು ಇದ್ದರೆ ಅವರನ್ನು ಬದಲಾಯಿಸಿ ಬೇರೆಯವರಿಗೆ ಅಲ್ಲಿಗೆ ಹಾಕಬಹುದಾಗಿತ್ತು. ನೀವು ಹಾಕಲಿಲ್ಲ. ಒಂದುವರೆ ತಿಂಗಳ ಕಾಲ ಅವರು ರಜ ಹೋಗುತ್ತಾರೆ. ರಾಜಸ್ಥಾನಕ್ಕೆ ಎಲ್ಲಿಗೋ ಹೋಗಬೇಕೆಂದು ಹೇಳಿ ಹೋಗುತ್ತಾರೆ. ರಾಜಸ್ಥಾನಕ್ಕೆ ಹೋಗಿದ್ದು ಕೇವಲ ಮೂರು ದಿವಸಗಳು ಮಾತ್ರ. ಉಳಿದದ್ದು ಬೆಂಗಳೂರಿನಲ್ಲಿ ಆರಾಮವಾಗಿದ್ದಾರೆ. ನೀವು ಆರಾಮವಾಗಿರುವವರಿಗೆ ಎಸ್‌ಟಿಎಫ್ ಮುಖ್ಯಸ್ಥರಾಗಿ ನೇಮಿಸುವುದಾ? ಇದನ್ನು ಮಾನ್ಯ ಮಂತ್ರಿಗಳಾಗಿ ಆ ಖಾತೆಯನ್ನು ಹೊಂದಿರತಕ್ಕಂಥವರು ಇಂತಹ ಸೂಕ್ಷ್ಮವಾದ ವಿಚಾರಗಳನ್ನು ಗಮನಿಸಬೇಕಾಗಿರತಕ್ಕಂಥದ್ದು ಕರ್ತವ್ಯ ಅಲ್ಲವಾ? ಏಕೆ ಗಮನಿಸಲಿಲ್ಲ? ಒಂದೂವರೆ ತಿಂಗಳ ಕಾಲ ಆ ಎಸ್‌ಟಿಎಫ್‌ಗೆ ಮುಖ್ಯಸ್ಥರು ಇಲ್ಲವೆಂದರೆ ಅವರಿಗೆ ಹೇಳುವವರು ಯಾರು? ಕೇಳುವವರು ಯಾರು, ಯಾರು ಅವರಿಗೆ ಡೈರೆಕ್ಷನ್ ಕೊಡತಕ್ಕಂಥವರು ಆ ಸ್ಥಳದಲ್ಲಿ ಡೈರೆಕ್ಷನ್ ಕೊಡತಕ್ಕಂಥವರೇ ಒಂದೂವರೆ ತಿಂಗಳ ಕಾಲ ರಜ ಹಾಕಿದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಲ್ಲಿ ಯಾರು ಒಂದೂವರೆ ತಿಂಗಳ ಕಾಲ ರಜೆ ಹಾಕಿಲ್ಲ ಅದೇ ತಪ್ಪು ತಿಳುವಳಿಕೆ. ಹೀಗಾಗಿ ಒಂದಕ್ಕೊಂದು ಮಿಸ್ ಅಂಡರ್‌ಸ್ಟಾಂಡಿಂಗ್ ಆಗುವುದು. ಅವರು ಐಜಿಪಿ ಗುಲ್ಬರ್ಗ ಆದ ಮೇಲೆ ಪರ್ಮಿಷನ್ ತೆಗೆದುಕೊಂಡು ಒಂದೂವರೆ ತಿಂಗಳ ರಜೆ ಮೇಲೆ ಅಲ್ಲಿಂದ ಹೋಗಿದ್ದಾರೆ. ಇಲ್ಲಿ ಶ್ರೀ ಮಿರ್ಜಿಯವರು ಅವರ ಜಾಗದಲ್ಲಿ ಈಗಾಗಲೇ ಕೆಲಸ ಮಾಡುತ್ತಿದ್ದಾರೆ. ಒಂದೂವರೆ ತಿಂಗಳ ರಜ ಹಾಕಿಕೊಂಡು ರಾಜಸ್ಥಾನಕ್ಕೆ ಹೋಗಿದ್ದಾರೆ ಎಂದರೆ ಮಿರ್ಜಿಯವರು ಹೋಗಿದ್ದಾರಾ? ಮತ್ತೆ ಯಾರು ಹೋಗಿದ್ದಾರೆ?

ಶ್ರೀ ಸಿ.ಬೈರೇಗೌಡ: ಅವರಿಗಿಂತ ಮೊದಲು ನಾನು ಹೆಸರು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮತ್ತೆ ಯಾರು? ಲೀವ್ ಸ್ಯಾಂಕ್ಷನ್ ಆಗಲಿಲ್ಲ. ಲೀವ್ ಸ್ಯಾಂಕ್ಷನ್ ಆಗಿದ್ದು ಮೊನ್ನೆ ತಾನೆ.

ಶ್ರೀ ಸಿ.ಬೈರೇಗೌಡ: ನಾನು ಹೆಸರು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಿಸ್ ಅಂಡರ್‌ಸ್ಟಾಂಡಿಂಗ್ ಆಗಿದೆ ಅದನ್ನು ವೆರಿಫೈ ಮಾಡಿ ಮಾತನಾಡಿ. ಏಕೆಂದರೆ ಸುಮ್ಮನೆ ಮಿಸ್ ಅಂಡರ್‌ಸ್ಟಾಂಡಿಂಗ್ ಆಗುತ್ತದೆ.

ಶ್ರೀ ಸಿ.ಬೈರೇಗೌಡ: ಅಲ್ಲಿ ನಾಗಪ್ಪನವರ ಮೃತ ದೇಹ ಪತ್ತೆ ಆಗುತ್ತದೆ. ಅದರ ಬಗ್ಗೆ ಚರ್ಚೆಯಾಗದೆ. ಎಲ್ಲರೂ ಹೇಳಿದ್ದಾರೆ ನಾನು ಮತ್ತೆ ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿಗೆ ಪೂಜೆ ಮಾಡುವುದಕ್ಕೆ ಹೋಗುತ್ತಾರೆ. ಪೂಜೆ ಮಾಡುವುದಕ್ಕೆ ಹೋದ ಸಂದರ್ಭದಲ್ಲಿ ಅಲ್ಲಿ ಬೂದಿ ಕಾಣುತ್ತದೆ. ಅದು ಅನುಮಾನ ಇರತಕ್ಕಂಥದ್ದು ಏನೆಂದರೆ, ಯಾರನ್ನೋ ಇಬ್ಬರಿಗೆ ಅಥವಾ ಮೂರು ಜನರನ್ನು ಸುಟ್ಟಿರತಕ್ಕಂತಹ ಬೂದಿ ರಾಶಿ ಬಿದ್ದಿರುತ್ತದೆ. ಮೂಳೆಗಳನ್ನು ಸಂಗ್ರಹಣೆ ಮಾಡಿದ್ದಾರೆ. ಆ ಮೂಳೆಗಳನ್ನು ಸಂಗ್ರಹಣೆ ಮಾಡಿರತಕ್ಕಂಥದ್ದನ್ನು ನೀವು ಏನು ಮಾಡಿದ್ದೀರಿ? ಅದು ಡಿಎನ್‌ಎ ಟೆಸ್ಟ್ ಮಾಡಿ ಅದು ಮನುಷ್ಯರದಾ ಅಥವಾ ಪ್ರಾಣಿಗಳದ್ದಾ ಯಾವುದು ಎನ್ನತಕ್ಕಂಥದ್ದನ್ನು ಇವತ್ತು ಕರಾರುವಕ್ಕಾಗಿ ಹೇಳತಕ್ಕಂಥದ್ದಕ್ಕೆ ಸಾಧ್ಯ ಇದೆ. ಆ ರೀತಿಯಾಗಿ ಡಿಎನ್‌ಎ ಟೆಸ್ಟ್ ಏನಾದರೂ ಕೂಡ ಮಾಡತಕ್ಕಂಥದ್ದುಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನತಕ್ಕಂಥದ್ದನ್ನು ನೀವು ಹೇಳಬೇಕಾಗುತ್ತದೆ. ಏಕೆಂದರೆ ಪ್ರತಿ ಹೆಜ್ಜೆಯಲ್ಲೂ ಕೂಡ ಅನುಮಾನ ಇದೆ. ಹೆಜ್ಜೆ ಹೆಜ್ಜೆಗೂ ಕೂಡ ಅನುಮಾನ ತುಂಬಿ ಕಾಡುತ್ತಿದೆ. ಈ ಅನುಮಾನಗಳಿಗೆ ಉತ್ತರ ಕೊಡಬೇಕಾಗಿರತಕ್ಕಂಥದ್ದು, ಸಮುಜಾಯಿಷಿ ಕೊಡತಕ್ಕಂಥದ್ದು ವಾಸ್ತವಾಂಶ ಏನು ಎನ್ನತಕ್ಕಂಥದ್ದು, ತಿಳಿಸುವುದು ಸರ್ಕಾರದ ಕೆಲಸ, ಅಲ್ಲಿ ದೊರೆತ ಮೂಳೆಗಳನ್ನು ಡಿಎನ್‌ಎ ಟೆಸ್ಟ್‌ಗೆ ಒಳಪಡಿಸಿದ್ದೀರಾ?

5.50 ಪಿ.ಎಂ

ಒಳಪಡಿಸಿದ್ದಿದ್ದರೆ ಅಲ್ಲಿ ಏನು ಫಲಿತಾಂಶ ಬಂದಿದೆ ಅನ್ನತಕ್ಕಂಥದ್ದನ್ನು ನೀವು ತಿಳಿಸಬೇಕಾಗುತ್ತದೆ. ಸ್ವಾಮಿ ಅಲ್ಲಿ ಮೂರು ಜನ ಕಾನ್‌ಸ್ಟೇಬಲ್‌ಗಳು ನೀವಿಲ್ಲ ಎಂದು ಹೇಳಿದ್ದೀರಿ, ನಮ್ಮ ಎಸ್.ಟಿ.ಎಫ್. ನವರೆಲ್ಲರೂ ಭದ್ರವಾಗಿದ್ದಾರೆ ಎನ್ನತಕ್ಕಂಥ ಮಾತನ್ನು ತಾವು ಅಧಿಕೃತವಾಗಿ ಹೇಳಿದ್ದೀರಿ ನೀವು ಅಧಿಕೃತವಾಗಿ ಹೇಳಿರುವಂಥ ಮಾತನ್ನು ನಾವು ಅಧಿಕೃತವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿಯವರೆಗೂ ಸಹ ಅಲೆಗ್ಸಾಂಡರ್ ಎನ್ನತಕ್ಕಂಥವನು ಎಲ್ಲಿದ್ದಾನೆ ಎಂಬುದು ಗೊತ್ತಿಲ್ಲ. ನಿಮ್ಮ ಎಸ್.ಟಿ.ಎಫ್.ನವರು ಇರಬಹುದು. ಆದರೆ ಅಲೆಗ್ಸಾಂಡರ್ ವೀರಪ್ಪನ್‌ಗೆ ಮಾಹಿತಿ ಕೊಡುತ್ತಾ ಇದ್ದ ಎನ್ನತಕ್ಕಂಥದ್ದು ಇದೆ. ಗುಮಾನಿ ಇದೆ. ಅವನು ಏನಾಗಿದ್ದಾನೆ? ನಾಗಪ್ಪನವರಿಗಂತೂ ರಕ್ಷಣೆ ಕೊಡುವುದಕ್ಕೆ ಆಗಲಿಲ್ಲ, ಬೇರೆಯವರಿಗೂ ಸಹ ನಾಗಪ್ಪನವರಿಗೆ ಯಾವ ರೀತಿಯಾದಂಥ ರಕ್ಷಣೆ ಕೊಟ್ಟರೋ ಬೇರೆಯವರಿಗೂ ಕೂಡ ಅದೇ ತರಹ ರಕ್ಷಣೆ ಕೊಡುವುದಕ್ಕೆ ಹೋಗಿದ್ದೀರಿ. ನಾಗಪ್ಪನವರು ಸತ್ತಮೇಲೆ ಅಲೆಗ್ಸಾಂಡರ್ ನಾಪತ್ತೆಯಾಗಿದ್ದಾನೆ. ಸರ್ಕಾರದ ಜವಾಬ್ದಾರಿ ಕೂಡ ಇದೆ. ಆತ ಎಲ್ಲಿದ್ದಾನೆ? ಬದುಕಿದ್ದಾನೋ, ಸತ್ತಿದ್ದಾನೋ, ಬದುಕಿದ್ದರೆ ಎಲ್ಲಿದ್ದಾನೆ ಎನ್ನತಕ್ಕಂಥದ್ದಕ್ಕೂ ಕೂಡ ಉತ್ತರ ಕೊಡಬೇಕಾಗುತ್ತದೆ. ಎಂದು ಈ ಸಂದರ್ಭಧಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಮಣಿಯವರನ್ನ ಬಿಡುಗಡೆ ಮಾಡಬೇಕು ಎನ್ನತಕ್ಕಂಥದ್ದನ್ನು, ಮೊದಲನೆಯದಾಗಿ ಎಸ್.ಟಿ.ಎಫ್. ಆ್ಯಕ್ಷನ್ ನಿಲ್ಲಿಸಬೇಕು ಎಂದು ಹೇಳಿದ್ದೇವೆ. ಮತ್ತೆ ಸಂಧಾನಕಾರರು ಇಲ್ಲ. ಸಂಧಾನಕಾರರು ಇಲ್ಲದೇ

ಇರುವುದಕ್ಕೆ ಕಾರಣವೇನು? ನಿಮ್ಮ ರಾಜಕೀಯ ನಿಲುವು. ಈ ರಾಜಕೀಯ ನಿಲುವಿಗೆ ಬಲಿಯಾದವರು ಯಾರು? ನಾಗಪ್ಪನವರು. ಏಕೆ ಅಂದರೆ ತಮಿಳು ನಾಡಿನ ಮುಖ್ಯಮಂತ್ರಿಗಳು ಕಾಂಗ್ರೆಸ್‌ನ ಅಧ್ಯಕ್ಷರ ಪೂರ್ವಾಶ್ರಮದ ಬಗ್ಗೆ, ಮೂಲದ ಬಗ್ಗೆ ಅವರು ಹೇಳಿಕೆ ಕೊಡುತ್ತಾರೆ, ಅವರು ಈ ದೇಶದವರಲ್ಲ, ಇಟಲಿ ದೇಶದವರು ಎನ್ನತಕ್ಕಂಥ ಮಾತನ್ನು ಅವರು ಹೇಳ್ತಾರೆ. ನಾನು ಅದರ ಬಗ್ಗೆ ಪೂರ್ಣವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು): ಹೇಳೋದಿಲ್ಲ ಎಂದು ಹೇಳ್ತೀರಿ. ಮತ್ತೆ ಅದನ್ನೇ ಹೇಳ್ತೀರಿ.

ಶ್ರೀ ಸಿ.ಬೈರೇಗೌಡ: ಹೌದು ಸ್ವಾಮಿ, ಅವರು ಇಟಲಿ ದೇಶದವರು ಎಂದು ಪಕ್ಕದ ರಾಜ್ಯದ ಮುಖ್ಯಮಂತ್ರಿಗಳು ಹೇಳಿರತಕ್ಕಂಥದ್ದು ನಿಜ. ಅಷ್ಟಕ್ಕೆ ನಾನು ಸೀಮಿತಗೊಳಿಸುತ್ತೇನೆ. ಮುಂದಕ್ಕೆ ಹೋಗುವುದಿಲ್ಲ ಎಂದು ಹೇಳಿದ್ದೇನೆ. ಅಷ್ಟಕ್ಕೆ ಅದಕ್ಕೆ ನಮ್ಮ ಮುಖ್ಯಮಂತ್ರಿಗಳು ಉತ್ತರ ಕೊಡ್ತಾರೆ. ನಮ್ಮ ಮುಖ್ಯಮಂತ್ರಿಗಳು ಏನಂಥ ಉತ್ತರ ಕೊಟ್ಟರು. ತಮಿಳುನಾಡಿನ ಮುಖ್ಯಮಂತ್ರಿಗಳು ಕರ್ನಾಟಕದವರು ಎಂದು ಉತ್ತರ ಕೊಟ್ಟರು. ಎರಡೂ ಸತ್ಯಾನೇ. ಅವರೇಳಿದ್ದೂ ಸತ್ಯಾನೇ, ಇವರೇಳಿದ್ದೂ ಕೂಡ ಸತ್ಯಾನೇ, ಆದರೆ ಈ ಸತ್ಯದ ಮಧ್ಯದಲ್ಲಿ ಒಂದು ಅಮೂಲ್ಯವಾದಂಥ ವಸ್ತುವನ್ನು ಕಳೆದುಕೊಂಡಿದ್ದು, ಪ್ರಾಣ ಹೋಗಿದ್ದು ಯಾರದಪ್ಪಾ ಅಂದರೆ ನಾಗಪ್ಪನವರದ್ದು. ಈ ರಾಜಕೀಯದ ಜಂಜಾಟದಲ್ಲಿ ನೀವು ತಮಿಳುನಾಡಿನ ಮುಖ್ಯಮಂತ್ರಿಯ ಜೊತೆ ಮುಖಕ್ಕೆ ಮುಖಕೊಟ್ಟು ಮಾತನಾಡಿದ್ದು ಒಂದು ಸಾರಿ ಬಿಟ್ಟರೆ, ದೆಹಲಿಯಲ್ಲಿ ಒಂದು ಮಾತುಕತೆ ಮಾಡಿರುವುದನ್ನು ಬಿಟ್ಟರೆ, ಮತ್ತೆ ಗೃಹ ಸಚಿವರು ಮಾತನಾಡಿದ್ದು ಬಿಟ್ಟರೆ ಆಮೇಲೆ ಟೆಲಿಫೋನ್‌ನಲ್ಲೂ ಕೂಡ ಸಂಪರ್ಕವನ್ನು ಮಾಡಿಲ್ಲ ಸ್ವಾಮಿ. ಸರ್ಕಾರದ ಮಟ್ಟದಲ್ಲಿ ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಅಧಿಕಾರಿಗಳ ಮಟ್ಟದಲ್ಲಿ ಏನು ನಡೆಯಿತೋ ಅದು ನನಗೆ ಗೊತ್ತಿಲ್ಲ. ಆದರೆ ಸರ್ಕಾರದ ಮಟ್ಟದಲ್ಲಿ ಮಂತ್ರಿಗಳ ಮಟ್ಟದಲ್ಲಿ, ಮುಖ್ಯಮಂತ್ರಿಗಳ ಮಟ್ಟದಲ್ಲಿ ಈ ವ್ಯವಹಾರ ನಡೆಯಬೇಕಾಗಿತ್ತು. ಕಾರಣ ಏನು ಎಂದರೆ ಹಿಂದೆ ರಾಜ್‌ಕುಮಾರ್‌ರವರ ಅಪಹರಣವಾಗಿದ್ದಂಥ ಕಾಲದಲ್ಲಿ, ನಾನು ಹಿಂದೆ ಹೇಳಿದ್ದೇನೆ ಸ್ವಾಮಿ, ಒಬ್ಬ ಮುಖ್ಯಮಂತ್ರಿಗಳಾಗಿರತಕ್ಕಂಥವರು ಇಲ್ಲಿಂದ ಮಹದೇಶ್ವರ ಬೆಟ್ಟಕ್ಕೆ ಹೋಗಿ, ಮಹದೇಶ್ವರ ದೇವರ ಪ್ರಸಾದ, ವರ ತೆಗೆದುಕೊಂಡು ಆ ವರವನ್ನು ಹೊತ್ತು ಕೊಂಡು ಒಂದು ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್‌ರವರಿಗೆ ಕೊಡಲು ಅವರ ಮನೆಗೆ ಹೋಗುತ್ತಾರೆ. ಮಹದೇಶ್ವರ ವರನ ಹೊತ್ತುಕೊಂಡು ಬಂದು ಶ್ರೀಮತಿ ರಾಜ್‌ಕುಮಾರ್‌ರವರಿಗೆ ನೀಡುವುದಕ್ಕೋಸ್ಕರ, ದಯಪಾಲಿಸುವುದಕ್ಕೋಸ್ಕರ ಇವರೇ ಹೋಗ್ತಾರೆ ಸ್ವಾಮಿ. ಅಲ್ಲಿಗೆ ಹೋಗಿದ್ರು ಎಂದು ಮಾತ್ರ ಹೇಳ್ತಾ ಇದ್ದೇನೆ, ಮುಂದಕ್ಕೆ ಹೇಳ್ತಾ ಇಲ್ಲ. ಆದರೆ ಈ ವಿಚಾರದಲ್ಲಿ ಮಾತ್ರ ಬಾಯಿ ಮಾತನಾಡುವುದಕ್ಕೂ ತಯಾರಿಲ್ಲವಲ್ಲಾ. ಎಷ್ಟು ಸಾರಿ ಹೋಗಿದ್ದಿರಿ, ಕರುಣಾನಿಧಿಯವರನ್ನು ಎಷ್ಟು ಸಾರಿ ಭೇಟಿಯಾಗಿರಲಿಲ್ಲ, ಅವರೂ ಕೂಡ ಬೆಂಗಳೂರಿಗೆ ಬಂದಿರಲಿಲ್ಲವೆ? ಒಂದು ಸಭೆಯಲ್ಲಿ ನಾನೇ ಹೇಳಿದ್ದೆ, ಈ ವಿಚಾರವನ್ನು ಪ್ರಸ್ತಾಪ ಮಾಡಿದೆ. ಡಾ.ರಾಜ್‌ಕುಮಾರ್ ರವರ ಅಪಹರಣ ಸಮಯದಲ್ಲಿ ಪ್ರತಿ ಸಾರಿಯೂ ನೀವೇ ತಮಿಳುನಾಡಿಗೆ, ಮದ್ರಾಸ್‌ಗೆ

ಹೋಗ್ತಾ ಇದ್ದೀರಿ, ತಮಿಳುನಾಡಿನ ಮುಖ್ಯಮಂತ್ರಿಗೂ ಒಂದು ಸಾರಿ ನಮ್ಮ ರಾಜ್ಯಕ್ಕೂ ಬರುವುದಕ್ಕೆ ನೀವು ಹೇಳಿ, ಇನ್ನು ಮುಂದೆ ನೀವು ಹೋಗಕೂಡದು ಅನ್ನತಕ್ಕಂಥ ಒತ್ತಾಯವನ್ನು ನಾನೂ ಸಹ ಸರ್ವ ಪಕ್ಷಗಳ ಸಭೆಯಲ್ಲಿ ಒತ್ತಾಯ ಮಾಡಿದ್ದೆ. ಕಾರಣ ಏನೆಂದರೆ ಮುಖ್ಯಮಂತ್ರಿಗಳು ಕೇವಲ ಒಬ್ಬ ವ್ಯಕ್ತಿ ಅಲ್ಲ, ರಾಜ್ಯದ ಮುಖ್ಯಸ್ಥರು, ಅದಕ್ಕೇ ಆದಂಥ ವಿಶೇಷ ಸ್ಥಾನಮಾನಗಳೆಲ್ಲವೂ ಇರುತ್ತದೆ. ಎಂದು ಏಕೆಂದರೆ ಅವೊತ್ತು ರಾಜ್‌ಕುಮಾರ್‌ರವರು ಅಪಹರಣವಾಗಿರತಕ್ಕಂಥದ್ದು ಕರ್ನಾಟಕದಲ್ಲಲ್ಲ. ತಮಿಳುನಾಡಿನ ಎಲ್ಲೆಯಲ್ಲಿಯೇ ರಾಜ್‌ಕುಮಾರ್‌ರವರ ಅಪಹರಣವಾಗಿರತಕ್ಕಂಥದ್ದು, ಜವಾಬ್ದಾರಿ ಹೊರಬೇಕಾದವರು ಅವರು. ಆ ಕಾರಣದಿಂದ ರಾಜ್‌ಕುಮಾರ್‌ರವರು ನಮ್ಮ ರಾಜ್ಯದವರು, ಆದರೆ ಅಪಹರಣ ಆಗಿರತಕ್ಕಂಥದ್ದು ಅಲ್ಲಿ. ನಮ್ಮ ಜವಾಬ್ದಾರಿಗಿಂತ ಹೆಚ್ಚಿನ ಜವಾಬ್ದಾರಿ ಅವರದ್ದಿದೆ. ಆದ್ದರಿಂದ ಆ ಮುಖ್ಯಮಂತ್ರಿ ನಮ್ಮ ರಾಜ್ಯಕ್ಕೆ ಬರಬೇಕು ಎಂದು ನಾನು ಒತ್ತಾಯ ಮಾಡಿದ್ದೆ. ಆಮೇಲೆ ಅವರೂ ಸಹ ಒಂದು ಸಾರಿ ಬಂದಿದ್ದರು. ಅನೇಕ ಸಾರಿ ನೀವು ಕೂಡ ಹೋಗಿದ್ದೀರಿ, ಅವರೂ ಸಹ ಬಂದುಹೋಗಿದ್ದಾರೆ. ಈ ವಿಚಾರದಲ್ಲಿ ಏಕೆ ಸ್ವಾಮಿ ಆ ರೀತಿ ಮಾಡಲಿಲ್ಲ ಏನು ಕಾರಣ ಇದೆ? ಇದಕ್ಕೇನೋ ನಿಗೋಢವಾದಂಥ ಕಾರಣವಿದೆ. ಆ ನಿಗೂಢವಾಂದಂಥ ಕಾರಣವೇನು? ಇಷ್ಟೊಂದು ಅಸಡ್ಡೆ ಮತ್ತು ಈ ಅಸಡ್ಡೆಯ ಪರಮಾವಧಿಯನ್ನು ನೀವು ತೋರಿಸಬೇಕಾಗಿದ್ದರೆ ಇದಕ್ಕೇನೋ ನಿಗೂಢವಾದಂಥ ಕಾರಣವಿದೆ. ಆ ನಿಗೂಢವಾದಂಥ ಕಾರಣ ಏನು ಅನ್ನತಕ್ಕಂಥದ್ದನ್ನು ನೀವು ತಿಳಿಸಬೇಕಾಗುತ್ತದೆ. ಸ್ವಾಮಿ ಪತ್ರಿಕೆಯವರು ನಮ್ಮ ಮುಖ್ಯಮಂತ್ರಿಯವರನ್ನು ಕೇಳ್ತಾರೆ ಒಂದು ಸಾರಿ ಏನಂತ? "ರಾಜ್‌ಕುಮಾರ್‌ರವರು ಅಪಹರಣವಾದಾಗ ತೆಗೆದುಕೊಂಡಂಥ ಎಲ್ಲಾ ಕ್ರಮಗಳನ್ನು ನೀವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ, ಆದರೆ ಸರ್ಕಾರದ ಮಟ್ಟದಲ್ಲಿ ಏನೂ ನಡೀತಾ ಇಲ್ವಲ್ಲ ಎಂದು ಕೇಳಿದಾಗ ಮುಖ್ಯಮಂತ್ರಿಗಳು ಏನಪ್ಪಣೆ ಕೊಡಿಸ್ತಾರೆ, ಇಲ್ಲ, ಇಲ್ಲ, ಆ ಸಂದರ್ಭ ಬೇರೆ, ಈ ಸಂದರ್ಭ ಬೇರೆ" ಆ ಸಂದರ್ಭ ಬೇರೆ, ಈ ಸಂದರ್ಭ ಬೇರೆ ಯಾವ ರೀತಿ ಬೇರೆ ಎನ್ನತಕ್ಕಂಥದ್ದನ್ನು ಹೇಳಬೇಕು. ಇವೊತ್ತೂ ಪತ್ರಿಕೆಯಲ್ಲಿ ಇದೆ ಸ್ವಾಮಿ. ಹೇಳಿ, ಸಂದರ್ಭ ಯಾವ ರೀತಿ ಬೇರೆ ಎನ್ನತಕ್ಕಂಥದ್ದನ್ನು ರಾಜ್ಯನ ಜನತೆ ಮತ್ತು ನಾವು ಕೂಡ ತಿಳಿದುಕೊಳ್ಳಬೇಕು, ಮುಖ್ಯವಾಗಿ ನಾಗಪ್ಪನವರ ಕುಟುಂಬದವರೂ ಕೂಡ ತಿಳಿದುಕೊಳ್ಳಬೇಕು. ಅಂದರೆ ನಿಮ್ಮ ಲೆಕ್ಕದಲ್ಲಿ ಒಬ್ಬರ ಪ್ರಾಣ ಬಹಳ ಅಮೂಲ್ಯವಾದದ್ದು ನಾಗಪ್ಪನವರ ಜೀವ ಅಂತಂದ್ರೆ ಅಮೂಲ್ಯ ಅಲ್ಲ, ಕಿಮ್ಮತ್ತೇ ಇಲ್ಲ, ಅದಕ್ಕೆ ಬೆಲೆಯೇ ಇಲ್ಲ. ಸ್ವಾಮಿ ಇಲ್ಲಿಯೇ ನೀವು ಮನುಷ್ಯತ್ವವನ್ನು ಮೆರೆಯಬೇಕಾಗಿತ್ತು. ಮಸುಷ್ಯತ್ವ ನಿಮಗೆ ಇದೆ ಎನ್ನತಕ್ಕಂಥದ್ದನ್ನು ತೋರಿಸಿಕೊಡಬೇಕಾಗಿತ್ತು. ನೀವು, ರಾಜ್‌ಕುಮಾರ್‌ರವರ ಪ್ರಾಣವಾಗಲಿ, ನಾಗಪ್ಪನವರ ಜೀವವಾಗಲಿ, ರಸ್ತೆಯಲ್ಲಿ ಹೋಗತಕ್ಕಂಥ ಒಬ್ಬ ಸಾಮಾನ್ಯ ಪ್ರಜೆಯಾಗಲಿ, ಎಲ್ಲರ ಜೀವವೂ ಕೂಡ ಅಷ್ಟೇ ಅಮೂಲ್ಯ ಎಂಬುದನ್ನು ತೋರಿಸಬೇಕಾಗಿತ್ತು ಒಬ್ಬರದ್ದು ಅಮೂಲ್ಯ ಇನ್ನೊಬ್ಬರದ್ದು ಅಷ್ಟು ಬೆಲೆ ಇಲ್ಲ, ಅದಕ್ಕೆ ಮತ್ತೊಬ್ಬದ್ದಾದರೂ ಹೋದದ್ದು ಹೋಗಲಿ ಎಂದು ಹೇಳಿ ಅಲೆಗ್ಸಾಂಡರ್‌ನ್ನು ಈಗ ಬಿಟ್ಟಿದ್ದೀರಲ್ಲಾ. ಅವರನ್ನು ವಿಚಾರಿಸುವವರೇ ಇಲ್ಲ. ಅವನು ಎಲ್ಲಿಗೆ ಹೋದ, ಬದುಕಿದ್ದಾನಾ, ಸತ್ತಿದ್ದಾನಾ, ಅಂಥ ಮನುಷ್ಯ ಇದ್ದಾನಾ ಎನ್ನತಕ್ಕಂಥಾದ್ದರೂ ಹೊರಗಡೆ

ಬರ್ತಾ ಇಲ್ಲ. ಅಲೆಗ್ಸಾಂಡರ್ ನಾಪತ್ತೆ. ವಿಚಾರವನ್ನೇ ಯಾರೂ ಕೂಡ ಮಾತನಾಡುವುದಕ್ಕೆ ತಯಾರಿಲ್ಲ. ನೀವು ಮನುಷ್ಯತ್ವ ಎನ್ನುವುದು ನಮಗಿದೆ ಎನ್ನತಕ್ಕಂಥದ್ದನ್ನು ಎತ್ತಿ ತೋರಿಸಬೇಕಾಗಿತ್ತು. ಅದನ್ನು ಮರೆತು ತಾವು ತಮ್ಮ ಮೃಗೀಯ ವರ್ತನೆಯನ್ನು ತಾವು ತೋರಿಸಿದ್ದೀರಿ ಮೃಗೀಯ ವರ್ತನೆಯನ್ನು ಈ ವಿಚಾರದಲ್ಲಿ ತೋರಿಸಿದ್ದೀರಿ. ಒಬ್ಬರ ಜೀವಕ್ಕೆ ಬೆಲೆ ಕಟ್ಟತಕ್ಕಂಥ, ಈ ಮೃಗೀಯ ವರ್ತನೆಯನ್ನು ಸರ್ಕಾರ ತೋರಿಸಿರ ತಕ್ಕಂಥದ್ದನ್ನು ನಾವು ಹೇಳಬೇಕಾಗಿದೆ. ಕೊಳತ್ತೂರು ಮಣಿಯನ್ನು ಬಿಡಿಸಬೇಕೆಂದು ನಾವು, ಅವೊತ್ತು ಹೇಳಿದ್ದೇವೆ. ನಂತರವೂ ಕೂಡ ಹೇಳಿದ್ದೇವೆ, ಇಲ್ಲ ಬಿಡಿ ಎಲ್ಲಾ ಪ್ರಯತ್ನ ಗಳನ್ನು ಮಾಡುತ್ತಾ ಇದ್ದೇವೆ ಎಂದು ಹೇಳಿದಿರಿ ನಾವೆಲ್ಲಾ ವೈಯಕ್ತಿಕವಾಗಿಯೂ ಕೂಡ ಬಂದು ತಮ್ಮನ್ನು ಭೇಟಿಯಾಗಿದ್ದೆವು ಭೇಟಿಯಾಗಿದ್ದಂಥ ಕಾಲದಲ್ಲಿ ಇಲ್ಲಾ ಏನೋ ಮಾಡ್ತಾ ಇದ್ದೇವೆ, ಏನೋ ಮಡ್ತಾ ಇದ್ದೇವೆ, ಮಾಡ್ತಾ ಇದ್ದೇವೆ ಎಂದು ಹೇಳಿದಿರೇ ವಿನಃ ಕೊನೇಗೇ ಇನ್ನೇನು ಗತ್ಯಂತರವಿಲ್ಲ ಎನ್ನುವಂಥ ಪರಿಸ್ಥಿತಿಯಲ್ಲಿ ತಾವು ಅವರನ್ನು ಬಿಡತಕ್ಕಂಥದ್ದಕ್ಕೆ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿಸಿದಿರಿ. ಆ ತೀರ್ಮಾನ ಮೊದಲೇ ಮಾಡುವುದಕ್ಕೆ ಏನು ಸ್ವಾಮಿ ತೊಂದರೆ ಇದ್ದದ್ದು? ತೊಂದರೆ ಏನಿತ್ತು? ನಾವೇನಾದರೂ ಈ ದೇಶದಲ್ಲಿ ನಡೆಯದೇ ಇರತಕ್ಕಂಥದ್ದನ್ನು, ಆಗದೇ ಇರತಕ್ಕಂಥದ್ದನ್ನು ನಾವು ಕೇಳಿದ್ದಿದ್ದರೆ, ನಾವು ಒತ್ತಾಯ ಮಾಡಿದ್ದಿದ್ದರೆ ನೀವು ಮಾಡುವುದಕ್ಕಾಗುವುದಿಲ್ಲ ವೆಂದು ಹೇಳಬಹುದು ನಮ್ಮ ಸ್ನೇಹಿತರಾದಂಥ ಜಯಪ್ರಕಾಶ್ ಹೆಗಡೆಯವರು ಹೇಳಿದರು ಸ್ವಾಮಿ. ಜಾರ್ಜ್ ಫರ್ನಾಂಡೀಸ್‌ರವರ ಮೇಲೆ ಇದೇ ಆ್ಯಕ್ಟ್ ಪ್ರಾಕಾರ ಕೇಸ್ ಇದ್ದಿದ್ದು. ಇದೇ ಎಕ್ಸ್‌ಪ್ಲೂಸಿವ್ಸ್ ಆ್ಯಕ್ಟ್, ಆರ್ಮ್ಸ್ ಆ್ಯಕ್ಟ್ ಪ್ರಕಾರ ಇಲ್ಲದೇ ಇರಬಹುದು, ಎಕ್ಸ್‌ಪ್ಲೋಸಿವ್ಸ್ ಆ್ಯಕ್ಟ್ ಪ್ರಕಾರವೇ ಇಲ್ಲಿ ಕರ್ನಾಟಕದಲ್ಲಿಯೇ ರೈಲನ್ನು ಸಿಡಿಸತಕ್ಕಂಥ, ರೈಲು ಕಂಬಿಯನ್ನು ಸಿಡಿಸತಕ್ಕಂಥ ಕೆಲಸ ಮಾಡಿದರು ಎನ್ನತಕ್ಕಂಥದ್ದು, ಅದು ಅವರ ಮೇಲೆ ಇದ್ದಂಥದ್ದು, ಮೊಕದ್ದಮೆ ಇರತಕ್ಕಂಥದ್ದು. ಅಲ್ಲಿ ಕೇಸ್ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ತೆಗೆದುಕೊಂಡಿರತಕ್ಕಂಥದ್ದು ನಿದರ್ಶನ ಇದೆ. ಇವೊತ್ತು ನಿಮ್ಮ ರಾಜಕೀಯ ಕಾರಣಗಳಿಗೋಸ್ಕರ ಕೊಳತ್ತೂರು ಮಣಿಯನ್ನು ಬಿಟ್ಟರೆ ಬೇರೆ ಇನ್ನೊಬ್ಬ ಸಂಧಾನಕಾರರು ಇಲ್ಲ. ಆ ಕಾರಣದಿಂದಲೇ ನಾವು ಮಣಿಯನ್ನು ಬಿಡಬೇಕು ಎಂದು ಒತ್ತಾಯ ಮಾಡಿದ್ದು. ಅವನ ಮೇಲಿನ ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕು ಎನ್ನುವಂತಹ ಒತ್ತಾಯವನ್ನು ಮಾಡಿದ್ದು. ಆದರೆ ನಮಗೆ ಸಬೂಬು ಹೇಳಿದಿರೆ ವಿನಃ ನಿರ್ದಿಷ್ಟವಾದ ಕ್ರಮವನ್ನು ನೀವು ತೆಗೆದುಕೊಳ್ಳಲಿಲ್ಲ. ನೀವು ನಿರ್ದಿಷ್ಟವಾದ ಕ್ರಮವನ್ನು ಪ್ರಾರಂಭದಲ್ಲಿ ತೆಗೆದುಕೊಂಡಿದ್ದರೆ, ಇವತ್ತು ನಾಗಪ್ಪನವರು ನಮ್ಮ ಕಣ್ಮುಂದೆ ಬದುಕಿ ಉಳಿಯುತ್ತಿದ್ದರು. ಈ ದೇಶದಲ್ಲಿ ನಡೆಯದೇ ಇರತಕ್ಕಂಥ ಕೆಲಸವನ್ನು ಮಾಡಿ ಎಂದು ನಾವು ಹೇಳಲಿಲ್ಲ. ಕಾಶ್ಮೀರದಲ್ಲಿ ಏನು ಪರಿಸ್ಥಿತಿಯಾಗಿದೆ ಎನ್ನುವುದನ್ನು ಅನೇಕ ಸಾರಿ ಎಲ್ಲರೂ ಕೂಡ ಹೇಳಿದ್ದಾರೆ, ಅದನ್ನು ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಯಾರ್ಯಾರನ್ನೋ ಬಿಟ್ಟಿದ್ದಾರೆ. ಇಂಡಿಯನ್ ಏರಲೈನ್ಸ್ ವಿಮಾನ ಅಪಹರಣ ಕಂದಾಹಾರ್‌ನಲ್ಲಿ ಆದಂತಹ ಘಟನೆಗಳ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆ ತರಹದ ಉದಾಹರಣೆ ಇಲ್ಲದೆ ಇದ್ದಿದ್ದರೆ ನಾವು ಆ ಒತ್ತಾಯವನ್ನು ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಆದರೆ ನೀವು, ಆಗಲೆ ನಾನು ಹೇಳಿದ ಹಾಗೆ ಒಂದೊಂದು

ಜೀವಕ್ಕೆ ಒಂದೊಂದು ಬೆಲೆಯನ್ನು ಕೊಟ್ಟಿದ್ದರಿಂದ ಆ ನಿರ್ಧಾರವನ್ನು ಬೇಗನೆ ಮಾಡುವುದಕ್ಕೆ ಆಗಲಿಲ್ಲ. ಹಾಗೂ ಅದಕ್ಕೆ ಜಾಮೀನು ಮೇಲೆ ಬಿಡುವುದಕ್ಕೆ ಹೋದಿರಿ. ಸ್ವಾಮಿ ಕೊಳ್ಳೇಗಾಲ ಕೋರ್ಟ್‌ನಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ಕೊಳತ್ತೂರು ಮಣಿಯ ಜಾಮೀನು ಅರ್ಜಿ ಹೋಗುತ್ತದೆ. ಆದರೆ ಅವರು ಎಕ್ಸ್‌ಪ್ಲೋಸೀವ್ ಆ್ಯಕ್ಟ್ ನನಗೆ ಬರುವುದಿಲ್ಲ, ಇದು ಸೆಷನ್ಸ್ ಕೋರ್ಟ್‌ಗೆ ಬರುತ್ತದೆ, ನನ್ನ ಮುಂದೆ ಏಕೆ ತರುತ್ತೀರಿ ಎಂದರು. ನಿಮಗೆ ಅಷ್ಟು ಸಾಮಾನ್ಯ ಕಾನೂನಿನ ಜ್ಞಾನ ನಿಮ್ಮ ಸರ್ಕಾರಿ ವಕೀಲರಿಗೆ ಇಲ್ಲವೆ? ಹಾಗೂ ನೀವು ಹೇಳಬಹುದು, ಅದು ಕೊಳತ್ತೂರು ಮಣಿ ಹಾಕಿರತಕ್ಕಂಥ ಅರ್ಜಿ, ಆ ಅರ್ಜಿಗೂ ನಮಗೂ ಸಂಬಂಧ ಇಲ್ಲ ಎಂದು. ಆದರೆ ನೀವು ನಮಗೆ ಏನು ಭರವಸೆ ಕೊಟ್ಟಿದ್ದಿರಿ? ಜಾಮೀನು ಮೇಲೆ ಬಿಡಿಸಬೇಕಾಗಿದ್ದರೆ ನಾವು ಏನೇನು ಕ್ರಮ ತೆಗೆದುಕೊಳ್ಳಬೇಕೋ ಆ ಎಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ನಮಗೆ ಕೊಟ್ಟಿದ್ದೀರಿ. ಅಲ್ಲಿ ಹೋಗಿ ಯಾವ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಬೇಕು, ಆ ಅರ್ಜಿಯಲ್ಲಿ ಏನು ಇರಬೇಕು ಎನ್ನುವ ಒಂದು basic requirements ಅಲ್ಲಿ ಇಲ್ಲದೆ ಇದ್ದರೆ ಎಷ್ಟರಮಟ್ಟಿಗೆ ನೀವು ಇದರಲ್ಲಿ ಶ್ರದ್ಧೆ ವಹಿಸಿದ್ದೀರಿ ಎನ್ನುವುದು ಗೊತ್ತಾಗುತ್ತದೆ. ಆ ಅರ್ಜಿ ಅಲ್ಲಿ ವಜಾ ಆಗುತ್ತದೆ, ನಂತರ ಅದು ಸೆಷನ್ಸ್ ಕೋರ್ಟಿಗೆ ಹೋಗುತ್ತದೆ. ಮುಂದೆ ಅದು ಬೇರೆ ಕಥೆಯಾಗುತ್ತದೆ. ಆದರೆ ಇಲ್ಲಿ ಏನು ತೋರಿಸುತ್ತದೆ? ಏಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ನಿಮಗೆ ಈ ಮೊಕದ್ದಮ್ಮೆಯಲ್ಲಿ, ಈ ವಿಚಾರದಲ್ಲಿ ಶ್ರದ್ಧೆ ಇರಲಿಲ್ಲ; ಮುತುವರ್ಜಿ ಇರಲಿಲ್ಲ, ಏನೋ ಕಾಟಾಚಾರಕ್ಕೆ ನಾವೆಲ್ಲರೂ ಬಂದಾಗ, ಇವರನ್ನು ಒಳ್ಳೆಯ ಮಾತನಾಡಿ ವಾಪಸ್ಸು ಕಳುಹಿಸಬೇಕು ಎನ್ನುವ ದೃಷ್ಟಿಯಿಂದ ವ್ಯವಹಾರ ನಡೆಸಿದರೇ ವಿನಃ ನಿಜವಾಗಿ ನಾಗಪ್ಪನವರನ್ನು ಜೀವಸಹಿತ ಕರೆದುಕೊಂಡು ಬರಬೇಕು, ಅವರನ್ನು ಉಳಿಸಬೇಕು ಎನ್ನುವಂತಹ ಪ್ರಯತ್ನವನ್ನು ಮಾಡಲಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ ಈ ಸಂಧಾನಕಾರರನ್ನು ಕಳುಹಿಸುವುದರ ಬಗ್ಗೆ ಕೂಡ. ನಾನು ಈ ಸದನದಲ್ಲಿ ಈ ವಿಚಾರವನ್ನು ಮೊದಲಿನಿಂದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಇದನ್ನು ತೀವ್ರವಾಗಿ ಗಮನಿಸಬೇಕು. ಅದೇನೆಂದರೆ ಇವತ್ತು ಅನೇಕ ಅಪಹರಣಗಳು ಏಕೆ ನಡೆಯುತ್ತವೆ ಎಂದರೆ, ಇಲ್ಲಿ ನಾಗಪ್ಪನವರ ಅಪಹರಣ ಮಾತ್ರ ಆಗಲಿಲ್ಲ. ಮುಂಬಯಿ ಮತ್ತು ಡೆಲ್ಲಿಯಂತ ಸ್ಥಳಗಳಲ್ಲಿ ದೊಡ್ಡ ದೊಡ್ಡ ವ್ಯಾಪಾರಸ್ಥರನ್ನು ಅಪಹರಣ ಮಾಡಿರುವಂತಹ ಉದಾಹರಣೆಗಳು ಇದೆ. ಅವರಿಂದ ಹಣ ಕೀಳುವಂತಹ ಉದಾಹರಣೆಗಳೂ ಕೂಡ ಇದೆ. ಈ ಬೆಂಗಳೂರಿನಲ್ಲಿ ಕೂಡ ಆ ತರಹದ ಅಪಹರಣವಾಗಿರುವಂತಹ ಉದಾಹರಣೆಗಳು ಇದೆ. ಏತಕ್ಕೋಸ್ಕರ ಎಂದರೆ ಹಣ ಕೀಳುವುದಕ್ಕೋಸ್ಕರ ಅಪಹರಣ ಮಾಡುತ್ತಾರೆ. ನಾಗಪ್ಪ ಮತ್ತು ರಾಜ್‌ಕುಮಾರ್ ಅವರನ್ನು ಅಪಹರಣ ಮಾಡುವುದಕ್ಕಿಂತ ಮೊದಲೇ ಸಂಪಂಗಿ ರಾಮಯ್ಯನವರ ಮಗನನ್ನು ಅಪಹರಣವಾಗಿದ್ದು ಹಣ ಕೀಳುವುದಕ್ಕೋಸ್ಕರ. ಆ ಕಾಲದಲ್ಲಿ ಯಾರು ಬಿಡಿಸಿದರು ಎಂಬುದು ನನಗೆ ಗೊತ್ತಿಲ್ಲ. ಎಲ್ಲಾದಕ್ಕೂ ಕೂಡ ರಾಜೂಗೌಡರ ಹೆಸರು ಬಿಟ್ಟಿ ಸಿಗುತ್ತದೆಂದು ನಾನು ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅಂತೂ ಅವತ್ತು ಹಣ ಕೊಟ್ಟು ಬಿಡಿಸಿಕೊಂಡು ಬಂದಿರುವುದು ಉಂಟು. ಡಾ:ರಾಜ್‌ಕುಮಾರ್ ಅವರ ಅಪಹರಣದಲ್ಲಿ ಕೂಡ ನೀವು

ಯಾರನ್ನೇ ಕೇಳಿ, ಎಳೆ ಮಗುವನ್ನೇ ಕೇಳಿ ಏನು ಹೇಳುತ್ತಾರೆ? ಅವರನ್ನು ಯಾವರೀತಿ, ಯಾವ ಆಧಾರದ ಮೇಲೆ ಬಿಟ್ಟರು ಎಂದರೆ ಹಣ ಕೊಟ್ಟುಬಿಡಿಸಿಕೊಂಡು ಬಂದಿರುವುದು ಎಂದು ಹೇಳುತ್ತಾರೆ. ಇವತ್ತು ಯಾರೂ ಕೂಡ, ಅವನು ಹೆಗೆ ಬಿಟ್ಟು ಬಿಟ್ಟ ಒಳ್ಳೆಯ ಬುದ್ದಿ ಬಂದು ಬಿಟ್ಟುಬಿಟ್ಟ ಎಂದು ಏನಾದರೂ ಹೇಳಿದರೆ ನಂಬುವುದಿಲ್ಲ, ಜನ ನಗುತ್ತಾರೆ. ಈ ದಂಧೆ ಇವತ್ತಿನ ದಿವಸ ಈ ದೇಶದಲ್ಲಿ ನಡೆಯುತ್ತಿದೆ. ಮತ್ತು ಹೊರದೇಶದಲ್ಲಿ ಕೂಡ ಈ ದಂಧೆ ನಡೆಯುತ್ತಿದೆ. ಅದಕ್ಕೋಸ್ಕರ ಯಾರಾದಾದರೂ ಅಪಹರಣವಾದರೆ ಅಪಹರಣಕಾರರ ಜೊತೆ ಸಂಧಾನದ ಮಾತುಕತೆ ಇಲ್ಲ ಎಂದು ಬೇರೆ ದೇಶಗಳಲ್ಲಿ ಸ್ಪಷ್ಟವಾದಂತಹ ನಿಲುವನ್ನು ತೆಗೆದುಕೊಂಡಿದ್ದಾರೆ. ಇವತ್ತು ರಾಜ್ಯಸರ್ಕಾರ ಕೇಂದ್ರ ಸರ್ಕಾರಕ್ಕೆ ಬರೆಯಾಬೇಕಾಗುತ್ತದೆ. ಈ ರೀತಿಯಾದಂತಹ ನಿರ್ಧಾರಕ್ಕೆ ತಾವು ಬರಬೇಕು. ಅಪಹರಣಕಾರರ ಜೊತೆ ಸಂಧಾನ ಇಲ್ಲ; ಮಾತುಕತೆ ಇಲ್ಲ ಎನ್ನುವಂತೆ ಇನ್ನು ಮೇಲಾದರೂ ಕೂಡ ನಾವು ಮಾನ್ಯ ನಾಗಪ್ಪನವರಿಗೆ ಏನಾದರೂ ನಿಜವಾದಂಥ ಶ್ರದ್ಧಾಂಜಲಿ ಅರ್ಪಿಸತಕ್ಕಂಥಾದ್ದು ಏನಾದರೂ ಇದ್ದರೆ ಇನ್ನು ಮುಂದೆ ನಾಗಪ್ಪನವರಂಥವರು ಆಗಬಾರದು. ಆಗ ನಾವು ನಿಜವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸಿದ ಹಾಗೆ ಆಗುತ್ತದೆ. ಆದರ ವಿಚಾರವಾಗಿ ರಾಷ್ಟ್ರ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಪಹರಣಕಾರರ ಜೊತೆ ಸಂಧಾನ ಮಾಡುವುದಿಲ್ಲ. ಏನಿದ್ದರೂ ಕೂಡ ಬಲಪ್ರಯೋಗ ಮಾಡುತ್ತೇವೆ. ಬಲಪ್ರಯೋಗದಿಂದ ಬಿಡಿಸುವುದಕ್ಕೆ ಸಾಧ್ಯವಾದರೆ ನಾವು ಬಿಡಿಸುತ್ತೇವೆ. ಈ ಹಣ ಕೊಟ್ಟು ಸಂಧಾನ ಮಾಡಿಕೊಂಡು ಬಿಡಿಸುವಂತಹ ವಿಚಾರ ಮಾಡುವುದಿಲ್ಲ ಎನ್ನುವಂತಹ ಒಂದು ನೀತಿಯನ್ನು ಈ ರಾಷ್ಟ್ರದಲ್ಲಿ ರೂಪಿಸಬೇಕಾಗುತ್ತದೆ. ಅಂತಹ ಒಂದು ನೀತಿಯನ್ನು ಇವತ್ತು ಇಸ್ರೇಲ್ ದೇಶದಲ್ಲಿ ಆ ನೀತಿ ಅನುಸರಿಸುತ್ತಿದ್ದಾರೆ. ಮೊನ್ನೆ ಮಾಸ್ಕೋದಲ್ಲಿ ಥಿಯೇಟರ್‌ನಲ್ಲಿ ಇರುವವರನ್ನು ಏನು ಮಾಡಿದರು? ಹೋದರು ಬಂದೋಕು ತೋರಿಸಿದರು, ಕೆಲವರು ಓಡಿ ಹೋದರು, ಕೆಲವರು ಸತ್ತರು, ಉಳಿದಂತಹವರನ್ನು ಬಿಡಿಸುವುದಕ್ಕೆ ಸಾಧ್ಯವಾಯಿತು. ಮಾನ್ಯ ನಾಗಪ್ಪನವರ ಬಗ್ಗೆ ಎಷ್ಟೇ ಹೇಳಿದರೂ ಕೂಡ ವಾಪಸ್ಸು ಬರುವುದಿಲ್ಲಿ. ಇನ್ನು ಮುಂದೆಯಾದರೂ ಕೂಡ ಈ ದೇಶದಲ್ಲಿ ಅಪಹರಣ ಆದಂತಹವರಿಗೆ ನಾವು ಉಳಿಯುವುದಿಲ್ಲ ಎನ್ನುವಂತಹ ಒಂದು ಪರಿಪಾಠ ಹಾಕಬೇಕಾಗಿರತಕ್ಕಂಥಾದ್ದು ಅವಶ್ಯಕತೆ ಇದೆ. ಆ ವಿಚಾರದಲ್ಲಿ ನೀವು ಕೇಂದ್ರ ಸರ್ಕಾರಕ್ಕೆ ಬರೆಯಬೇಕು. ಮತ್ತು ಈ ಸದನದಲ್ಲಿ ಕೂಡ ಅದರ ಬಗ್ಗೆ ಒಂದು ತೀರ್ಮಾನ ಆಗಬೇಕಾಗಿರಕ್ಕಂಥ ಅವಶ್ಯಕತೆ ಇದ್ದರೆ, ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡತಕ್ಕಂಥ ಒಂದು ಅವಶ್ಯಕತೆ ಇದ್ದರೆ ಒಂದು ನಿರ್ಣಯವನ್ನಾದರೂ ಸರ್ಕಾರ ತರಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ನಾನು ಮೊದಲಿನಿಂದಲೂ ಕೂಡ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತು ಸರ್ಕಾರ ಬಹಳ ನಿರ್ಲಕ್ಷ್ಯದಿಂದ ನಡೆದುಕೊಂಡಿದೆ ಎನ್ನುವ ಅನೇಕ ಉದಾಹರಣೆಯನ್ನು ನನ್ನ ಸ್ನೇಹಿತರು ಕೊಟ್ಟಿದ್ದಾರೆ. ನಾನು ಕೊಟ್ಟಿದ್ದೇನೆ. ಸರ್ಕಾರಿ ನೌಕರರಾಗಿರುವವರಿಗೆ ಸಾಮಾನ್ಯವಾಗಿ ಆರ್ಟಿಕಲ್ಸ್ ಆಫ್ ಚಾರ್ಜಸ್ ಎಂದು ಕರೆಯುತ್ತಾರೆ. ಅದರಲ್ಲಿ ಸಾಮಾನ್ಯವಾಗಿ ಇರುವುದು ಏನೆಂದರೆ ನೀವು ಕರ್ತವ್ಯ ಭ್ರಷ್ಟವಾಗಿದ್ದೀರಿ, ಆ ಕೆಲಸ ಮಾಡಿಲ್ಲ ಎಂದು ಡಿರಿಲಿಕ್ಷನ್ ಆಫ್ ಡ್ಯೂಟಿ ಎಂದು ಹೇಳುತ್ತಾರೆ. ಮಾನ್ಯ ನಾಗಪ್ಪನವರ

ವಿಚಾರದಲ್ಲಿ ಸರ್ಕಾರದ ಡಿರಿಲಿಕ್ಷನ್ ಆಫ್ ಡ್ಯೂಟೀಸ್ ಯಾವ ಯಾವ ಸಂದರ್ಭದಲ್ಲಿ ಏನು ಕೆಲಸ ಮಾಡಬೇಕಾಗಿತ್ತು, ಅದನ್ನು ಮಾಡಲಿಲ್ಲ, ಹಿಮಾಲಯದಷ್ಟು ತಾವು ಡಿರಿಲಿಕ್ಷನ್ ಆಫ್ ಡ್ಯೂಟಿ ಅನ್ನು ಆ ಪ್ರಮಾಣದಲ್ಲಿ ಮಾಡಿದ್ದೀರಿ. ಸರ್ಕಾರಿ ನೌಕರರಿಂದ ಡಿರಿಲಿಕ್ಷನ್ ಆಫ್ ಡ್ಯೂಟಿಗೆ ಶಿಕ್ಷೆ ಆಗುವಂತಹ ಸಂದರ್ಭಧಲ್ಲಿ ಸರ್ಕಾರದ ಸೂತ್ರವನ್ನು ಹಿಡಿದಿರತಕ್ಕಂಥವರು, ಇವತ್ತು ನೀವಿದ್ದೀರಿ, ನಾಳೆ ನಾವು ಬರಬಹುದು, ನಂತರ ಇನ್ನೊಬ್ಬರು ಬರಬಹುದು, ಯಾರೇ ಆಗಲಿ ತನ್ನ ಕರ್ತವ್ಯವನ್ನು ತಾವು ಮಾಡಬೇಕಾಗುತ್ತದೆ, ಈ ಕರ್ತವ್ಯವನ್ನು ಮಾಡದೇ ಇದ್ದರೆ ಅವರ ಮೇಲೆ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಈ ದೇಶದಲ್ಲಿ ಕಾನೂನು ಇಲ್ಲದೆ ಇದ್ದರೆ ಆ ಕಾನೂನನ್ನು ಮಾಡಬೇಕಾಗುತ್ತದೆ. ಇಲ್ಲದೆ ಇದ್ದರೆ ಇದೇ ರೀತಿಯಾಗಿ ದೊಂಬರಾಟ ಆಡುವುದಕ್ಕೆ ಸರ್ಕಾರಗಳಿಗೆ ಅವಕಾಶ ಕೊಡದೆ ಇರುವಂತಹ ರೀತಿಯಲ್ಲಿ ಸರ್ಕಾರ ಕೆಲಸ ಮಾಡಬೇಕಾಗುತ್ತದೆ. ಆ ರೀತಿ ಮಾಡಿಸತಕ್ಕಂಥ ವ್ಯವಸ್ಥೆ ಜಾರಿಗೆ ತರಬೇಕೆಂದು ಈ ಸಂದರ್ಭಧಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸಿಆರ್‌ಪಿಫ್ ಮುಖ್ಯಸ್ಥರಾಗಿರುವವರು ಹೇಳಿದ್ದಾರೆ ನಾವು ಸಿದ್ದರಿದ್ದೇವೆ ಎಂದು. ನಾವು ಅನೇಕ ಜನರ ಹತ್ತಿರ ಮಾತನಾಡಿದ್ದೇವೆ, ನಮ್ಮ ಎಸ್‌ಟಿಎಫ್ ಹಾಗೂ ತಮಿಳುನಾಡು ಎಸ್‌ಟಿಎಫ್ ಎತಕ್ಕಾಗಿ ವಿಫಲವಾಗುತ್ತಿದೆ ಎಂದು. ಇಲ್ಲಿ ಎರಡು ಮೂರು ಇಲಾಖೆಗಳು ಇದೆ. ಒಂದು ಅರಣ್ಯ ಇಲಾಖೆ, ಇನ್ನೊಂದು ಪೊಲೀಸ್ ಇಲಾಖೆ ಇದೆ. ಒಂದು ಅರಣ್ಯ ಇಲಾಖೆಗೆ, ಇನ್ನೊಂದು ಪೊಲೀಸ್ ಇಲಾಖೆ. ನಮ್ಮ ರಾಜ್ಯದಲ್ಲಿ ಅರಣ್ಯ ಇಲಾಖೆಗೆ ಮತ್ತು ಪೊಲೀಸ್ ಇಲಾಖೆಗೆ ಕೋ-ಆರ್ಡಿನೇಷನ್ ಇಲ್ಲ. ಮತ್ತು ಪೊಲೀಸರಲ್ಲಿ ಕೂಡ ವಿಭಾಗಗಳು, ಒಬ್ಬೊಬ್ಬರದ್ದು ಒಂದೊಂದು ವಿಭಾಗ ಮಾಡಿಕೊಂಡಿದ್ದಾರೆ. ಒಬ್ಬರನ್ನೊಬ್ಬರು ನಂಬುವುದಿಲ್ಲ. ಯಾರಾದರೂ ಒಂದು ಆಜ್ಞೆ ಕಳುಹಿಸಿದರೆ ಏಕೆ ಈ ರೀತಿ ಮಾಡಬೇಕು ಇದನ್ನು ನಾನು ಜಾರಿ ಮಾಡುವುದಿಲ್ಲವೆನ್ನುವ ಧೋರಣೆಯನ್ನು ಅನೇಕ ಅಧಿಕಾರಿಗಳೂ ಕೂಡ ನಡೆಸಿದ್ದಾರೆ. ಜೊತೆಗೆ ನಮ್ಮ ರಾಜ್ಯದಲ್ಲಿ ಇರತಕ್ಕಂಥ ಪೊಲೀಸ್, ವರ್ಟಿ ಕಲ್ ಆಗಿ ಡಿವೈಡ್ ಆಗಿದೆ. ಅದು ವರ್ಟಿಕಲ್ ಆಗಿ ಡಿವೈಡ್ ಆಗಿರುವ ಕಾರಣವೇ ಇವತ್ತು ವೀರಪ್ಪನನ್ನು ಹಿಡಿಯುವುದಕ್ಕೆ ಸಾಧ್ಯವಾಗಿಲ್ಲ. ಅದೇ ರೀತಿಯಲ್ಲಿ ತಮಿಳುನಾಡಿನಲ್ಲಿಯೂ ಕೂಡ ನಮ್ಮ ರಾಜ್ಯದ ಗತೀನೆ ಈ ರೀತಿ ಆಗಿರಬೇಕಾಗಿದ್ದರೆ ಪಕ್ಕದ ರಾಜ್ಯದ ಗತೀನೂ ಕೂಡ ಅದೇ ರೀತಿಯಲ್ಲಿ ಆಗಿದೆ. ಈ ರಾಜ್ಯದಿಂದ ಆ ರಾಜ್ಯಕ್ಕೆ ಎಸ್‌ಟಿ ಎಫ್ ಹಾಕಿದರೆ ಹೊಂದಾಣಿಕೆ ಇಲ್ಲ. ಆ ಕಾರಣದಿಂದ ಇವತ್ತು ಈ ಕೆಲಸವನ್ನು ಮಾಡುವುದಕ್ಕೆ ಎಂದು ಸಿ ಆರ್‌ಪಿಎಫ್‌ನ ಮುಖ್ಯಸ್ಥರು ಹೇಳಿದ್ದಾರೆ. ನಿನ್ನೆ ಅಲ್ಲ ಮೊನ್ನೆ ಹೇಳಿದ್ದಾರೆ. ನೀವು ಏತಕ್ಕಾಗಿ ಅವರಿಗೆ ವಹಿಸಬಾರದು? ಈ ಹಿಂದೆಯೇ ಈ ರೀತಿಯಾದ ತೀರ್ಮಾನವನ್ನು ಏತಕ್ಕೆ ಮಾಡಲಿಲ್ಲ? ಇದಕ್ಕೂ ಕೂಡ ಸರ್ಕಾರದಿಂದ ಉತ್ತರ ಕೊಡುವ ಸಂದರ್ಭದಲ್ಲಿ ನೀವು ಹೇಳಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೇ ಕೆಲವು ಸದಸ್ಯರುಗಳು ಮಾತನಾಡುತ್ತಾ ಮಾನ್ಯ ಸದಸ್ಯರಾದ ವೈ.ಕೆ.ರಾಮಯ್ಯವರು ಇಷ್ಟು ಹೊತ್ತು ಸದನದಲ್ಲಿ ಇದ್ದರು ಈಗ ಇಲ್ಲ, ಈ ರೀತಿಯಾಗಿ ಮನುಷ್ಯತ್ವವಿಲ್ಲದೆ ಮಾತನಾಡುವುದನ್ನು ಮಾನ್ಯ ರಾಮಯ್ಯನವರಿಂದ ನಿರೀಕ್ಷೆ ಮಾಡಿರಲಿಲ್ಲ. ನೂರ ಇಪ್ಪತ್ತೂರು ಜನರು ಸತ್ತಿದ್ದಾರೆ, ಅವರ್‍ಯಾರು, ಆ ಕರ್ತವ್ಯಕ್ಕೆ ನೇಮಿಸಿದ್ದವರು, ವೀರಪ್ಪನ್ ಅನ್ನು ಹಿಡಿಯಲು ಕರ್ತವ್ಯಕ್ಕೆ ನೇಮಿಸಿದ್ದವರು ಸತ್ತಿದ್ದಾರೆ. ಅವರು ಜೀವವೂಕೂಡ ಅಮೂಲ್ಯ ಅದನ್ನು ನಾನು ತೆಗೆಳುವುಲಿಲ್ಲ. ಅವರನ್ನು ಕರ್ತವ್ಯಕ್ಕೆ ನೇಮಿಸಿಂದ

ಅಧಿಕಾರಿಗಳಾದರೆ ಅವರ ಜೀವ ಪರವಾಗಿಲ್ಲವೆನ್ನುತ್ತೀರಾ, ಇಲ್ಲ ಅದನ್ನೂ ಕೂಡ ನಾನು ಒಪ್ಪುವುದಿಲ್ಲ ಅವರ ಜೀವವು ಕೂಡ ಅಷ್ಟೇ ಅಮೂಲ್ಯ, ಆದರೆ ಮಾತನಾಡುವ ಸಂದರ್ಭದಲ್ಲಿ ಹೃದಯವಿಲ್ಲದಿರುವ ಮಾತುಗಳನ್ನು, ಸರ್ಕಾರಕ್ಕೆ ಯಾವರೀತಿ ಹೃದಯವಿಲ್ಲವೋ, ನಿರ್ದಯೆಯಿಂದ, ಹೃದಯರಹಿತವಾದ ರೀತಿಯಲ್ಲಿ ಸರ್ಕಾರ ಹೇಗೆ ಈ ಸದಂರ್ಭದಲ್ಲಿ ನಡೆದುಕೊಂಡಿದೆವೋ ಹಾಗೆಯೇ, ಈಗಾಗಲೇ 123 ಜನ ಸತ್ತಿದ್ದಾರೆ ಪರಿಮಳರವರು 124ನೇ ಯವರು ಎಂದು ಹೇಳತಕ್ಕಂಥ ಹೃದಯಹೀನ ಮಾತನ್ನು ಏನು ಹೇಳಿದ್ದಾರೆ, ಇದನ್ನು ಖಂಡಿತವಾಗಿಯೂ ಸಹಿಸಲಾಗುವುದಿಲ್ಲ, ಖಂಡನೀಯವಾದ ನಿಲುವು ಅವರದ್ದು ಎನ್ನುವುದನ್ನು ನಾನು ಹೇಳಲೇ ಬೇಕಾಗುತ್ತದೆ. ಏಕೆಂದರೆ, ಮನುಷ್ಯತ್ವ ಎಲ್ಲಕ್ಕಿಂತ ಮೇಲಿನದು, ಮನುಷ್ಯತ್ವಕ್ಕಿಂತ ಮೀರಿರತಕ್ಕಂಥದ್ದು ಯಾವುದೂ ಕೂಡ ಇಲ್ಲ, ನಾವು ಮನುಷ್ಯತ್ವವನ್ನು ಮರೆಯಬೇಕಾಗಿರತಕ್ಕಂಥದ್ದು, ಆ ಮನುಷ್ಯತ್ವ ತುಂಬಿದುಂಥ ಮಾತುಗಳು, ಒಬ್ಬ ನೋವಿನಲ್ಲಿರತಕ್ಕಂಥವರ ವಿಚಾರದಲ್ಲಿ ಆಸ್ತಿ ಹೋಗಲಿ ಮತ್ತೊಂದು ಹೋಗಲಿ ಆ ವಿಚಾರ ಬೇರೆ, ಆದರೆ ನೋವಿನಲ್ಲಿರುವ ಸಂದರ್ಭದಲ್ಲಿ ಇನ್ನೂ ಹೆಚ್ಚು ನೋವನ್ನು ಮಾಡತಕ್ಕಂಥ ಪದಗಳನ್ನು ಬಳಸುವುದರಿಂದ, ಅದು ಏನು ತೋರಿಸುತ್ತದೆಂದರೆ, ಅದು ಮನುಷ್ಯತ್ವವನ್ನು ತೋರಿಸತಕ್ಕಂಥ ಮಾತುಗಳೂ ಕೂಡ ಅಲ್ಲ, ಮನುಷ್ಯತ್ವ ತೋರಿಸತಕ್ಕಂಥ ನಿಲುವು ಕೂಡ ಅಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸ್ವಾಮಿ, ನಾಗಪ್ಪನವರ ಬಿಡುಗಡೆ ವಿಚಾರದಲ್ಲಿ ಅನೇಕ ಸಲಹೆಗಳನ್ನು ಕೊಟ್ಟಿದ್ದೇವೆ ಅದನ್ನು ಹೇಗೆ ಬದಿಗೊತ್ತಿ ಒಂದು ಕಡೆ ಓರೆಸಿ ಬಿಸಾಡಿದಿರೋ ಹಾಗೆ ಮಾಡದೆ ಇನ್ನು ಮುಂದಾದರೂ ಕೂಡ ಮಾಡಿರತಕ್ಕಂಥ ಆ ತಪ್ಪುಗಳನ್ನು ಸರಿಪಡಿಸಿಕೊಂಡು ನೀವು ವೀರಪ್ಪನ್‌ನ ಉಪಟಳವನ್ನು ತಪ್ಪಿಸುವುದಕ್ಕೆ ತತ್‌ಕ್ಷಣ ಕಾರ್ಯಗತಮಾಡಬೇಕು. ಡಾ: ರಾಜ್‌ಕುಮಾರ್‌ರವರ ಅಪಹರಣದ ಸಂದರ್ಭಧಲ್ಲಿ ಏನೇನು ಕ್ರಮಗಳನ್ನು ಜರುಗಿಸಿದ್ದೇವೊ ಆ ಎಲ್ಲಾ ಕ್ರಮವನ್ನು ನಾಗಪ್ಪನವರ ವಿಚಾರದಲ್ಲೂ ಕೂಡ ಜರುಗಿಸುತ್ತೇವೆಂದು ಹೇಳಿ ಯಾವರೀತಿ ಉಡಾಫೆಬಿಟ್ಟಿರೋ ಇನ್ನು ಮುಂದು ಆ ರೀತಿಯ ಉಡಾಫೆ ಮಾತುಗಳನ್ನೆಲ್ಲಾ ಬಿಟ್ಟು ನೀವು ನಿರ್ದಿಷ್ಟವಾದ ಕ್ರಮಗಳನ್ನು, ನಾವು ಹೇಳಿರುವ ಕೆಲವು ಸಲಹೆಗಳನ್ನು ದಯವಿಟ್ಟು ಕಾರ್ಯಗತ ಮಾಡಬೇಕೆನ್ನುವ ಮನವಿಯನ್ನು ಮಾಡುತ್ತಾ ಮಾನ್ಯ ಉಪಾಧ್ಯಕ್ಷರು ಇಷ್ಟು ಹೊತ್ತು ನನಗೆ ಮಾತನಾಡಲು ಪೂರ್ಣ ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡರು: ಸ್ವಾಮಿ, ನಾನು ಮಾತನಾಡಬೇಕು.

ಉಪಾಧ್ಯಕ್ಷರು: ಸಾಕಷ್ಟು ಸಮಯಕೊಟ್ಟಿದ್ದೇವೆ, ಸಾಕಷ್ಟು ಸದಸ್ಯರು ಈ ಬಗ್ಗೆ ಮಾತನಾಡಿದ್ದಾರೆ, ಕ್ಲಾರಿಫಿಕೇಷನ್ ಬೇಕಾದರೆ ಕೇಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರಲ್ಲಿ ನಾನು ವಿನಂತಿ ಮಾಡಿಕೊಳ್ಳತ್ತೇನೆ, ನಮ್ಮ ಕಡೆಯಿಂದ ಮಾನ್ಯ ಬಚ್ಚೇಗೌಡರು ಹಾಗೂ ಎಸ್‌ಎಸ್ ಪಾಟೀಲರು ಸ್ವಲ್ಪ ಹೊತ್ತು ಮಾತನಾಡುತ್ತಾರೆ ನಂತರ ಕೆ.ಬಿ.ಮಲ್ಲಿಕಾರ್ಜುನ್‌ರವರು ಮಾತನಾಡುತ್ತಾರೆ ನಂತರ ಮುಗಿಸೋಣ.

ಉಪಾಧ್ಯಕ್ಷರು: ಹೀಗೆ ಗಂಟೆಗಟ್ಟಲೆ ಮಾತನಾಡುತ್ತಾ ಹೋದರೆ ಮುಗಿಯುವುದಿಲ್ಲ, ಈಗ ಅರಣ್ಯ ವಿಚಾರದ ಬಗ್ಗೆ ಜರೂರು ಚರ್ಚೆ ಮಾಡುವುದಿದೆ.

ಶ್ರೀ ಬಿ.ಎನ್.ಬಚ್ಚೇಗೌಡರು: ಇದೂ ಕೂಡ ಅರಣ್ಯಕ್ಕೆ ಸಂಬಂಧಿಸಿದ್ದು, ವೀರಪ್ಪನ್ ಅನ್ನು ಫಾರೆಸ್ಟ್‌ನಲ್ಲಿ ಇರಲು ಬಿಟ್ಟು ಅರಣ್ಯ ಮಂತ್ರಿಗಳು ಫಾರೆಸ್ಟ್‌ನಲ್ಲಿ ಏನೂ ಆಗಿಲ್ಲವೆನ್ನುತ್ತಿದ್ದಾರೆ,

ಇನ್ನೇನಾಗುತ್ತದೆ, ರಾಜೂಗೌಡರು ಆ ಬಾರ್ಡರ್‌ಗಳಿಗೆ ಹೋಗಬಾರದು, ನಂತರ ಅವರು ಹಿಟ್ ಲಿಸ್ಟ್‌ನಲ್ಲಿದ್ದಾರೆ, ಅವರನ್ನು ಎತ್ತಿ ಕೊಂಡು ಹೋಗುತ್ತಾನೆ.

ಉಪಾಧ್ಯಕ್ಷರು: ಈಗಾಗಲೇ ಆರು ಗಂಟೆ ಹದಿನೈದು ನಿಮಿಷ ಆಗಿದೆ, ಏಳು ಗಂಟೆಗೆ ಮುಗಿಸೋಣ, ಟೈಂ ಹೊಂದಾಣಿಕೆ ಮಾಡಿಕೊಂಡು ಅಲ್ಲಿಯವರೆಗೆ ಮಾತನಾಡಲಿ.

+ಶ್ರೀ ಬಿ.ಎನ್.ಬಚ್ಚೇಗೌಡರು(ಹೊಸಕೋಟೆ): ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾಗಪ್ಪನವರ ಹತ್ಯೆಯ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇವತ್ತು ನಾಗಪ್ಪನವರ ಹತ್ಯೆ ನರಹಂತರ ವೀರಪ್ಪನ್‌ನಿಂದ ಆದದ್ದು ನಿಜವಾಗಲೂ ದುರ್ದೈವ, ಅವರು ಸುರಕ್ಷಿತವಾಗಿ ಬರುತ್ತಾರೆಂದು ನಾವು ಬಯಸಿದ್ದೇವು, ಸುಮಾರು 106 ದಿವಸಗಳ ಕಾಲ, ಅವನ ಬಂಧನದಲ್ಲಿದ್ದಂತಹ ನಾಗಪ್ಪನವರನ್ನು ಕಡೆಯಲ್ಲಿ ನಾವು ಅವರ ಶವವನ್ನು ನೋಡುವಂತಹ ಪರಿಸ್ಥಿತಿ ನಿರ್ಮಾಣವಾದುದ್ದು ನಿಜವಾಗಿಯೂ ದುರ್ದೈವ. ಈ ವಿಚಾರದಲ್ಲಿ ನಾನು ನೇರವಾಗಿ ಸರ್ಕಾರ ಬೇಜವಾಬ್ದಾರಿಯಾಗಿ ನಡೆದುಕೊಂಡ ವರ್ತನೆ, ಸರ್ಕಾರ ಮಾಡಿದ ನಿರ್ಲಕ್ಷತೆಯಿಂದ ಇವತ್ತು ನಾಗಪ್ಪನವರ ಹತ್ಯೆಯಾಗಿದೆ ಎಂದು ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ಅವರ ಅಪಹರಣವಾಗುತ್ತದೆಂದು ಸರ್ಕಾರಕ್ಕೆ ಗೊತ್ತಿದ್ದರೂ ಸಹ ಅವರಿಗೆ ಸೂಕ್ತವಾದ ರಕ್ಷಣೆ ಒದಗಿಸುವುದರಲ್ಲಿ ವಿಫಲವಾಗಿದೆ. ಈಗಾಗಲೇ ಮಾನ್ಯ ರಾಜು ಗೌಡರು, ಹೌದು ಅವರ ಅಪಹರಣವಾಗುತ್ತದೆ ಎಂದು ಇತ್ತು, ನನ್ನ ಹೆಸರು ಇತ್ತು ನಾನು ಏಕೆ ಅವರಿಗೆ ತೊಂದರೆ ಮಾಡಲಿ ಎಂದು ಹೇಳಿದರು. ಇವರು ಅಪಹರಣವಾಗಲಿ ಎಂದು ರಾಜುಗೌಡರು ಹೇಳಿದ್ದಾರೆಂದು ನಾನು ಹೇಳುವುದಿಲ್ಲ. ನಾನು ವಿವರಕ್ಕೆ ಹೋಗುವುದಿಲ್ಲ, ನಾನು ಬಹಳ ಸಮೀತವಾಗಿ ಎಷ್ಟಿದೆಯೋ ಅಷ್ಟನ್ನು ಮಾತನಾಡುತ್ತೇನೆ. ಡಾ:ರಾಜ್‌ಕುಮಾರ್‌ರವರು ನಾನಾ ಕಾರಣಗಳಿಂದ 108 ದಿವಸಗಳಾದ ಮೇಲೆ ಅವರು ಬಿಡುಗಡೆಯಾಗಿ ಎರಡು ವರ್ಷವಾಯಿತು. ಅವತ್ತು ಇಲ್ಲಿ ನವೆಂಬರ್ 12 ರಂದು ದೊಡ್ಡ ಭಾಷಣ ಮಾಡಿ ಮಾನ್ಯ ಮುಖ್ಯಮಂತ್ರಿಗಳು, ವೀರಪ್ಪನ್ ಅನ್ನು ಹಿಡಿದೇ ತಿರುತ್ತೇವೆ ಇಲ್ಲವೇ ಶವವಾಗಿ ತರುತ್ತೇವೆಂದು ಹೇಳಿದ್ದರು. ಎರಡು ವರ್ಷವಾಯಿತು ಎಸ್‌ಟಿಎಫ್ ಕಾರ್ಯಾಚರಣೆ ಇಲ್ಲ, ಅದಕ್ಕೆ ಅವಶ್ಯಕ ಸಿಬ್ಬಂದಿಯನ್ನು ಕೊಡಲಿಲ್ಲ, ಅಲ್ಲಿ ಎಸ್‌ಟಿಎಫ್ ಅಲ್ಲಿ ಏನೂ ಕೆಲಸ ಮಾಡಲಿಲ್ಲ. ರಾಜೂಗೌಡರು ಇದರಲ್ಲಿ ಅಪರಾಧಿ, ಆರೋಪಿ ಪ್ರಶ್ನೆ ಅಲ್ಲ ಸ್ವಾಮಿ. ಅಲ್ಲಿಗೆ ನಾವು ಹೋದಾಗ ನಾವು ನೋಡಿದಂತಹ ಪರಿಸ್ಥಿತಿ, ಅಲ್ಲಿರತಕ್ಕಂಥ ಪೋಲಿಸ್ ಸ್ಟೇಷನ್‌ಗಳೇನಿವೆ, ರಾಮಾಪುರವಿರಬಹುದು, ದಿಂಬಂ ಇರಬಹುದು ಗುಂಡಾಲ್ ಇರಬಹುದು, ಅಥವಾ ಹನೂರು ಇರಬಹುದು, ಅಲ್ಲಿನ ಪೋಲಿಸ್ ಸ್ಟೇಷನ್‌ಗಳು ಅಲ್ಲಿರುವ ಸ್ಥಳೀಯ ಪೋಲಿಸ್ ಆಫೀಸರ್‌ನವರು ಏನೂ ಕೆಲಸ ಮಾಡುವುದಿಲ್ಲ. ಭಯ ಸ್ವಾಮಿ, ಸಾಯಂಕಾಲ ಆರೂವರೆಯಿಂದ ಮಾರನೇದಿವಸ ಬೆಳಿಗ್ಗೆ ಆರೂವರೆ ಅಂದರೆ ಒಟ್ಟು 12 ಗಂಟೆಯವರೆಗೆ ಅಲ್ಲಿ ವೀರಪ್ಪನ್ ಕಾನೂನು ನಡೆಯುವುದು, ಅಲ್ಲಿ ನಡೆಯುವುದು ವೀರಪ್ಪನ್ ಲಾ, ಮತ್ತು ಅದು ವೀರಪ್ಪನ್ ಲ್ಯಾಂಡ್, ಹತ್ತಾರು ವರ್ಷಗಳಿಂದ ಅವನ ಅಡಗುತಾಣವೆಲ್ಲಿದೆ, ಅವನ ಹೈಡ್‌ಔಟ್ಸ್ ಯಾವುದು, ಇವುಗಳ ಮಾಹಿತಿಗಳನ್ನು ಪಡೆದು ಅವನನ್ನು ಹಿಡಿಯುವುದರಲ್ಲಿ ಕಡೆಗೂ ಯಶಸ್ವಿಯಾಗಲಿಲ್ಲ. ಕಳೆದ ಮೂರುವರ್ಷಗಳಿಂದ ಸರ್ಕಾರ ಬಂದ ಮೇಲೆ ಇನ್ನೂ ನಿರ್ಲಕ್ಷ್ಯ ಮಾಡಿದ್ದು ಅವನನ್ನು ಹಿಡಿಯಬೇಕೆಂದು ಮಾಡಿದಂತಹ ಪ್ರಯತ್ನಗಳು ಯಾವುದೂ ಫಲಕಾರಿಯಾಗಲಿಲ್ಲ.

6.20 ಪಿ.ಎಂ

ಇತ್ತೀಚಿನ ಪರಿಸ್ಥಿತಿಯನ್ನು ನಾವು ನೋಡುವುದಾದರೆ, ಡಾ: ರಾಜಕುಮಾರ್ ಬಿಡುಗಡೆಯಾಗಿ ಎವಡು ವರ್ಷಗಳಾದರೂ ವೀರಪ್ಪನ್‌ನನ್ನು ಹಿಡಿಯದೇ ಹಾಗೇ ಬಿಟ್ಟರು. ನಂತರ ನಾಗಪ್ಪನವರ ಅಪಹರಣವಾಯಿತು. ಅಂದಿನಿಂದ 102 ದಿವಸಗಳ ಕಾಲದವರೆಗೆ ಮತ್ತೆ ಈ ಸರ್ಕಾರ ಅನೇಕ ಬಾರಿ ಎಲ್ಲಾ ಸರ್ವ ಪಕ್ಷಗಳ ಸಭೆ ಕರೆಯಿತು, ನಾವೂ ನಿಯೋಗ ತೆಗೆದುಕೊಂಡು ಹೋದೆವು. ನಾಗಪ್ಪನವರು ನಮ್ಮ ಪಕ್ಷದವರು, ಹಿಂದೆ ಮಂತ್ರಿಗಳಾಗಿದ್ದಂಥವರು, ಎಲ್ಲರಿಗೂ ಬಹಳ ಬೇಕಾದಂಥ ಸ್ನೇಹಿತರು, ಭಾರೀ ಸಂಭಾವಿತರು, ತಾತ್ವಿಕ ಮನುಷ್ಯರು, ಒಬ್ಬರ ಮೇಲೂ ಕೋಪ ಮಾಡಿಕೊಳ್ಳುತ್ತಿರಲಿಲ್ಲ. ಅಂಥವರನ್ನು ಬದುಕಿಸಿ ಕರೆದುಕೊಂಡು ಬರಲು ಆಗಲಿಲ್ಲ. ಹಿಂದಿನ ಪ್ರಕರಣದಲ್ಲಿ ಸರ್ಕಾರ ಹಣ ಕೊಟ್ಟಿರತಕ್ಕಂಥಾದ್ದು ಎನ್ನುವುದರ ಬಗ್ಗೆ ಇಲ್ಲಿ ಚರ್ಚೆಯಾಗಿದೆ. 40 ಕೋಟಿ ರೂಪಾಯಿ ಕೈ ಬದಲಾಯಿತು. ಹಿಂದೆ ಇದ್ದಂಥ ಡಿ.ಜಿ.ಪಿ. ದಿನಕರ್‌ರವರು ಡೈರಿಯಲ್ಲಿ, ಪ್ರೈಸ್ ಕ್ಯಾಚ್ ಎನ್ನುವ ಪುಸ್ತಕದಲ್ಲಿ ಈ ಬಗ್ಗೆ ತೋರಿಸಿರ ತಕ್ಕಂಥಾದ್ದೆಲ್ಲವನ್ನೂ ನೋಡಿ ನಾವು ಸರ್ಕಾರದ ಮೇಲೆ ಅಷ್ಟೇ ಒತ್ತಡ ತಂದರೂ ಕೂಡ ಮುಖ್ಯಮಂತ್ರಿಗಳು, ಗೃಹಸಚಿವರು ಕೇವಲ ಹಾರಿಕೆಯ ಉತ್ತರಗಳನ್ನು ಕೊಟ್ಟರು. ಬಹಳ ಮುಖ್ಯವಾಗಿ, ಇದರಲ್ಲಿ ಕೇಂದ್ರ ಸರ್ಕಾರದ ಪಾಲೂ ಇದೆ. ಅವರೂ ಸರಿಯಾಗಿ ಕಾರ್ಯ ನಿರ್ವಹಿಸಲಿಲ್ಲ. ಅವರೂ ಲೋಪ ಮಾಡಿದರು. ಇವತ್ತು ಅವರು ಆಚೆ ಉಳಿದಿರಬಹುದು. ಆದರೆ ನಾಗಪ್ಪನವರು ಬದುಕಿದ್ದಾಗ ಏನು ಮಾಡಬೇಕು ಎನ್ನುವ ಕಾರ್ಯಕ್ರಮಗಳನ್ನು ಅವರು ರೂಪಿಸಲಿಲ್ಲ. ಸಾಕಷ್ಟು ಬಾರಿ ನಮ್ಮ ನಾಯಕರಾದ ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರು ಒತ್ತಾಯ ಮಾಡಿದರು, ನಾಗಪ್ಪನವರ ಶ್ರೀಮತಿಯವರು ಪದೆಪದೆಯಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿ, ಪ್ರಧಾನ ಮಂತ್ರಿಗಳಾದ ವಾಜಪೇಯಿಯವರನ್ನು, ಕೇಂದ್ರದ ಗೃಹ ಸಚಿವರನ್ನು, ಪಕ್ಕದ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮತಿ ಜಯಲಲಿತಾರವರನ್ನು ಕಂಡು, ರಾಜ್ಯದಲ್ಲಿ ಅನೇಕ ಕಡೆ ಹೋಗಿ ತನ್ನ ಗಂಡನ ಪ್ರಾಣ ಭಿಕ್ಷೆಯನ್ನು ಕೇಳಿಕೊಂಡರು ಸಹ ಈ ಸರ್ಕಾರಕ್ಕೆ ನಾಗಪ್ಪನವರನ್ನು ಬಿಡಿಸುವ ಬಗ್ಗೆ ಕರುಣೆಯೇ ಬರಲಿಲ್ಲ. ನಾವು ಹೋದಾಗ ಮಾತ್ರ, ಆಗಲಿ ಎಂದು ಹೇಳುತ್ತಿದ್ದರೇ ವಿನಃ ಯಾರಿಗೂ ಅದನ್ನು ಮಾಡಬೇಕು ಎನ್ನುವ ಇಚ್ಛೆ ಇರಲಿಲ್ಲ. ಯಾರಿಗೂ ಬೇಡದೇ ಇರುವಂಥ ಜಾಗ ಅದು. ಅಲ್ಲಿಗೆ ಪೋಲೀಸಿನವರನ್ನು, ಎಸ್.ಟಿ.ಎಫ್.ನವರನ್ನು ಹಾಕುವುದು ಎಂದರೆ ಪನಿಷ್‌ಮೆಂಟ್ ಇದ್ದಹಾಗೆ. ಯಾವ ಅಧಿಕಾರಿಗಾದರೂ ಶಿಕ್ಷೆ ಕೊಡಬೇಕು ಎಂದರೆ ಅವರನ್ನು ಅಲ್ಲಿಗೆ ತೆಗೆದುಕೊಂಡು ಹಾಕುವಂಥ ಕೆಲಸ ಆಗುತ್ತದೆ. ಯಾರು ನಿಜವಾಗಿಯೂ ವೀರಪ್ಪನ್‌ನನ್ನು ಹಿಡಿಯುತ್ತಾರೆ, ಯಾವ ಪೋಲೀಸ್ ಅಧಿಕಾರಿಗೆ ಅವನನ್ನು ಹಿಡಿದುಕೊಂಡು ಬರುವಂಥ ಶಕ್ತಿ ಇದೆ. ಅಂಥವರನ್ನು ಅಲ್ಲಿ ಹಾಕದೇ, ಒಳ್ಳೆಯ ಎಸ್.ಟಿ.ಎಫ್.ಮುಖ್ಯಸ್ಥರನ್ನು, ಕಮ್ಯಾಂಡೋಗಳನ್ನು ಹಾಕಿ ಅವರ ಮೂಲಕ ಹಿಡಿಯಬೇಕು ಎನ್ನುವ ಪ್ರಯತ್ನಗಳು ಇಲ್ಲ. ನವೆಂಬರ್ 12 ರಂದು, ಡಾ: ರಾಜಕುಮಾರ್‌ರವರು ಬಿಡುಗಡೆಯಾದಾಗ, ಮಾನ್ಯ ಮುಖ್ಯಮಂತ್ರಿಗಳು, ಗೃಹ ಸಚಿವರು ಹೇಳಿದಂಥಾದ್ದು ಏನೆಂದರೆ, ವೀರಪ್ಪನ್‌ನನ್ನು ಹಿಡಿಯಲು ನಾವು ಅತ್ಯಾಧುನಿಕವಾದಂಥ ಸಲಕರಣೆಗಳನ್ನು, ಉಪಕರಣಗಳನ್ನು,

ಬಂದೂಕುಗಳನ್ನು ಎಲ್ಲವನ್ನೂ ಕೊಡುತ್ತೇವೆ ಎಂದು ಆದರೆ ಅಲ್ಲಿ ಕೆಲಸ ಮಾಡುವಂಥಾದ್ದ್ಯಾವುದೂ ಆಗಲಿಲ್ಲ. ಅವರಿಗೆ ರಕ್ಷಣೆ ಕೊಡುವಂಥಾದ್ದು ಆಗಲಿಲ್ಲ. ಇನ್ನು, ಅರಣ್ಯ ಮಂತ್ರಿಗಳು ಈಗ ಇಲ್ಲಿ ಇಲ್ಲ. ಅರಣ್ಯದಲ್ಲಿ ಏನಾಗುತ್ತದೆ ಎಂಬುದು ಯಾರಿಗೂ ಗೊತ್ತಿಲ್ಲ. ಅಲ್ಲಿ ವಾಚರ್ಸ್ ಇದ್ದಾರೆ, ಗಾರ್ಡುಗಳಿದ್ದಾರೆ, ಬೇಕಾದಷ್ಟು ಎಸ್.ಟಿ.ಎಫ್. ಸಿಬ್ಬಂದಿಗಳಿದ್ದಾರೆ, ಆರ್.ಎಫ್.ಓಗಳಿದ್ದಾರೆ. ಅರಣ್ಯ ಸಚಿವರು ಈಗ ಬರುತ್ತಿದ್ದಾರೆ. ಕಾಡಿನ ವ್ಯಾಪ್ತಿಯಲ್ಲಿ ಏನಾಗುತ್ತದೆ ಎನ್ನುವುದೇನೂ ನಮಗೆ ಬೇಕಾಗಿಲ್ಲವೇನೋ ಎನ್ನುವ ಹಾಗೆ ನಿದ್ರೆ ಮಾಡುವ ಪರಿಸ್ಥಿತಿ ಅರಣ್ಯ ಸಚಿವರದ್ದಾಗಿದೆ. ಅಲ್ಲಿ ಏನಾಗಿದೆ, ಏನಿಲ್ಲ ಎಂದು ಅವರು ನೋಡಿಲ್ಲ. ರಾಜೂಗೌಡರಿಗೆ ಗೊತ್ತಿದೆ, 50 ಹಳ್ಳಿಗಳಲ್ಲಿ ವೀರಪ್ಪನ್‌ನ್ನ ಸಂಬಂಧಿಕರೇ ಇದ್ದಾರೆ. ಕಾಮಗೆರೆಯಲ್ಲೂ ವೀರಪ್ಪನ್ ಕಡೆಯವರು ಇದ್ದಾರೆ. ರಾಜೂಗೌಡರಿಗೆ ನಾವು ಅದನ್ನೇ ಹೇಳುವುದು, ಅವರಿಗೆ ಎಲ್ಲಾ ಗೊತ್ತಿದೆ. ಅವರು ಪ್ರಯತ್ನ ಪಟ್ಟಿದ್ದರೆ ಆಗುತ್ತಿತ್ತು. ಅಲ್ಲಿ ಇರುವಂಥವರಲ್ಲಿ ಕಾಂಗ್ರೆಸ್‌ನವರು ಯಾರು, ವೀರಪ್ಪನ್ ಕಡೆಯವರು ಯಾರು, ರಾಜೂಗೌಡರ ಕಡೆಯವರು ಯಾರು ಎನ್ನುವುದು ಗೊತ್ತಾಗುವುದಿಲ್ಲ. ನಾನು ಅಲ್ಲಿ ಹೋಗಿ ಸ್ವಲ್ಪ ಅನುಭವ ಪಡೆದುಕೊಂಡು ಬಂದೆ. ಅಲ್ಲಿ ಎಲ್ಲರೂ ವೀರಪ್ಪನ್ ಕಡೆಯವರೇ. ಇವರು ಕಾಂಗ್ರೆಸ್‌ನವರು ಎಂಬುದು ಗೊತ್ತಾಗುವುದಿಲ್ಲ, ರಾಜೂಗೌಡರ ಕಡೆಯವರು ಎಂಬುದು ಗೊತ್ತಾಗುವುದಿಲ್ಲ. ಎಲ್ಲಿ ಅವರದೇ ಕಾನೂನು, ಎಲ್ಲಾ ಕಡೆ ಅವರದೇ ಜನ ನುಗ್ಗುತ್ತಾರೆ. ಏನು ಬೇಕಾದರೂ ಮಾಡಿಕೊಂಡು ಹೋಗುವಂಥ ಪರಿಸ್ಥಿತಿ ಇದೆ. ಮಾನ್ಯ ಚಂದ್ರೇಗೌಡರೂ ಅಷ್ಟೆ, ಮಣಿಯನ್ನು ಬಿಡಿಸಿಕೊಡಿ, ಅವರು ಸಂಧಾನಕಾರರಾಗಿ ಹೋಗಲಿ ಎಂದರೆ, ನಾವು ಏಕೆ ಅರ್ಜಿ ಹಾಕಿಸಬೇಕು ಎಂದು ಹೇಳಿದರು. ಅದರಷ್ಟಕ್ಕೆ ಅದು, ಕಾನೂನು ರೀತಿಯಲ್ಲಿ ಕೋರ್ಟಿನಲ್ಲಿ ತೀರ್ಮಾನವಾಗಲಿ, ಅರ್ಜಿ ಹಾಕುವ ಕೆಲಸ ನಮ್ಮದೇನು ಎಂದು ಹೇಳಿದರು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): ಹಾಗೆಂದು ಯಾರು ಹೇಳಿದರು? ಮಣಿಯನ್ನು ಬಿಡಿಸಲು ಚಂದ್ರೇಗೌಡರು ಅರ್ಜಿ ಹಾಕಬೇಕು ಎಂದು ನೀವು ಯಾವಾಗ ಹೇಳಿದಿರಿ. ಅವರನ್ನು ಸಂಧಾನಕಾರರಾಗಿ ಕಳುಹಿಸುವುದು ಬೇರೆ ಮಾತು. ಆದರೆ, ಚಂದ್ರೇಗೌಡರು ಅರ್ಜಿ ಹಾಕಲಿಲ್ಲ ಎಂದರೆ ಏನು ಅರ್ಥ?

ಶ್ರೀ ಬಿ.ಎನ್.ಬಚ್ಚೇಗೌಡ: ತಾವೇ ಹೇಳಿದ್ದೀರಿ, ಅರ್ಜಿ ಹಾಕುವುದಕ್ಕೆ ನಾವು ಯಾರು, ಎಂದು. ಕೋರ್ಟ್ ಇದೆ ಎಂದು ಹೇಳಿದ್ದೀರಿ. ತಾವು ಪ್ರಾಸಿಕ್ಯೂಟರಿಗೆ ಹೇಳದಿದ್ದರೆ, ತಮ್ಮ ವಕೀಲರಿಗೆ ಹೇಳದಿದ್ದರೆ, ಈ ಬಗ್ಗೆ ಮಾತನಾಡಿ...

ಶ್ರೀ ಡಿ.ಬಿ.ಚಂದ್ರೇಗೌಡ: ಯಾವ ವಕೀಲರಿಗೆ ಸ್ವಾಮಿ?

ಶ್ರೀ ಕೆ.ಜಯಪ್ರಕಾಶ ಹೆಗಡೆ: ನಾವು ಹೇಳುತ್ತಿರುವುದು ಬೇಲ್ ಅಪ್ಲಿಕೇಷನ್ ಅಲ್ಲ. ಸೆಕ್ಷನ್ 321ರ ಕೆಳಗೆ ವಿತ್‌ಡ್ರಾಯಲ್‌ಗೆ ಹಾಕಬಹುದಿತ್ತಲ್ಲಾ.

ಶ್ರೀ ಡಿ.ಬಿ.ಚಂದ್ರೇಗೌಡ: ನಾನು ಎಲ್ಲವನ್ನೂ ಹೇಳಿದ್ದೇನೆ. ಸೆಕ್ಷನ್ 321ರ ಕೆಳಗೆ ವಿತ್‌ಡ್ರಾ ಮಾಡಲು ಸರ್ಕಾರಕ್ಕೆ ಅಧಿಕಾರವಿಲ್ಲ. ಸರ್ಕಾರಕ್ಕಿದ್ದ ಅಧಿಕಾರವನ್ನು, ರಾಜಕುಮಾರ್ ಅಪಹರಣ ಪ್ರಕರಣದಲ್ಲಿ, ಸುಪ್ರೀಂ ಕೋರ್ಟ್, ಕೈ ಕಾಲು, ವಿಂಗ್ಸ್ ಎಲ್ಲಾ ಕಟ್ಟಿಹಾಕಿದ್ದಾರೆನ್ನುವ ಮಾತನ್ನು ಹೇಳಿದ್ದೇನೆ.

ಶ್ರೀ ಕೆ.ಜಯಪ್ರಕಾಶ ಹೆಗಡೆ: ಅದು ಕೇವಲ ಬೇಲ್‌ಗೆ ಸಂಬಂಧಿಸಿದಂತೆ ಹೇಳಿರುವುದು. ಸೆಕ್ಷನ್ 321ರ ಕೆಳಗೆ ಯಾವುದೇ ತೀರ್ಮಾನವಾಗಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ನಿಮ್ಮ ಹಾಗೆ ನಾನು ವಕೀಲನೇ. ಮಣಿಯನ್ನು ಬಿಡಿಸುವುದಕ್ಕೆ ಸೆಕ್ಷನ್ 321ರಡಿಯಲ್ಲಿ ಅರ್ಜಿ ಹಾಕುವುದಕ್ಕೆ ಸಂಬಂಧಿಸಿದಂತೆ, ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಬೇಕು ಎಂದಾಗ, ಅದಕ್ಕಿರತಕ್ಕಂಥ ರಿಸ್ಟ್ರಿಕ್ಷನ್‌ಗಳೇನು ಎನ್ನುವುದನ್ನು ನಾನು ಓದಿ ಹೇಳಿದ್ದೇನೆ. ಸುಪ್ರೀಂ ಕೋರ್ಟ್ ಏನು ಹೇಳಿದೆ ಎನ್ನುವುದನ್ನು ಹೇಳಿದ್ದೇನೆ.

ಶ್ರೀ ಕೆ.ಜಯಪ್ರಕಾಶ ಹೆಗಡೆ: ಸುಪ್ರೀಂ ಕೋರ್ಟ್ ಕ್ಲಿಯರ್‌ಆಗಿ ಹೇಳಿದೆ. ಸೆಕ್ಷನ್ 321 ಕೆಳಗೆ appreciation of evidence ಇಲ್ಲ, ಯಾವ ಕೋರ್ಟಿಗೂ ಅಧಿಕಾರವಿಲ್ಲ, ಅದನ್ನು ಸರ್ಕಾರ ತೀರ್ಮಾನ ಮಾಡಬೇಕು. ಪಬ್ಲಿಕ್ ಪ್ರಾಸಿಕ್ಯೂಟರಿಗೆ ಅಪ್ಲಿಕೇಷನ್ ಹಾಕಬೇಕು. ಕೋರ್ಟಿನವರು ಕೇವಲ ಏನು ತೀರ್ಮಾನ ತೆಗೆದುಕೊಳ್ಳಬೇಕು ಎಂದರೆ, whether he has applied his mind or not ಎನ್ನುವುದನ್ನು ಬಿಟ್ಟು ಬೇರೆ ಏನೂ ಅದರಲ್ಲಿ ಇಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಕಾನೂನು ಸಚಿವರು ಇವತ್ತು ಬರಿ ಸುಪ್ರೀಂ ಕೋರ್ಟಿನ ಕಡೆ ತೋರಿಸುತ್ತಿದ್ದಾರೆ. ಸುಪ್ರೀಂ ಕೋರ್ಟ್ ತೀರ್ಮಾನ ತೆಗೆದುಕೊಂಡಿದ್ದು ಬೇರೆ ಅಪ್ಲಿಕೇಷನ್‌ನಲ್ಲಿ.

Sri. D.B.Chandre Gowda: Even withdrawal, I will bring to the notice of the House, what are the observations made by the Supreme Court in Rajkumar's case.

ಶ್ರೀ ಬಿ.ಎನ್.ಬಚ್ಚೇಗೌಡ: ಕಂದಹಾರ್ ಪ್ರಕರಣದಲ್ಲಿ ಬಿಡುಗಡೆ ಆಯಿತಲ್ಲಾ, ಅದು ಯಾವರೀತಿ ಆಯಿತು, ಹೇಗೆ ಆಯಿತು?

Sri. D.B.Chandre Gowda: I am not concerned with that case.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಕಾನೂನು ಸಚಿವರು ಇದನ್ನು ಕೊನೆಯವರೆಗೂ ಎಳೆದುಕೊಂಡು ಬಂದರು. ಅವರು ಕೇವಲ ಕಣ್ಣು ಒರೆಸುವ ತಂತ್ರವನ್ನು ಮಾಡಿಕೊಂಡು ಬಂದರು. ಗೊಂದಲದ ಹೇಳಿಕೆಗಳನ್ನು ಕೊಡುತ್ತಾ ಬಂದರು. ಚಾರ್ಜ್ ಷೀಟ್ ಹಾಕುತ್ತೇವೆ ಎಂದು ಹೇಳಿದರು, ಆದರೆ ಹಾಕಲಿಲ್ಲ.

ಶ್ರೀ ಬಿ.ಸೋಮಶೇಖರ್: ಚಾರ್ಜ್ ಷೀಟ್ ಫೈಲ್ ಮಾಡದೇ ಇರುವಾಗ, ವಿತ್‌ಡ್ರಾ ಮಾಡಿಕೊಳ್ಳಲು ಏಕೆ ಆಗಲಿಲ್ಲ? 10 ತಿಂಗಳಾದರೂ ಒಂದು ಕೇಸ್‌ನಲ್ಲೂ ಚಾರ್ಜಷೀಟ್ ಫೈಲ್ ಮಾಡಲಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ನಾವು ಈ ಶಾಸನಸಭೆಯಲ್ಲಿ ಬಹಳ ಸಲೀಸಾಗಿ ಮಾತನಾಡಬಹುದು. ಆದರೆ ಪರಿಸ್ಥಿತಿ ಏನೆಂಬುದನ್ನು ನೋಡಬೇಕು. ಆಲ್ ಪಾರ್ಟಿ ಮೀಟಿಂಗಿಗೆ ತಾವೂ ಬಂದಿದ್ದಿರಿ. ತಮಗೆ ನೆನಪಿದೆ ಎಂದು ಭಾವಿಸುತ್ತೇನೆ. What our previous Law Minister suggested? ನಿಮಗೆ ನೆನಪಿಲ್ಲದಿದ್ದರೆ, ನಾನು ನೆನಪು ಮಾಡಿಕೊಡುತ್ತೇನೆ. He clearly said that you cannot legally move this matter. You have to take

a political decision ಎನ್ನುವ ಶಬ್ದವನ್ನು, ಹಿಂದಿನ ಕಾನೂನು ಮಂತ್ರಿಗಳಾದ ಶ್ರೀಮಾನ್ ಎಂ.ಸಿ.ನಾಣಯ್ಯನವರು ಹೇಳಿದ್ದಾರೆ. ಆದಾದ ಮೇಲೂ ನಾವು ಸಾಧ್ಯವಾದಷ್ಟು ನಮ್ಮ ಪ್ರಯತ್ನಗಳನ್ನು ಮಾಡಿದ್ದೇವೆ. ಅವುಗಳನ್ನು ಉತ್ತರದಲ್ಲಿ ಹೇಳೋಣ. But being Advocates ನಿಮಗೇ ಅಧಿಕಾರ ಇತ್ತು, ನಾವು ಕೇಸ್ ವಿತ್‌ಡ್ರಾ ಮಾಡಲಿಲ್ಲ ಎಂದರೆ, under what provision of Law? ಸೆಕ್ಷನ್ 321 ರಲ್ಲಿ ಸರ್ಕಾರಕ್ಕೆ ಅಧಿಕಾರ ಎಲ್ಲಿದೆ? Please, tell me and read out the section.

ಶ್ರೀ ಕೆ.ಜಯಪ್ರಕಾಶ ಹೆಗಡೆ: ನೀವು ಹೇಳುತ್ತಿರುವುದು ಬೇರೆ ಅಪ್ಲಿಕೇಷನ್‌ನಲ್ಲಿ ಸೆಕ್ಷನ್ 321ರ ಕೆಳಗೆ ಇದು ಒಂದೇ ಇರುವುದು.

ಶ್ರೀ ಡಿ.ಬಿ.ಚಂದ್ರೇಗೌಡ: ಒಂದು ನೋಟ್ಸ್ ಮಾಡಿ ಇಟ್ಟಿದ್ದೇನೆ, ಅದನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ.

> "WITHDRAWAL FROM PROSECUTION- In any criminal case instituted is governed under Section 321 of Cr.P.C. The Supreme Court in the recent case of Abdul Karim and others Vs State of karnataka - Rajkumar's case, has laid down the principles under which circumstances the Court can permit withdrawal from the prosecution on an application made by the Public Prosecutor. (Underline this sentence).
>
> The Court in the aforementioned judgement has passed strictures against the State Government seriously when the decision was taken to withdraw the charges instituted against Veerapan and his gang under TADA. The Court in the aforementioned judgement has clearly emphasised that it is the Public Prosecutor, and it is again the Public Prosecutor who should make up his mind that the withdrawal from the prosecution is in the larger interest of the state and the society. The government role is only to indicate to the Public Prosecutor what is the larger interest of the State and Society involved in the case for withdrawing the prosecution. Beyond that government has no role to play. It is only the Public Prosecutor who has to play a prominent role in applying his mind before he makes an application under Section 321 of Cr.P.C. seeking consent of the court for withdrawing from the prosecution."

Thereafter, it is for the Court to get itself convinced that the application made by the Prosecutor is genuine and no consideration of

the merits of the application, discretion is left to the Court either to accord permission to withdraw or to reject the same. Hence as already adverted above, the government has very little role to play in the withdrawal of the cases. Apart from his, there was one more legal hurdle in the withdrawal of the case instituted against Mani that it because the case which was registered against Mani was under Explosive Substances Act and the Arms Act, apart from the offences registered under the IPC, the permission of the Central Government is required for withdrawal of the cases registered under for the offences the Act and Explosive Substances Act. Hence, the government cannot be blamed that it tool good lot of time to take a decision for withdrawal from the prosecution taking into consideration the affirments and legal hurdles. This is what I am repeatedly been telling.

ಶ್ರೀ ಬಿ.ಎನ್.ಬಚ್ಚೇಗೌಡ: ಇಲ್ಲಿ ಜಾಮೀನು ಕೊಡುವಂಥದ್ದು ಡಿಫರೆಂಟ್ withdrawal is different. Withdrawal is from the Government side ನಾವು ಮಾತನಾಡುತ್ತಿರತಕ್ಕಂಥದ್ದು ಕೇಸ್ ವಿತ್‌ಡ್ರಾಯಲ್ ಬಗ್ಗೆ.

Sri. D.B.Chandre Gowda: This is what I read What ever I have said is under Section 321. The government Cannot be blamed.

Sri. K.Jayaprakash Hedge: It is only on the recommendation of the Government, the Public Prosecutor files the application because Government is the client of the Public Prosecutor. ಆದ್ದರಿಂದ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಕುವ ಅಪ್ಲಿಕೇಷನ್ ಬಗ್ಗೆ ಕೋರ್ಟ್‌ನವರೇ ಏನು ತೀರ್ಮಾನ ಮಾಡುತ್ತಾರೆಂದು ಹೇಳಿದಿರಿ Whether he has applied his mind, ಮಾತ್ರ ಕೋರ್ಟ್ ಹೇಳುವುದನ್ನು ಬಿಟ್ಟರೆ the Court has not power to reappreciate the evidence.

ಶ್ರೀ ಬಿ.ಎನ್.ಬಚ್ಚೇಗೌಡ: ಸರ್ಕಾರ ತೆಗೆದುಕೊಳ್ಳಬೇಕಾದಂಥ ತೀರ್ಮಾನವನ್ನು ಮೊದಲೇ ತೆಗೆದುಕೊಂಡು, ಮಾನ್ಯ ಕಾನೂನು ಸಚಿವರು ಆ ಬಗ್ಗೆ ಮನಸ್ಸು ಕೊಟ್ಟಿದ್ದರೆ, ಈ ಅನಾಹುತ ಆಗುತ್ತಿರಲಿಲ್ಲ ಎನ್ನುವುದನ್ನೇ ನಾನು ಹೇಳುತ್ತಿರುವುದು. ಶ್ರೀ ಚಂದ್ರೇಗೌಡರ delay tactics ಏನಾಯಿತು, ಸುಮಾರು 106 ದಿವಸಗಳಷ್ಟು ತಡ ಮಾಡಿದ್ದರಿಂದ, ಕಡೆಯಲ್ಲಿ ಸ್ವಲ್ಪ ಸೀರಿಯಸ್‌ನೆಸ್ ಬಂತು. ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಖರ್ಗೆಯವರು ಮತ್ತು ಮಾನ್ಯ ಕಾನೂನು ಸಚಿವರು ಇವರೆಲ್ಲಾ ಸೀರಿಯಸ್‌ನೆಸ್ ಅನ್ನು ಕೊನೆಯಲ್ಲಿ ತೆಗೆದುಕೊಂಡಿದ್ದರಿಂದ ಅದು ಪರಿಣಾಮ ಆಗಿ ಇನ್ನೇನು ಮಣಿಯನ್ನು ಬಿಡುತ್ತಾರೆ ಇನ್ನೇನು ನಮ್ಮ ಸಂಧಾನಕಾರರು ಹೋದರು ಎನ್ನುವಷ್ಟರೊಳಗಾಗಿ ಈ ಒಂದು ಪರಿಸ್ಥಿತಿಯನ್ನು, ಅವರ ಹತ್ಯೆಯನ್ನು, ಶವವನ್ನು ನೋಡುವಂಥ ಪರಿಸ್ಥಿತಿಗೆ ನೀವು ಕಾರಣರು ಎಂದು ಹೇಳಿದೆ ಅಷ್ಟೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸಧೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಯಾವುದನ್ನು ಹೇಳುವುದಕ್ಕೆ ಸಾಧ್ಯವಿಲ್ಲವೋ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಬಹುಶಃ ಕರ್ನಾಟಕದ ಕಾನೂನು ಇಲಾಖೆ ಪ್ರಯತ್ನ ಮಾಡದೇ ಇದ್ದರೆ ಉಚ್ಚ ನ್ಯಾಯಾಲಯದಲ್ಲಿ ಮಣಿ ಅವರಿಗೆ ಮೂರು ಕೇಸ್‌ನಲ್ಲಿ ಜಾಮೀನು ಅರ್ಜಿ ಮಂಜೂರು ಆಗುತ್ತಿರಲಲ್ಲ. Let me make very Iam clear on this question. ಆದುದರಿಂದ ಕೆಳಗಡೆ ಕೋರ್ಟ್‌ನಲ್ಲಿಯೂ ಆಗುತ್ತದೆ. ಸಾಮಾನ್ಯವಾಗಿ ಎಂದು ತಿಳಿದುಕೊಂಡಿದ್ದವು ಆದರೆ ಅಲ್ಲಿಯೂ ಅನೇಕ hurdlesಬಂತು ಅದರ ಜೊತೆಗೆ ಪ್ರತಿಪಕ್ಷವಾಗಿರತಕ್ಕಂಥ ಭಾರತೀಯ ಜನತಾ ಪಕ್ಷದವರು-ನೀವು ಕೇಸನ್ನು ಏನಾದರೂ ವಿತ್‌ಡ್ರಾ ಮಾಡಿದರೆ we will move the Supreme Court ಎಂದು ಹೇಳಿದರು. ಶ್ರೀ ಕರೀಂ ಸಾಹೇಬರು-ನೀವು ಏನಾದರೂ ಕೇಸ್ ವಿತ್‌ಡ್ರಾ ಮಾಡಿದರೆ ಸುಪ್ರೀಂ ಕೋರ್ಟ್‌ಗೆ ಹೋಗುತ್ತೇನೆಂದು ಹೇಳಿದರು. So, the government had to take all the care to see that the matter is dealt with very carefully and cautiously. That is what we have done.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳು ಬಹಳ ಬುದ್ಧಿವಂತರು. ನಾನು ಎಲ್ಲೂ ಸಹಿತ ಮಾತನಾಡತಕ್ಕಂಥ ಸಂದಭದಲ್ಲಿ ನಾವು, ಮಾನ್ಯ ಮುಖ್ಯಮಂತ್ರಿಗಳಾಗಲೀ ಅಥವಾ ಮಾನ್ಯ ಕಾನೂನು ಮಂತ್ರಿಗಳಾಗಲೀ ಈ ಕೇಸುಗಳನ್ನು ವಿತ್‌ಡ್ರಾ ಮಾಡಲಿಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಲಿಲ್ಲ ಎಂದು ಹೇಳಲಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಈಗತಾನೇ ಅವರು ಹೇಳಿದರು.

Sri. B.N. Bache Gowda: The delay process led to 106 days.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುತ್ತಿರತಕ್ಕಂಥದ್ದು ಏನೆಂದರೆ, ಸರ್ಕಾರ ಎಲ್ಲಿ ಎಡವಿದೆ, ಎಲ್ಲಿ ಮೋಸ ಆಗಿದೆ ಎಂದು ಹೇಳಿದರೆ, ಇದನ್ನು ಬಹಳ ಮುಖ್ಯವಾಗಿ ಗಮನಿಸಬೇಕಾದಂಥ ಅಂಶ. ಏನೋ ಹೇಳುವುದಕ್ಕೆ ಆಗುವುದಿಲ್ಲ ಎಂದು ಮಾನ್ಯ ಕಾನೂನು ಸಚಿವರು ಹೇಳಿದರಲ್ಲಾ, ಈಗ ನಾನು ಹೇಳುತ್ತಾ ಇರುವುದಕ್ಕೂ ಉತ್ತರ ನೀವು ಕೊಡುವುದಕ್ಕೆ ಆಗುವುದಿಲ್ಲ. ನೀವು ಇಲ್ಲಿ ಸೂಚನೆ ಕೊಡುತ್ತಿರೀ. ಮುಖ್ಯಮಂತ್ರಿಗಳು ಸೂಚನೆ ಕೊಡುತ್ತಾರೆ, ಕೋರ್ಟ್ ಮುಂದೆ ಹೋಗುತ್ತಾರೆ, ನೀವು ಏನು ಸೂಚನೆ ಕೊಡುತ್ತೀರೋ, ಆ ಸೂಚನೆಗೆ ವಿರುದ್ಧವಾಗಿ ಕೆಲಸ ಆಗುತ್ತದೆ. Who are working behind? ಆ ಕಾಣದ ಕೈ ಯಾವುದು? ಈಗ ಪತ್ತೆ ಮಾಡಬೇಕಾಗಿರತಕ್ಕಂಥದ್ದು ಆ ಡಿಲೇ ಆಗಲಿಕ್ಕೆ ಒಂದು ಕಾಣದ ಕೈ one set of officers particularly who were working, they were responsible for the murder of Nagappa. They were responsible for harassing Muttu Lakshmi Wife of Nagappa. They were responsible for harassing Muttu Lakshmi Wife of Veerappan. They were responsible for torturing Kolathur Mani. What is the action you have taken? This is what I am asking.

ನೀವು ಈಗ ಏನು ಮಾಡುತ್ತಿದ್ದೀರಿ ಎಂದರೆ ಮಾನ್ಯ ಚಂದ್ರೇಗೌಡರೇ ತಾವು ಹೇಳಿರತಕ್ಕಂಥದ್ದು ಎಲ್ಲಾ ಸರಿ, ನಾನು ನಿಮ್ಮ ಮನೆಯಲ್ಲಿ ಕುಳಿತುಕೊಂಡು ಊಟ ಮಾಡಿಕೊಂಡು ಕೇಸ್‌ಅನ್ನು ವಿತ್‌ಡ್ರಾ ಮಾಡಿ ಎಂದು ಹೇಳಿ ನಾವೆಲ್ಲಾ ಬಂದು ಹೇಳಿರತಕ್ಕಂಥದ್ದು, ನಾನು ಕೇಳುತ್ತಿರುವ ಪ್ರಶ್ನೆ ಏನೆಂದರೆ, Right from the abduction of Rajkumar, the way in which these people have conducted themselves, that is the reason for the murder of Nagappa. ಅದನ್ನು ತಾವು ಅರ್ಥಮಾಡಿಕೊಳ್ಳಬೇಕು ಎಂದು ಹೇಳುತ್ತಿರಕ್ಕಂಥದ್ದು. ಈಗ ನೀವು ಹೇಳಿದಿರಿ, ಇಲ್ಲಿ ಸೂಚನೆ ಕೊಟ್ಟಿರಿ Who were obstructing them? Why did your instructions not carried out? ಯಾರು ಮಾಡುತ್ತಾ ಇದ್ದಾರೆ ಅದು ತಮಗೂ ಗೊತ್ತಿದೆ. ತಾವು ಇನ್ನು ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾವು ಒತ್ತಾಯ ಮಾಡುತ್ತಿರತಕ್ಕಂಥದ್ದು. I know you have been trapped. ಮಾನ್ಯ ಮುಖ್ಯಮಂತ್ರಿಗಳಿಗೆ ಮೋಸ ಮಾಡಿದ್ದಾರೆ, ವಂಚನೆಯಾಗಿದೆ, ನಾಗಪ್ಪನವರ ಜೀವಕ್ಕೆ ವಂಚನೆಯಾಗಿದೆ, ಆಟ್‌ಲೀಸ್ಟ್ ಇನ್ನು ಮೇಲಾದರೂ ಅಧಿಕಾರಿಗಳು ನಿಮ್ಮ ಮಾತು ಕೇಳಬೇಕಲ್ಲವೇ? ಅದಕ್ಕೋಸ್ಕರ ಈ ಸತ್ಯಶೋಧನೆ ಕೆಲಸ ಆಗಬೇಕೆಂದು ಹೇಳುತ್ತಿರುವುದು.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ನಾವು ಅದನ್ನೇ ಹೇಳಿದ್ದೆವು. ಮಾನ್ಯ ಸಚಿವರುಗಳು ಆ 105 ದಿವಸವೂ ಗೊಂದಲದ ಹೇಳಿಕೆಗಳನ್ನು ಕೊಟ್ಟರು. ಮಾನ್ಯ ಕಾನೂನು ಸಚಿವರು ಒಂದು ತರಹದ ಹೇಳಿಕೆ, ಅದೇ ರೀತಿ ಮಾನ್ಯ ಗೃಹಸಚಿವರ ಒಂದು ತರಹದ ಹೇಳಿಕೆ, ಮಾನ್ಯ ರಾಜೂಗೌಡರದು ಕೆಲವು ಹೇಳಿಕೆಗಳು...

ಶ್ರೀ ಡಿ.ಬಿ.ಚಂದ್ರೇಗೌಡ: ಬಹಳವಾದ ಹೇಳಿಕೆಗಳು ಎಂದರೆ ಅದು ಯಾವ ಹೇಳಿಕೆಗಳು ಯಾವುದರಲ್ಲಿ ದೋಷ ಇದೆ ಅದನ್ನು ಸ್ಪಷ್ಟವಾಗಿ ಹೇಳಿ.

ಶ್ರೀ ಬಿ.ಎನ್.ಬಚ್ಚೇಗೌಡ: ಗೊಂದಲಮಯ ಹೇಳಿಕೆಗಳು, ಸಂಶಯ ಬರುವಂಥ ರೀತಿಯಲ್ಲಿ ಕೊಡುವಂಥ ಹೇಳಿಕೆಗಳು...

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಏನಾಗಿದೆ ದೋಷ ಎಂದರೆ ಸರಿಯಾಗಿ ಕೇಸನ್ನು ಅರ್ಥ ಮಾಡಿಕೊಳ್ಳದೇ ಇದ್ದರೆ,

ಶ್ರೀ ಬಿ.ಎನ್.ಬಚ್ಚೇಗೌಡ: ಇಡೀ ರಾಜ್ಯದ ಜನತೆಗೆ ಇರ ಸತ್ಯಾಸತ್ಯತೆಯನ್ನು ಹೇಳದಿದ್ದರೆ, ಇದರ ನಿಗೊಢತೆಯನ್ನು ಹೊರಹಾಕದಿದ್ದರೆ

ಶ್ರೀ ಡಿ.ಬಿ.ಚಂದ್ರೇಗೌಡ: ನಿಗೂಢತೆ ಏನೂ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಏನು ಹೇಳಿದರೆಂದರೆ, ನೀವು ಮಣಿ ಮೇಲೆ ಕೇಸು ಹಾಕಿಬಿಟ್ಟಿರಿ, ಅವನು ಒಬ್ಬ ಅಪರಾಧಿ ಎಂದು ಗೊತ್ತಿದ್ದೂ ನೀವು ಹೇಗೆ ಅವನನ್ನು ಡಾ: ರಾಜ್‌ಕುಮಾರ್ ಕೇಸ್‌ನಲ್ಲಿ ಸಂಧಾನಕ್ಕೆ ಕಳುಹಿಸಿದಿರಿ ಎಂದು ಕೇಳಿದರು. ನಾನು ಅವರಿಗೆ ಹೇಳಿದೆ, ಅದೇನೆಂದರೆ ಕೇಸ್ ನಂ. 67ಅಫ್ 94 ರಲ್ಲಿ ಮಣಿ ಅಪರಾಧಿ ಆಗಿರಲಿಲ್ಲ. Even now I put the record straight that Kolathur Mani was accused only in 2002, when the case No. 67/94 could not be heard in the Lower court, therefore, the case was split. ಒಂದು ಪೋರ್ಷನ್ ಸ್ಪ್ಲಿಟ್ ಮಾಡಿ that was subjected to the enquiry and in the other portion ಅದರಲ್ಲಿ ಕೆಲವರು ಅಬಸ್ಕಾಂಡ್ ಆಗಿದ್ದರು. ಅದರಲ್ಲಿ

ಎ-33 ಒಬ್ಬ. ಸಂಡಪಾಳ್ಯ ಸವರಿಯಪ್ಪನ್ ಎನ್ನತಕ್ಕಂಥವನು ಒಬ್ಬ. ಅವನು ಇನ್‌ಫಾರ್ಮೇಷನ್ ಕೊಟ್ಟ. ಮಣಿ ಎನ್ನತಕ್ಕಂಥವನು ವೀರಪ್ಪನ್‌ಗೆ ಅಮ್ಯುನಿಶನ್ ಅನ್ನು ಕೊಟ್ಟಿದ್ದಾನೆಂದು ಮಾಹಿತಿ ಕೊಟ್ಟ. ಆಗ Mani was brought into the case. Till such time he was not an accused at all in any of the cases. That is all I want to place before this House.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಮ್ಮ ನಾಯಕರಾದ ಶ್ರೀ ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದಿಂದ ಮಣಿಯನ್ನು ಏಕೆ ಈಚೆಗೆ ಬಿಡಲಿಕ್ಕೆ ಆಗಲಿಲ್ಲ?

Sri. D.B.Chandre Gowda: Because he was in judicial custody.

ಶ್ರೀ ಬಿ.ಎನ್.ಬಚ್ಚೇಗೌಡ: ಮಣಿಯನ್ನು ಈಚೆಗೆ ಬಿಟ್ಟರೆ, ಬಿಟ್ಟಮೇಲೆ ಏನಾಗುತ್ತದೆ ಈ ಸರ್ಕಾರದ ಮೇಲೆ ಪರಿಣಾಮ ಎಂದು ಹೇಳಿ ಮಣಿಯನ್ನು ಬಿಡಿಸಲಿಲ್ಲ ಎಂದು ನಾನು ಹೇಳುತ್ತೇನೆ. ಅವನನ್ನು ಬಿಡಿಸುವಂಥದ್ದರಲ್ಲಿ ನಿಮ್ಮ ಪ್ರಯತ್ನ ಇಲ್ಲ, ಅವನು ಅನೇಕ ವಿಷಯಗಳನ್ನು ಈಚೆಗೆ ತರುತ್ತಾನೆ, ಸರ್ಕಾರ ನೀವು ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ ಎನ್ನುವಂಥ ಭಯವನ್ನು ತಾವು ಪಟ್ಟಿದ್ದಿರಿ. That is the delay tectics you have played.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ನಾನು ಮತ್ತೊಂದು ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ತಾವು ಏನು ಈ ಕೋರ್ಟ್ ಕೇಸ್‌ನಲ್ಲಿ ಮಣಿ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಬಯಸಿದ್ದೀರಿ ಮಣಿ ಮೇಲೆ ಕೇಸುಗಳನ್ನು ಹಾಕತಕ್ಕಂಥ ಸಂದರ್ಭದಲ್ಲಿ ಇನ್ನೂ ಇವರು ಡಿಫೆಂಡೇ ಮಾಡಿ ಕೊಳ್ಳುತ್ತಿದ್ದಾರೆ. ಅದು ಯಾರೋ ಅಕ್ಯೂಸ್ಡ್ 1994ರಲ್ಲಿ, ಅದು ಆದಮೇಲೆ 2001ರಲ್ಲಿಯೋ, 2002ರಲ್ಲಿಯೋ ಸರ್‌ಫೇಸ್ ಆಗುತ್ತಾನೆ. ಅವನು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್ ಆಧಾರದ ಮೇಲೆ ಮಣಿ ಮೇಲೆ ಟಾಡಾ ಕೇಸನ್ನು ನಾವು ಹಾಕಿದ್ದೇವೆ ಎನ್ನತಕ್ಕಂಥ ಮಾತನ್ನು ತಾವು ಹೇಳಿದಿರಿ. ನಾನು ಈಗ ಹೇಳುವುದೇನೆಂದರೆ, ಕೊಳತ್ತೂರು ಮಣಿ ಬಿಡುಗಡೆ ಆದರೆ ಥರಥರ ನಡುಗತಕ್ಕಂಥ ಅಧಿಕಾರಿಗಳು ಇದ್ದಾರೆ. ಅವರೆಲ್ಲಾ ನಾಗಪ್ಪನವರ ಹಣ ಬಂದಮೇಲೆ ಇಲಿ ಬಿಲಗಳಲ್ಲಿ ಸೇರಿಕೊಂಡಿದ್ದಾರೆ. ಇದೇ ನಡೆದಿರತಕ್ಕಂಥ ಪಿತೂರಿ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇತು. ಕೊಳತ್ತೂರು ಮಣಿ ಎಂದು ಹೇಳಿದರೆ ಥರಥರ ನಡುಗುತ್ತಾರೆ ಕಾರಣ ಏನು? ಈ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಬೇಕಾಗಿರತಕ್ಕಂಥದ್ದು. ನಿಮ್ಮ ಹತ್ತಿರ ಉತ್ತರ ಇಲ್ಲ ಎಂದರೆ ತನಿಖೆ ಮಾಡಿಸಿ ಎಂದು ನಾವು ಕೇಳುತ್ತಿದ್ದೇವೆ ಅಷ್ಟೆ.

ಶ್ರೀ ಬಿ.ಎನ್.ಬಚ್ಚೇಗೌಡ: ಸನ್ಮಾನ್ಯ ಉಪಾಧ್ಯಕ್ಷರೆ, ಇದನ್ನೇ ನಾನು ಹೇಳಿದಂಥದ್ದು. ಆದಂಥ ಕಾರ್ಯಗಳು ತಡವಾಗಿ ಆಯಿತು ಮಾನ್ಯ ಮುಖ್ಯಮಂತ್ರಿಗಳು ಏನೂ ಪ್ರಯತ್ನವನ್ನೇ ಪಡಲಿಲ್ಲ ಎಂದು ಯಾರೂ ಹೇಳುವುದಿಲ್ಲ ಅಥವಾ ಅವರು ನಾಗಪ್ಪನವರ ಹತ್ಯೆ ಆಗಬೇಕೆಂದು ಯಾರಿಗೂ ಇಚ್ಛೆ ಇರಲಿಲ್ಲ. ಅದನ್ನು ನಾನು ಹೇಳುವುದಿಲ್ಲ. ನಮ್ಮ ಸರ್ಕಾರ ಮಾಡಿದ ಎಫರ್ಟ್ಸ್ ನರಹಂತಕನನ್ನು ಹಿಡಿಯುವಂಥ ಕಾರ್ಯದಲ್ಲಿ, ನಾವು ವಿಫಲರಾಗಿ ನಾವು ಇಂಥದ್ದಕ್ಕೆಲ್ಲಾ ದುರ್ದೈವರಾಗಿ ಇವರ ಸಾವಿಗೆ ಕಾರಣವಾದೆವಲ್ಲಾ ಎಂಬುದೇ ನಮಗೆ ದುಃಖವಾಗಿರುವುದು

ಹಂತ ಹಂತವಾಗಿ ನಾವೇನು ಮಾಡುತ್ತಿದ್ದೇವೆ. ಇವತ್ತು ಮಾನ್ಯ ಗೃಹ ಸಚಿವರಾದ ಖರ್ಗೆಯವರು ಬಂದರು, ರಾಜ್‌ಕುಮಾರ್‌ರವರನ್ನು ಬಿಡಿಸಿ ಎರಡು ವರ್ಷಗಳಾಯಿತು. ನವೆಂಬರ್ 12ರಂದು ಇಲ್ಲೇ ಮುಖ್ಯಮಂತ್ರಿಗಳು ಒಂದು ಹೇಳಿಕೆ ನೀಡಿ, ಇನ್ನು ನಾವು ಅವನನ್ನು ಬಿಡುವುದಿಲ್ಲ, ಅವನನ್ನು ಹಿಡಿದು ತಂದೇ ತರುತ್ತೇವೆ ಜೀವಂತವಾಗಿಯೋ ಆಗಲಿ, ಶವವಾಗಿಯೇ ಆಗಲಿ, ಎಂದು ಹೇಳಿದರು, ಏನು ಎಫರ್ಟ್ಸ್ ಸ್ವಾಮಿ ಎಸ್‌ಟಿಎಫ್ ಮಾಡಿದ್ದು? ಇಲ್ಲಿ ಶೂರತ್ವದ ಹೇಳಿಕೆಗಳನ್ನು ಹೇಳಿದರು. ಇವರೇನು ಮಾಡಿದರು? ಗೃಹ ಸಚಿವರು ಯಾವುದರೊಂದು ಸ್ಥಳಕ್ಕೆ ಅಲ್ಲಿಗೆ ಹೋಗಿದ್ದರೆ? ಭೇಟಿ ಕೊಟ್ಟಿದ್ದರೆ? ದಿಂಬಂಗೆ ಹೋಗಿದ್ದರೆ? ಗುಂಡಾಲಗೆ ಹೋಗಿದ್ದರೆ? ಹೋಗಲಿ, ರಾಮಾಪುರ, ಮತ್ತೆ ಹನೂರಿಗೆ ಹೋಗಿದ್ದರೆ/ ಅಲ್ಲೇನಾದರೊಂದು ಕಾರ್ಯಕ್ರಮ ರೂಪಿಸಿಕೊಂಡು ಇವನು ಎಲ್ಲಿದ್ದಾನೆ? ಅವನನ್ನು ಹಿಡಿಯಲು ಒಂದು ಛಾಲೆಂಜ್ ಆಗಿ ತೆಗೆದುಕೊಳ್ಳಬೇಕು. ರಾಜೂಗೌಡರು ನೀವಿದ್ದಾಗ ಏನು ಮಾಡಿದಿರಿ, ಎಂದು ಕೇಳಿದರು. ಸ್ವಾಮಿ, ನಾವಿದ್ದಾಗ ನಾಲ್ಕು ಜನರಿಗೆ ಅವರ ಸಂಖ್ಯೆಯನ್ನು ಕೆಳಗಿಳಿಸಿದೆವು. ಅವರ ಸಂಖ್ಯೆ ಕೆಳಕ್ಕೆ ಇಳಿದು ಹೋಯಿತು. ಯಾರೂ ಇರಲಿಲ್ಲ. ಅವರ ಸಂಖ್ಯೆ ಈಗ ಎಷ್ಟಿರಬಹುದೆಂದು ನಿಮಗೆ ಗೊತ್ತಿರಬಹುದು. ಆರು ಜನ ಇದ್ದಾರೆಂದು ಮೊನ್ನೆ ತಾವು ಹೇಳಿದಿರಿ. ಎಷ್ಟಿದ್ದಾರೆಂಬುದು ತಮಗೆ ಗೊತ್ತಿರುತ್ತದೆ. 4 ಜನ ಇದ್ದಾರೆಯೇ? 6 ಇದ್ದಾರೆಯೇ? ಅವರ ಸಂಖ್ಯೆ ಎಷ್ಟಿದೆ ಎಂಬುದು ನಿಮಗೆ ಗೊತ್ತಿರುತ್ತದೆ. ಇವತ್ತು ಸರ್ಕಾರ ಆ ದಿಕ್ಕಿನಲ್ಲಿ ಏನು ಪ್ರಯತ್ನ ಪಟ್ಟಿದೆ? ಎರಡು ವರ್ಷಗಳಿಂದ ಏನೂ ಮಾಡಿಲ್ಲ. ಇವತ್ತು ಹಿಡಿದುಕೊಂಡು ಬಂದಾಗ ಸಂಖ್ಯೆ ಹೇಳುವುದು. ಅವರ ಶವ ತಂದಿದ್ದಾಗ ಮಾನ್ಯ ಖರ್ಗೆಯವರನ್ನು ಹೋಂ ಮಿನಿಸ್ಟರ್ ಆಗಿ ನಾನು ನೋಡಿದ ಎಷ್ಟು ಚೆನ್ನಾಗಿ ನಮ್ಮ ಕರ್ನಾಟಕದ ಗುಪ್ತದಳ ಕೆಲಸ ಮಾಡುತ್ತಿದೆ ಎಂಬುದರ ಬಗ್ಗೆ ಹೇಳುತ್ತೇನೆ. ಮಾನ್ಯ ಮಹದೇವಪ್ರಸಾದ್‌ರವರೆಲ್ಲಾ ಮಾತನಾಡಿದರು ಅವರನ್ನು ಹಿಡಿದುಕೊಂಡು ಹೋದಾಗ 12 ಗಂಟೆ ಅಲ್ಲಿ ಯಾರೂ ಕೇಳುವವರೇ ಇಲ್ಲ. ಕಮಾಂಡರ್ ಇವರಿಗೆ ಪರ್ಮಿಷನ್ ಕೊಡಬೇಕಂತೆ. ಅಲ್ಲೇ ರಾಮಾಪುರದ ಹತ್ತಿರ ಓಡಾಡುತ್ತಿದ್ದಾನೆ ಅಲ್ಲೇ ಬಸ್ಸುಹತ್ತುತ್ತಾನೆ, ಅವನಿಗೇ ಷೇಕ್ ಹ್ಯಾಂಡ್ ಕೊಡುತ್ತಾರೆ, ಬಹಳ ಹಾನರಬಲ್ ಆಗಿ ಅವನನ್ನು ಕಳುಹಿಸಿ ಕೊಡುತ್ತಾರೆ. ಯಾರೋ ಹೋಗಿ ಭಿಕ್ಷೆ ಬೇಡಿದ ಹಾಗೆ ಸಾವಿರಾರು ಜನ, ಆ ಭಾಗದಲ್ಲಿರುವವರು ಬೇಡಿಕೊಳ್ಳುತ್ತಾರೆ, ಸಾರ್ ಇಲ್ಲಿದ್ದಾನೆ, ಅಲ್ಲಿದ್ದಾನೆ ಬಸ್ಸಿದೆ ನೋಡಿ ಎಂದು ಯಾರೂ ಒಳಗೆ ಹೋಗಿ ಬಂದಿಲ್ಲ. ಆ ಪೋಲೀಸ್ ಸ್ಟೇಷನ್‌ಗಳಲ್ಲಿರುವ ಪೋಲೀಸ್‌ನವರದ್ದೂ ಅದೇ ಕಥೆ. ನಮ್ಮನ್ನೆಲ್ಲಿ ಹಿಡಿದುಕೊಂಡು ಹೋಗುತ್ತಾನೋ ಎಂದು ಹೇಳಿ. ಈ ವೀರಪ್ಪನ್ ಹೆಸರು ಹೇಳಿದರೆ ಅವರು ಸ್ಟೇಷನ್ ಬಿಟ್ಟು ಈಚೆನೇ ಬರುವುದಿಲ್ಲ. ಅಂಥವರು ಆ ಪೋಲೀಸ್ ಸ್ಟೇಷನ್‌ಗಳಲ್ಲಿರುವ ಕಾನ್‌ಸ್ಟೇಬಲ್‌ಗಳು. ಯಾರು ಅಲ್ಲಿ ಕೆಲಸ ಮಾಡುತ್ತೇನೆನ್ನುತ್ತಾರೆ, ಅವರನ್ನು ಅಲ್ಲಿ ಹಾಕುವುದಿಲ್ಲ. ಅನ್‌ವಾಂಟೆಡ್‌ಗಳನ್ನು ತೆಗೆದುಕೊಂಡು ಅಲ್ಲಿಗೆ ಹಾಕುವುದು. ರಾಮಾಪುರದಲ್ಲಿ ಹಿಂದೆ ಒಂದು ಸಾರಿ ಸ್ಟೇಷನ್‌ಗೆ ಮುತ್ತಿಗೆ ಹಾಕಿ ಹೊಡೆದಿದ್ದ. ಆ ಭಯ ಇನ್ನೂ ಅವರಿಗೆ ಹೋಗಿಲ್ಲ. ಇನ್ನೆಲ್ಲಿ ಇವರು ಹಿಡಿಯುವುದು? ನಮ್ಮ ಕೃಷ್ಣಮೂರ್ತಿಯವರಿಗೆ ಸರಿಯಾದ ಹೊಡೆತ ಸ್ವಾಮಿ, ನಾವು ನೋಡಿದೆವು. ಅವತ್ತು ಲಾರಿಯಲ್ಲಿ ಇವರನ್ನು ಹೊಡೆದುಬಿಡುವುದು. ವೀರಪ್ಪನ್ ಹಿಡಿಯರಿ ಎಂದರೆ ಎದುರು

ಸಿಕ್ಕದ ನಮ್ಮ ಶಾಸಕರನ್ನೇ ಹೊಡೆದು ಹಾಕಿದರು. ನಮ್ಮನ್ನೆಲ್ಲಾ ಹುಡುಕಾಡಿದರು ಸ್ವಾಮಿ. ರಾಜೂಗೌಡರು ಹೇಳುತ್ತಾರೆ ಅವರು ಅಲ್ಲಿ ಇರಲಿಲ್ಲ, ಯಾರೂ ಇವರನ್ನು ಬಿಡಲಿಲ್ಲ, ಮಹದೇವಪ್ಪ ಇವರನ್ನೆಲ್ಲಾ ಯಾರೂ ಒಳಗೆ ಬಿಡಲಿಲ್ಲ. ಅಲ್ಲಿ ಗಲಾಟೆ ಇತ್ತು ಬಹಳ ಟೆನ್‌ಷನ್ ಇತ್ತು. ನಾವು ಹೋದರೆ, ಅಲ್ಲಿ ಯಾರ್‍ಯಾರೋ ಬಂದಿದ್ದಾರೋ ನಮಗೇ ಗೊತ್ತಾಗಲಿಲ್ಲ. ನಮ್ಮನ್ನೆಲ್ಲಾ ಬಾಯಿಗೆ ಬಂದ ಹಾಗೆ ಬಯ್ಯೋದು, ಬಾಯಿಗೆ ಬಂದ ಹಾಗೆ ಹೊಡೆಯುತ್ತೇನೆಂದು ಹೇಳುವುದು ಮತ್ತೆ ಅವರ ಹತ್ತಿರ ಬೇರೆ ಬೇರೆ ವೆಪನ್ಸ್. ಅಲ್ಲಿ ಕೇಳಿದರೆ, ಯಾರ್‍ರಿ ಅವರು ಎಂದರೆ, ರಾಜೂಗೌಡರ ಕಡೆಯವರು ಎನ್ನುತ್ತಾರೆ. ಇನ್ನು ನಾವು ಏನು ಹೇಳುವುದು? ನಾನು ಸುಳ್ಳು ಹೇಳುತ್ತೇನಾ? ಸಾರ್, ರಾಜೂಗೌಡರ ಕಡೆಯವರು. ನಮಗೆಲ್ಲಾ ಹೊಡೆದರು. ಗಾಡಿಗಳಿಗೆ ಹೊಡೆದರು. ನಾವೆಲ್ಲಾ ಓಡಿ ಹೋದೆವು. ನಮ್ಮ ಹೆಸರು ಹಿಡಿದು ನಮ್ಮ ಹಿಂದೆ ಬಂದರು ಸಾರ್. ನಾವು ಕೇಳಿದೆವು. ಪಾಪ ಅವರು, ನೋವಾಗುತ್ತದೆ, ಪಾಪ ಅಯಮ್ಮ ಈಚೆ ಬಂದರೆ, ಮನೇನೆಲ್ಲಾ ಒಡೆದು ಹಾಕಿದರು. ಚಪ್ಪಲಿ, ಬೂಟ್ಸ್, ಕಲ್ಲು ಏನೆಂದರೆ ಅದರಲ್ಲಿ ಹೊಡೆದರು. ಶವ ಬಂದಿದ್ದನ್ನು ನೋಡುವವರು, ದುಃಖದಲ್ಲಿರುವವರು, ಈ ಸಮಾಜದವರಿದ್ದಾರೆ. ಪಾಪ ಅಯ್ಯೋ ಎಂದು ಕೊಂಡು ಬೇರೆ ಬೇರೆಯವರು ಇದ್ದಾರೆ. ಗಲಾಟೆ ಮಾಡೋದಕ್ಕೇ ಬಂದಿರುವವರು 25ಪರ್ಸೆಂಟ್ ಇದ್ದಾರೆ. ನಮಗೆ ಹೊಡೆಯುವವರಿದ್ದಾರೆ. ನಾಗೇಗೌಡರ ಮೇಲೆ ಅಟೆಂಪ್ಟ್ ಮಾಡಿದರು ಸಿಂಧ್ಯಾರವರು ಎಲ್ಲಿ ಎಂದು ಹುಡುಕಾಡಿದರು. ಬೈರೇಗೌಡರ ಮೇಲೆ ಅಟೆಂಪ್ಟ್ ಮಾಡಿದರು. ಸೋಮಶೇಖರ್‌ರವರನ್ನು ಓಡಿಸಿಕೊಂಡು ಹೋದರು. ಇದನ್ನು ನಾವು ಏನು ಹೇಳಬೇಕು? ಯಾರ ಕಡೆಯವರು ಎಂದು ಹೇಳಬೇಕು? ಇವರು ಹೇಳಿದರು, ಬಚ್ಚೇಗೌಡರೆ ಹಾಗೆ, ಹೀಗೆ ಎಂದು ಹೇಳಿದರು. ನಾನು, ನೀವು ಮಾಡಿದ್ದೀರೆಂದು ಹೇಳುವುದಿಲ್ಲ. ನೀವು ವಿಷಯ ಕೊಡಬಹುದು. ಮುಖ್ಯಮಂತ್ರಿಗಳು ನಿಮ್ಮ ಬಾಯಿ ಮುಚ್ಚಿಸಿದರು. ನೀವು ಮನಸ್ಸು ಮಾಡಿದ್ದಿದ್ದರೆ ನಾಗಪ್ಪನವರು ಬದುಕಿ ಬರುತ್ತಿದ್ದರು. ನಿಮ್ಮ ಮೇಲೆ ನಿಲ್ಲುತ್ತಾರೋ, ಇಲ್ಲವೋ ನಾನು ಮಾತನಾಡುವುದಿಲ್ಲ. ನೀವು ಪ್ರಯತ್ನಪಟ್ಟಿದ್ದರೆ ಆಗುತ್ತಿತ್ತು ಎಂದು ನಾನು ಹೇಳುತ್ತಿದ್ದೇನೆ ನಿಮಗೆ ರಾಜಕೀಯವಾಗಿ ಶತ್ರುವಿರಬಹುದು. ಅದನ್ನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅವರೇನು ಎಂಬುದು ನಿಮಗೆ ಗೊತ್ತಿತ್ತು. ತಮಿಳುನಾಡಿನ ಎಸ್‌ಟಿಎಫ್ ಆಕ್ಷನ್ ಜೋರಾಗಿದೆ ಆದ್ದರಿಂದ ಕೇವಲ ಕರ್ನಾಟಕದಲ್ಲೇ ಅವನಿರುವ ಪ್ರದೇಶ. ಇನ್ನೆಲ್ಲೂ ಅವನು ಹೋಗುವುದಿಲ್ಲ. ಅವನು ತಯಾರಿ ಮಾಡಿ ಇಟ್ಟಂತರರು ಯಾಕೆಂದರೆ ಸ್ಯಾಂಡಲ್‌ವುಡ್ ಕಳ್ಳತನ ಮಾಡುವವರು ರೌಡಿ ಎಲಿಮೆಂಟ್ಸ್ ಎಲ್ಲಾ ಕ್ರಿಮಿನಲ್ ಎಲಿಮೆಂಟ್ಸ್. ಅವರನ್ನು ನೀವು ತನಿಖೆ ಮಾಡಿ ಹಿಡಿಯಿರಿ ಎಂದರೆ ಹೈಕೋರ್ಟ್ ಜಡ್ಜ್‌ರನ್ನು ನಾವು ಹಾಕುತ್ತೇವೆ, ಜುಡಿಷಿಯಲ್ ಎನ್‌ಕ್ವಯರಿ ಮಾಡುತ್ತೇವೆ ಎಂದರೆ, ಏನು ಎನ್‌ಕ್ವಯರಿ? ನಮಗೆ ಗೊತ್ತಿದೆ. ಗುಡ್ಡದಲ್ಲಿ, ಅರಣ್ಯದಲ್ಲಿ ಏನು ಎನ್‌ಕ್ವಯರಿ ಮಾಡುತ್ತಾರೆ?

ಶ್ರೀ ಸಿ.ಬೈರೇಗೌಡ: ಆ ದಿವಸ ನಾವೆಲ್ಲಾ ಪ್ರತ್ಯಕ್ಷದರ್ಶಿಗಳಾಗಿದ್ದೆವು. ಅವತ್ತಿನ ದಿವಸ ಬಹುಶಃ ನಮ್ಮ ಪಾಡೂ ಅದೇ ಪರಿಸ್ಥಿತಿ ಆಗುತ್ತಿತ್ತೋ ಏನೋ? ಗೊತ್ತಿಲ್ಲ. ನಾವು ಅಲ್ಲಿ ಹೋದ ಕಾಲದಲ್ಲಿ ನಾಗಪ್ಪನವರ ಶವವಿಡುವುದಕ್ಕೆ ಶಾಮಿಯಾನ ಹಾಕಿದ್ದರು. ಅದರ ಪಕ್ಕದಲ್ಲಿ

ಖುರ್ಚಿಗಳಿದ್ದವು. ನಾವು ಖುರ್ಚಿ ಮೇಲೆ ಕುಳಿತುಕೊಂಡೆವು. ನಮ್ಮ ಹಿಂದುಗಡೆ 7-8 ಸಾಲು ಖುರ್ಚಿಗಳಿದ್ದವು. ಅಲ್ಲೂ ಬೇರೆ ಜನರು ಕುಳಿತುಕೊಂಡಿದ್ದರು. ಕುಳಿತುಕೊಂಡ ಮೇಲೆ ಅಲ್ಲೇನೂ ಗಲಾಟೆಯಿರಲಿಲ್ಲ. ನಮ್ಮನ್ನ ಅಲ್ಲಿ ಜಾಗ ಬಿಡಿಸಿ ಮನೆ ಹಿಂದುಗಡೆ ಕಳುಹಿಸಿದರು. ಅಲ್ಲಿ ಶವ ಸಂಸ್ಕಾರ ಮಾಡಲು ಗುಣಿ ಎಲ್ಲಾ ತೆಗೆದಿದ್ದರು. ಇಲ್ಲಿಗೇ ತರುತ್ತಾರೆಂದು ಸ್ವಲ್ಪ ಹೊತ್ತು ಕುಳುತುಕೊಂಡೆವು. ಅಲ್ಲಿ ಉದ್ದೇಶಪೂರ್ವಕವಾಗಿ ಹೇಗೆ ನಡೆಯಿತೆಂದು ನಾನು ಇವತ್ತಿನ ದಿವಸ ಹೇಳುವುದಿಲ್ಲ. ಇಲ್ಲಿ ಐದಾರು ಸಾಲು ನಮ್ಮ ಹಿಂದೆ ಖುರ್ಚಿಗಳಿದ್ದವು, ಒಂದು ಸಾಲು ಹೀಗೆ ರೌಂಡ್ ಆಗಿ ಒಂದು ಸಾಲು ಹಾಕುತ್ತಾರೆ. ಅಲ್ಲಿ ಹೋಗಿ ನಾವು ಖುರ್ಚಿಗಳ ಮೇಲೆ ಕುಳಿತುಕೊಂಡೆವು. ಆ ಮೇಲೆ 5-10 ನಿಮಿಷಕ್ಕೆ ಸೋಮಶೇಖರ್, ನಾಗೇಗೌಡರು, ಬೈರೇಗೌಡರು ಇಲ್ಲೇ ಇದ್ದಾರೆ ಎಂದು ತೋರಿಸತಕ್ಕಂಥವರು ಕೆಲವರು. ಎಲ್ಲಿ ಸಿಂಧ್ಯಾ ಎಂದು ಹುಡುಕತಕ್ಕಂಥವರು ಕೆಲವರು. ನಾವು ಇಳಿದ ತಕ್ಷಣ ನಮ್ಮ ಜೊತೆಯಲ್ಲಿ ಆ ಮೇಲೆ ಗೊತ್ತಾಯಿತು, ನಮ್ಮ ಕಾರು ನಂಬರುಗಳನ್ನೆಲ್ಲಾ ಗುರುತು ಹಾಕಿಕೊಂಡಿದ್ದರು. ನಾವು ನಮ್ಮ ಕಾರ್ ಅನ್ನು ತಳ್ಳಿಕೊಂಡು, ಅಲ್ಲೊಂದು ಚಿಲ್ಲಿಂಗ್ ಪ್ಲಾಂಟ್ ಇದೆ, ಸುಮಾರು ಒಂದು, ಒಂದೂವರೆ ಕಿಲೋಮೀಟರ್ ದೂರದಲ್ಲಿ ನಮ್ಮ ಕಾರ್ ನಿಲ್ಲಿಸಿದರೆ, ಅಲ್ಲಿ ಸೀಮೆ ಎಣ್ಣೆ ಡಬ್ಬ ಹಿಡಿದುಕೊಂಡು ಓಡಾಡುತ್ತಾರೆ. ಆ ಮೇಲೆ ನಾವು ಕುಳಿತ ಕಡೆಯಿಂದ ಮಾತುಗಳು ಸ್ವಲ್ಪ ಸ್ವಲ್ಪ ಶುರುವಾಯಿತು. ಏನು ಮಾಡಿದಿರಿ, ನೀವೇನು ಮಾಡಿದಿರಿ ಎಂದು ನಮ್ಮ ಹೆಸರುಗಳನ್ನು ಹಿಡಿದು ಯಾರೋ ಪರಿಚಯ ಮಾಡಿಕೊಟ್ಟರು. ನಾವೇನೂ ಮಾತನಾಡಲಿಲ್ಲ. ನಮ್ಮ ಹಾಗೆ ಅವರೂ ದುಃಖದಲ್ಲಿರುವವರು, ಆ ದುಃಖದಲ್ಲಿ ಸ್ವಾಭಾವಿಕವಾಗಿ ಹೇಳುತ್ತಾರೆ ಅನ್ನುವ ಭಾವನೆ ನಮಗಿತ್ತು. ನಾವೇನೂ ಮಾತನಾಡಲಿಲ್ಲ. ಒಂದೇ ಸಾಲು ಖುರ್ಚಿ ಪಕ್ಕದಲ್ಲಿ ಕುಳಿತುಕೊಂಡೆವು. ಇದ್ಯಾಕಪ್ಪ ಎಂದು ಏಳುವಷ್ಟರಲ್ಲಿ ನಮ್ಮ ಸುತ್ತಲೂ ಕೂಡ ಜನ ಇದ್ದರು. ಸೋಮಶೇಖರ್‌ರವರನ್ನು ಈ ಕಡೆ ನೂಕಿದರು, ನಾನು, ಸೋಮಶೇಖರ್‌ರವರು ಮನೆಯಿಂದ ಹಿಂದಕ್ಕೆ ಹೋದೆವು, ನಾಗೇಗೌಡರಿಗೆ ಖುರ್ಚಿ ತೆಗೆದುಕೊಂಡು, ಅವರಿಗೆ ಒಂದು ಕಾಲು ಸರಿಯಿಲ್ಲದೇ ಇದ್ದರೂ ಕೂಡ ಖುರ್ಚಿ ತೆಗೆದುಕೊಂಡು ಐವತ್ತು ಮೀಟರ್ ದೂರ, ಅಲ್ಲಿದ್ದಂಥ ಗಿಡ ಹಾಕತಕ್ಕಂಥ ಕುಂಡಗಳ ಹೊಡೆದರು, ಖುರ್ಚಿಗಳಲ್ಲಿ ಹೊಡೆದರು, ಏನು ಸ್ವಾಮಿ ಇದು? ಯಾರು ಅಡ್ಡ ಸಿಕ್ಕಿದರು, ಅವರನ್ನೆಲ್ಲಾ ಹೊಡೆದರು. ನಾವೆಲ್ಲಾ ಮನೆಯೊಳಗೆ ಹೋದರೆ, ಮನೆಗೆ ಕಲ್ಲು ಹೊಡೆದರು ಚಪ್ಪಲಿಯಲ್ಲಿ ಹೊಡೆದರು? ಇವುಗಳೆಲ್ಲಾ ಯಾರು? ನನಗೆ ಬಂದಿರುವ ಪ್ರಕಾರ, ಇದರಲ್ಲಿ ಎಲ್‌ಟಿಟಿಇ ನವರೂ ಸಹ ಇದ್ದಾರೆ ಎಂದು ಮಾಹಿತಿ ಇದೆ. ಎಲ್‌ಟಿಟಿಇನವರ ಕೈವಾಡ. ಯಾರೋ ಒಬ್ಬ, ಅವನ ಹೆಸರು ನನಗೆ ಸಮರ್ಪಕವಾಗಿ ಗೊತ್ತಿಲ್ಲ. ರಂಗನಾಥ್ ಎನ್ನುವವನು ಎಂದು ಹೇಳುತ್ತಾರೆ. ಅವನು ಎಲ್ಲಾ ಆರ್ಗ್ನೈಜ್ ಮಾಡಿದ್ದ ಎನ್ನುವುದನ್ನು ಹೇಳುತ್ತಾರೆ. ಎಲ್‌ಟಿಟಿಇ, ಶಿವರಾಸನ್ ಮುತ್ತತ್ತಿಯಿಂದ ಶಿವರಾಸನ್ ಮೊದಲೇನು ವಾಸ ಮಾಡುತ್ತಿದ್ದ, ಅಲ್ಲಿಂದ ಆ ಕಡೆಯೆಲ್ಲಾ ಕೂಡ, ಮತ್ತೆ ನಾವು ಅಲ್ಲಿ ನಮ್ಮ ಕೆಲಸವನ್ನು ಮುಗಿಸಿಕೊಂಡು ಮಳವಳ್ಳಿಗೆ ಬರುವಷ್ಟರಲ್ಲಿ ನಾಗೇಗೌಡರ ಸ್ನೇಹಿತರ ಮನೆಗೆ ಅನಾನಿಮಸ್ ಕಾಲ್, ಮುಗಿಸಿಬಿಡುತ್ತೇವೆ ಎಂದು ಹೇಳು ಎಂದು ಅನಾನಿಮಸ್ ಕಾಲ್ ಬಂತು. ಏನು ಸ್ವಾಮಿ ಇದು ನಡೆಯುತ್ತಿದೆ. ಆದರಿಂದ ನಾನು ಹೇಳುವುದು ಅಲ್ಲಿ ಮೊದಲು let there be law of the land ನೀವು

ಅದನ್ನು ಸಾಬೀತುಪಡಿಸಿ, ಈ ನೆಲದ ಕಾನೂನಿನಲ್ಲಿದೆ ಎಂದು ಸಾಬೀತುಪಡಿಸಿ. ವೀರಪ್ಪನ್ ಕಾನೂನನ್ನು ಕಿತ್ತು ಬಿಸಾಕಿ. ನಿರ್ದಯೆಯಿಂದ ಕ್ರಮ ತೆಗೆದುಕೊಳ್ಳಿ. ಇಲ್ಲಿ ಕ್ರಮ ತೆಗೆದುಕೊಳ್ಳಬೇಕಾಗಿರುವುದು. ನಾನು ಆಗಲೇ ಹೇಳಿದ್ದೇನೆ, ಮುಖ್ಯಮಂತ್ರಿಗಳು ಇರಲಿಲ್ಲ, ಒಂದು ವೇಳೆ, even if it amounts to violation of human rights, don't bother. You have to eleminate. You have to take a firm decision. ಇಲ್ಲದಿದ್ದರೆ, 30 ವರ್ಷಗಳಿಂದ ಅನುಭವಿಸಿದ್ದಾರೆ. ಇವತ್ತಿನ ದಿವಸ ಪರಿಮಳಾರವರು ಅನುಭವಿಸುತ್ತಿದ್ದಾರೆ. Let there be no moer parimalas in Karnataka. ಯಾರೂ ಕೂಡ ಇರಬೇಕಾಗಿಲ್ಲ. ಆದುದರಿಂದ ನಿರ್ದಾಕ್ಷಿಣ್ಯವಾಗಿ, ನಿರ್ದಯೆಯಿಂದ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ.

6.50 ಪಿ.ಎಂ

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಹರಿಯುತ್ತಿರುವ ನೋಟ್ಸ್ ಎಲ್ಲಾ 500 ರೂಪಾಯಿ ನೋಟ್ಸ್ ವೀರಪ್ಪನದ್ದು, ಆ ನೋಟುಗಳ ಚಾಲನೆ ಅಲ್ಲಿ ಕಾಣತ್ತಿರತಕ್ಕಂಥದ್ದು, ಆ ದುಡ್ಡು ಕೊಟ್ಟು ಇವೆಲ್ಲಾ ಮಾಡಿಸತಕ್ಕಂಥದ್ದು, ನಮ್ಮ ಡಾ: ರಾಜ್‌ಕುಮಾರ್‌ರವರನ್ನು ಕರೆದುಕೊಂಡು ಬರುವಾಗ ಸಾಕಷ್ಟು ಜನ ಪ್ರಯತ್ನ ಪಟ್ಟರು, ಅವರನ್ನು ಹೊರ ತಂದರು, ನಾವು ಮುಖ್ಯಮಂತ್ರಿಗಳೊಂದಿಗೆ ಒಪ್ಪಿಕೊಂಡಿದ್ದೆವು ಸುರಕ್ಷಿತವಾಗಿ ಅವರು ಬಂದರೆ ಸಾಕು ಎಂದು, ಏನು ಬೇಕೋ ಮಾಡಿ ಎಂದು, ಆದ್ದರಿಂದ ಹಿಂದಕ್ಕೆ ನಾನು ಹೋಗುವುದಿಲ್ಲ. ಆದರೆ ಅವನಿಗೆ ಇವರೇನು ಹೇಳಿದ್ದರೋ ಅದು ಗೊತ್ತಿಲ್ಲ ಅಲ್ಲಿ ನಿಗೂಡತೆ ಇದೆ. ಅವರಿಗೆ ಏನು ಆಶ್ವಾಸನೆಗಳನ್ನು ವೀರಪ್ಪನ್‌ಗೆ ಇವರು ಕೊಟ್ಟಿದ್ದರೋ ಬಿಡುಗಡೆ ಆಗುವಾಗ ಇವನಿಗೆ ಏನೇನು ಹೇಳಿದ್ದರು ಎನ್ನುವುದರ ಬಗ್ಗೆ ಪರಿಣಾಮ ಆಗಿರತಕ್ಕಂಥದ್ದು ಆ ಒಂದು ಕಾರ್ಯ ಇವರ ಮೇಲೆ, ನಾಗಪ್ಪನವರ ಮೇಲೆ ಅದು ಪ್ರತಿಬಿಂಬಿಸಿ ತೊಂದರೆಯಾಗಿರುವಂಥದ್ದು, ಡಾ: ರಾಜ್ ಕುಮಾರ್‌ರವರು ಬಂದರು, ನಾಗಪ್ಪ ಮಾರಡಗಿಯವರು ಬಂದರು, ಸ್ವಾಮಿ ನಮಗೆ ಇವರ ಹೇಳಿಕೆಗಳು ಇದುವರೆವಿಗೂ ಹೊರಬಂದಿಲ್ಲ, ಏತಕ್ಕಾಗಿ ಅವರುಗಳು ಬಾಯಿಮುಚ್ಚಿಸಿದ್ದಾರೆ? ಹೇಳಲಿ ಅವರು? ಎಲ್ಲಿದ್ದರು? ಎಲ್ಲೆಲ್ಲಿ ಅವನ ಹೈಡ್ ಔಟ್ಸ್ ಇದೆ, ಏನು ಐವತ್ತು ಇದೆಯೇ? ನೂರು ಇದೆಯೇ? ಏಕೆ ಆ ವಿಷಯ ಈಚೆಗೆ ಬರುವುದಿಲ್ಲ, ಇವತ್ತು ಮಾನ್ಯ ಚಂದ್ರೇಗೌಡರವರು ಹೇಳಿದರು, ಎಲ್ಲಾ ನಿಮಗೆ ಹೇಳಿ ಬಿಡುವುದಕ್ಕಾಗುತ್ತದೇನ್ರಿ ಎಂದು ಹೇಳದೆ ಸುಮ್ಮನೇ ಮುಚ್ಚಿಟ್ಟು ಕೊಂಡೇ ಪರಿಸ್ಥಿತಿ ನಿರ್ಮಾಣವಾಗಿರತಕ್ಕಂಥದ್ದು, ಕಾವೇರಿ ನೀರಿನ ವಿವಾದದಲ್ಲೂ ಸರ್ಕಾರ ಹೀಗೆ ಮಾಡಿತು, ಈ ಕೇಸ್‌ನಲ್ಲೂ ಕೂಡ ಸರ್ಕಾರ ನಾಗಪ್ಪನವರ ಅಪಹರಣದ ವಿಚಾರದಲ್ಲಿ ಕ್ಲಿಯರ್ ಆಗಿ ಏನು ಮಾಡುತ್ತೇವೆ ಅನ್ನುವ ತೀರ್ಮಾನ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ನಾಗಪ್ಪನವರು ಬರುತ್ತಾರೆ ಬಿಡಿ ಏನಾಗುತ್ತದೆ ಎನ್ನುವ ಹೋಪ್ಸ್, ಬರುತ್ತದೆ ಒಳ್ಳೆಯದಾಗುತ್ತದೆ, ಅವರನ್ನು ಕೇಳಿದಾಗಲೆಲ್ಲಾ ಬರುತ್ತದೆ. ಅವರದ್ದು ಏನೆಂದರೆ, ಅವನು ಯಾರಿಗೂ ಒತ್ತೆಯಾಳಾಗಿಟ್ಟುಕೊಂಡವರನ್ನು ಏನೂ ಮಾಡಿಲ್ಲ, ಆದುದರಿಂದ ಬಿಟ್ಟು ಕಳುಹಿಸಬಹುದು ಎನ್ನುವ ಒಂದು ತರಹ self conscious ಆಗಿ ಹೇಳಿದಂಥದ್ದು. ಹಾಗೇಯೇ ಮಾನ್ಯ ಗೃಹ

ಸಚಿವರು ಕೂಡ ಇಲ್ಲಿ ಬರುತ್ತಾರೆ ಹೋಗಿ ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ, ಆಗುತ್ತದೆ ಹೋಗಿ ಎಂದು ಹೇಳಿದ್ದರು. ಆದರೆ ಇವತ್ತು ಅವರ ಸಾವಿಗೆ ನಾನು ಕಾರಣನಲ್ಲ, ಎಂದು ವೀರಪ್ಪನ್ ಕ್ಯಾಸೆಟ್ ಕಳುಹಿಸಿದ, ಮಾನ್ಯ ಮುಖ್ಯಮಂತ್ರಿಗಳ ಪ್ರತಿಕ್ರಿಯಿಸಿದರು, ಹೌದು ನಾಗಪ್ಪನವರ ಸಾವಿಗೆ ನಾವು ಕಾರಣರಲ್ಲ ಎಂದರು, ಅಂದರೆ ಸರ್ಕಾರ ಅವರನ್ನು ಜೀವಂತವಾಗಿ ತರುವ ಪ್ರಯತ್ನದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ, ಸರ್ಕಾರದಲ್ಲಿ ಬೇಜಾವಬ್ದಾರಿತನ ತೋರಿಸಿದ್ದಾರೆ, ಆ ದೃಷ್ಟಿಯಿಂದ ಇವತ್ತು ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಏನೇನು ಲ್ಯಾಪ್ಸ್ ಇದೆ, ಏನೇನು ಆಯಿತು, ಇದಕ್ಕೆ ಕಾರಣವೇನು? ಮಣಿಯನ್ನು ಬಿಡದೇ ಡಿಲೇಯಾಗಿದ್ದಕ್ಕೆ ಆಯಿತಾ? ಮಣಿ ಹೋಗುವುದಿಲ್ಲ ಎಂದರೆ ಇನ್ಯಾರನ್ನು ಸಂಧಾನಕಾರರನ್ನಾಗಿ ಹೋಗಲು ಯಾರ ಹತ್ತಿರ ಇವರು ಮಾತನಾಡಿದರು? ಶಿವಸುಬ್ರಹ್ಮಣ್ಯಂ ಹತ್ತಿರ ಮಾತನಾಡಿದಿರಾ? ಮಣಿಯನ್ನು ಬಿಡಿಸದೇ ಇದ್ದರೆ ಬೇರೆ ನಮ್ಮ ಪೊನ್ನಾಚಿ ಮಹಾದೇವಸ್ವಾಮಿ ಹೋಗುವಂತೆ ಮಾಡಿದಿರಾ? ಇದೆಲ್ಲಾ ಡಿಲೇಯಾಗಿದ್ದೇ ಇವತ್ತು ಕಾರಣ. ಅವನಿಗೆ ಬೇಕಾಗಿರುವಂಥದ್ದು ದುಡ್ಡು ಇರಬಹುದು, ಅಥವಾ ಹಿಂದೆ ಇವರೇನು ಆಶ್ವಾಸನೆಗಳು, ಭರವಸೆಗಳು ಕೊಟ್ಟಿದ್ದರು ಅದನ್ನು ತೀರಿಸುವಂಥ ಕಾರ್ಯ ಮಾಡದೇ ಇರುವಂಥದ್ದು ಇರಬಹುದು, ಇಷ್ಟೇ ಕಾರಣ ಇವತ್ತು ಅವರು ನೂರಾರು ದಿನಗಳ ಕಾಲ ಕಾಡಿನಲ್ಲಿ ಇರಬೇಕಾಯಿತು, ಸ್ವಾಮಿ ನಾವು ಆ ಕಷ್ಟವನ್ನು ಅನುಭವಿಸಿ, ನಾವು ಅಲ್ಲಿಗೆ ಹೋಗಿದ್ದಾಗ ಹೇಳಿದ್ದರು, ಸಾರ್ ಇಲ್ಲಿ ಸಾಯಂಕಾಲ 6.30 ಗಂಟೆಯಾದ ಮೇಲೆ ಬೆಳಿಗ್ಗೆ 6.30 ಗಂಟೆಯವರೆವಿಗೂ ಇಲ್ಲಿ ಏನೂ ಇಲ್ಲ ಹಾಗೇಯೇ ವೀರಪ್ಪನ್ ಪ್ರದೇಶ, ಅಂದರೆ ನೈಟ್ ಅಲ್ಲಿ ಯಾರೂ ಮಾತನಾಡುವ ಹಾಗೆ ಇಲ್ಲವಂತೆ. ಬೆಳಕು ಬಂದಾದ ಮೇಲೆ ಸಂಜೆ 6.30ರವರೆಗೂ ಸ್ವಲ್ಪ ಭಯ ಭೀತಿ ಇಲ್ಲದೆ ಓಡಾಡುವಂಥ ಪರಿಸ್ಥಿತಿ, ಅದನ್ನೇ ಸರಿ ಮಾಡುವಂಥ ಕಾರ್ಯ ಆಗಬೇಕು ಎಂದು ನಾವು ಹೇಳುವಂಥದ್ದು, ಆದ್ದರಿಂದ ಸರ್ಕಾರ, ಏನೇ ನಾವು ಮಾತನಾಡುತ್ತೇವೆ ಮಾತನಾಡಬೇಕು ಎನ್ನುವ ಚಟ ಇಟ್ಟುಕೊಂಡು ಹೇಳುತ್ತಿದ್ದೇವೆ ಎಂದಲ್ಲ, ಇವತ್ತು ನಾವು ಈ ಕಾರ್ಯದಲ್ಲಿ ಯಶಸ್ವಿಯಾಗಿಲ್ಲ ಇದರಲ್ಲಿ ನಾವು ಲೋಪ ಮಾಡಿದ್ದೇವೆ ಮತ್ತೆ ಬಹಳ ಮುಖ್ಯವಾಗಿ ಸಾವಿನ ನಿಗೂಡತೆಯ ಬಗ್ಗೆ, ಅವರ ಸಾವು ಯಾವುದರಿಂದ ಆಯಿತು ಇದರ ಬಗ್ಗೆ ಸಾಕಷ್ಟು ಗೊಂದಲದ ಹೇಳಿಕೆಗಳನ್ನು ನಾವು ನೋಡಿದ್ದೇವೆ, ವೀರಪ್ಪನ್‌ನಿಂದ ಕೊಲೆಯಾಗಿದೆ, ಕೊಲೆಯಾಗಿಲ್ಲ ಎಂದು ಹೇಳುವಂಥ ವಿಷಯಗಳು, ನಮ್ಮಲ್ಲಿ ಆ ಪತ್ರಿಕೆಗಳಲ್ಲಿ ಬಂದ ಹಾಗೆ ತಮಿಳುನಾಡು ಎಸ್‌ಟಿಎಫ್ ನವರು ಹೊಡೆದಿದ್ದಾರೆ, ನಮ್ಮ ಎಸ್‌ಟಿಎಫ್ ಕಾರ್ಯಚರಣೆ ಮಾಡಿ ಅವರನ್ನು ಹೊಡೆದಿದ್ದಾರೆ, 4-5 ದಿವಸ ಅವರ ಶವವನ್ನೇ ಸಿಗದೆ ಎಲ್ಲೋ ಒಂದು ಜಾಗದಲ್ಲಿಟ್ಟು ಆಮೇಲೆ ತಂದು ಒಂದು ಬಂಡೆಗೆ ಒರಗಿಸಿ ಅಲ್ಲಿ ಸುರಕ್ಷಿತವಾಗಿದೆ ಎಂದು ತೋರಿಸುವಂಥದ್ದು, ಏನೂ ಆಗಿಲ್ಲ ಎಂದು ಹೇಳಿ, ಮಾನ್ಯ ಗೃಹ ಸಚಿವರು ಕೊಟ್ಟಂಥ ಹೇಳಿಕೆಗಳಲ್ಲಿ ಅವರಿಗೆ ಗುಂಡೇಟು ಎಲ್ಲಿ ಬಿದ್ದಿದೆ? ಪೋಸ್ಟ್‌ಮಾರ್ಟಂ ರಿಪೋರ್ಟ್ ಏನು? ಬಹಳ ಹತ್ತಿರದ ರೇಂಜ್‌ದಿಂದ ಹೊಡೆದಿದ್ದಾರಾ ಎನ್‌ಕೌಂಟರ್‌ನಲ್ಲಿ ಅವನಿಗೇನಾದರೂ ಆಗಿದಿಯೇ? ಏನಾಯಿತು ಎನ್ನುವುದರ ಬಗ್ಗೆಯೇ ಸಾಕಷ್ಟು ಸಂಶಯ. ಅದರ ನಿಗೂಡತೆಯನ್ನು ನಾವಿಂದು ಬೇಧಿಸಿ, ಏನಾಗಿದೆ ಅವರ ಸಾವಿಗೆ ಯಾರು ಕಾರಣರು ಎಂಬುದನ್ನು ಪತ್ತೆ ಮಾಡಬೇಕಾಗಿದೆ ಇವತ್ತು ನಾವು ಹೇಳಿದೆವು,

ಬಸವರಾಜ್ ಅವರ ಬಂಟ ಹೋಗಿದ್ದ, ಅವರ ಡೈರಿಯಲ್ಲಿ ಬರೆದಿದ್ದಾರೆ ಓಂ ನಮಃ ಶಿವಾಯ ಎಂದು ಪೊನ್ನಾಚಿ ಮಹಾದೇವ ಸ್ವಾಮಿ ಬಂದಿದ್ದ, ಆಯಿತು ನೆಕ್ಸ್ಟ್ ಡೇಟ್ ಕೊಟ್ಟಿದ್ದಾರೆ, ಬಸವರಾಜು ಎಂದು ಕಳುಹಿಸಿದ್ದರು, ಬಸವರಾಜನನ್ನು ಸರ್ಕಾರ ಕಳುಹಿಸಿತೇ? ರಾಜುಗೌಡರು ಕಳುಹಿಸಿದರು ಎಂದು ಬರೆದಿದ್ದಾರೆ, ಸರ್ಕಾರ ಹೇಳಿತ್ತಾ, ಬಸವರಾಜನನ್ನು ಕಳುಹಿಸಿಕೊಡಿ ಅವನು ಮಾತನಾಡಿ ಬರುತ್ತಾನೆ ಎಂದು ಹೇಳಿ, ಹಾಗೆಯೇ ಇವತ್ತು ಅವರ ಸಾವಿಗೆ ಯಾರು ಕಾರಣರು? ಗುಂಡು ಏಟು ಹೊಡೆದಿರುವಂಥದ್ದು ಯಾವುದು? ಇವತ್ತು ಅಲ್ಲಿ 150 ಬುಲೆಟ್‌ಗಳು ಸಿಕ್ಕಿರುವ ಜಾಗಗಳು ಇವೆ ಯಾರು ಅವರ ಕೊಲೆಗೆ ಕಾರಣರಾದವರು ಅದು ಆಚೆ ಬರಬೇಕೆಂದು ನಾವು ಒತ್ತಾಯ ಮಾಡಿದಾಗ, ಅದನ್ನು ಸರ್ಕಾರ ಆಗುವುದಿಲ್ಲ ಸಾಧ್ಯವಿಲ್ಲವೆಂದು ಹೇಳಿ, ಅದನ್ನೇ ಮರೆಮಾಚಿದರು, ಆದ್ದರಿಂದ ನಮ್ಮ ಒತ್ತಾಯ ಏನೆಂದರೆ, ಅವರ ಎನ್‌ಕೌಂಟರ್ ಏನಿದೆ ಶೂಟ್ ಮಾಡಿರತಕ್ಕಂಥ ರೇಂಜ್‌ಸ್ಸ್, ಶೂಟ್ ಮಾಡಿರತಕ್ಕಂಥ ಸಂಶಯ ಏನಿದೆ. ಯಾರು ಇದನ್ನು ಮಾಡಿದ್ದಾರೆ ಅದನ್ನು ಇವತ್ತು ಹೊರಗೆ ತರಬೇಕಾಗುತ್ತದೆ. ಅವರ ಶ್ರೀಮತಿಯವರು ಅದೇ ಹೇಳಿರುವುದು, ಆಗಿದೆ ನಮ್ಮ ಪದಾರ್ಥ ಇನ್ನು ಬರುವುದಿಲ್ಲ ನಮಗೆ ಸತ್ಯಾಂಶವಾದರೂ ಈಚೆಗೆ ಬರಲಿ, ನಮ್ಮ ಯಜಮಾನ್ರರಂತೂ ನೀವು ಉಳಿಸಲಿಲ್ಲ ಎಂದು ಪರಿಮಳರವರು ಹೇಳಿರುವುದು, ನನ್ನ ಗಂಡನ ಕೊಲೆಗೆ ಕಾರಣರಾದರವರು ಯಾರು? ಇದನ್ನಾದರೂ ಸರ್ಕಾರ ಸಿಬಿಐ ಗೆ ಒಪ್ಪಿಸಿ ತನಿಖೆಯ ಮೂಲಕ ಸತ್ಯಾಂಶ ಹೊರಗೆ ಬಿದ್ದರೆ ನನಗೆಷ್ಟೇ ತೃಪ್ತಿ ಎಂದು ಅವರು ಈಚೆಗೆ ಪರಿಪರಿಯಾಗಿ ಹೇಳಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ಬಸವರಾಜು ಜೊತೆಗೆ ಹೋಗಿದ್ದವನು ಯಾರು? ಅಲ್ಲಿ ಗುಂಡೇಟು ಬಿದ್ದಿರುವುದು, empty cartridges ಇರುವಂಥದ್ದು, ಸಾಕಷ್ಟು ಇವತ್ತು ಅಲ್ಲಿ ನಮ್ಮ ಎಸ್‌ಟಿಎಫ್ ಹೊಡೆದಿದ್ದಾರೆ ಎಂದು ಹೇಳುವಂಥದ್ದು, ಇವರ ಅಟೆಂಮ್ಪ್ಟ್ ಮಾಡಿ ಅಥವಾ ಇವರಿಬ್ಬರನ್ನು ಬಿಟ್ಟು ಇನ್ಯಾರಾದರೂ ಕಾಡಿನೊಳಗೆ ಪ್ರಯತ್ನಿಸಿ ಹಣ ಸಿಕ್ಕುತ್ತದೆ ಎಂದುಹೇಳಿ ನಾವು ಹೊಡೆದು ತರುತ್ತೇವೆ ಎಂದು ಹೋಗಿರುವವರು ಹೊಡೆದಿರುವವರು ಇರಬಹುದು, ಇವೆಲ್ಲಾ ಸಾಕಷ್ಟು ನಿಗೂಢತೆ ಇದೆ, suspicion, ಒಂದುರೀತಿಯಾದ ಸಂಶಯ ಇದೆ ಈ ಸರ್ಕಾರದಲ್ಲಿ ಏಕೆ ಇವರು ಒಪ್ಪುತ್ತಿಲ್ಲ? ಜುಡಿಷಿಯಲ್ ಪ್ರೋಬ್ ಮಾಡಲಿ ನಾವು ಬೇಡವೆಂದು ಹೇಳುವುದಿಲ್ಲ, ಅವರ ವ್ಯಾಪ್ತಿ ಬಹಳ ಕಡಿಮೆ ಇದೆ. ತಮಗೆ ಗೊತ್ತಿದೆ ನ್ಯಾಯಾಂಗ ತನಿಖೆಯಲ್ಲಿ ಅದರ ವ್ಯಾಪ್ತಿ ಎಷ್ಟು ಇರುತ್ತದೆ ಎಂದು, ಇಂಥ ಕ್ರಿಮಿನಲ್ ಇನ್‌ವೆಸ್ಟಿಗೇಷನ್ಸ್ ಮಾಡುವಾಗ ಬಹಳ ಬಿಗಿಯಾಗಿ, ಧಮಕಿ ಹಾಕಿ ಮಾಡುವಂಥವರು ಬೇಕಾಗುತ್ತದೆ. ಕಾಡಿನಲ್ಲಿ ಹೋಗಿ ಎವಿಡೆನ್ಸ್‌ನ್ನು ತೆಗೆದುಕೊಂಡು ಸಾಕಷ್ಟು ಸಾಕ್ಷಾಧಾರಗಳನ್ನು ಪಡೆದು ಅವರನ್ನು ಯಾವ ರೀತಿ ಟ್ಯಾಕಲ್ ಮಾಡುವುದು ಇಲ್ಲಿ ಸಾಧ್ಯವಾಗುವುದಿಲ್ಲ. ಆ ಮಟ್ಟಕ್ಕೆ ಜುಡಿಷಿಯಲ್ ಪ್ರೋಬ್ ಮಾಡುವುದಕ್ಕೆ ಆಗುವುದಿಲ್ಲ, ಎನ್‌ಕ್ವಾಯರಿಮಾಡುವುದಕ್ಕಾಗುವುದಿಲ್ಲ, ಅದೇ ಸಿಬಿಐ ಗೆ ಆದರೆ ಆ ಒಂದು ಶಕ್ತಿ ಇದೆ ಅವರು ಮಾಡುತ್ತಾರೆ ಅದು ಆಗುತ್ತದೆ ಎಂದು ಹೇಳಿ ಇವತ್ತು ನಾವು ಒತ್ತಾಯ ಮಾಡುತ್ತಿರುವುದು. ಏಕೆ ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಹಿಂಜರಿಯುತ್ತಾರೆ ಎಂಬುದು ನಮಗೆ ಅರ್ಥವಾಗಲಿಲ್ಲ. ಅವರು ಬಹಳ ಪಾರದರ್ಶಕವಾದ ಆಡಳಿತ, ಟ್ರಾನ್ಸ್ ಪರೆನ್ಸಿ, ಸಾಕಷ್ಟು ಓಪನ್ ಮೈಂಡ್

ಇಟ್ಟಿಕೊಂಡಿರತಕ್ಕಂಥವರು, ಈ ರಾಜ್ಯದ ಒಂದು ಕೋಟಿ ಜನ ಮಾತನಾಡುತ್ತಾರೆ? ಇದರಲ್ಲಿ ಏನೋ ಇದೆ ಆದ್ದರಿಂದ ಇವರ ಸರ್ಕಾರ ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ, ಮುಖ್ಯಮಂತ್ರಿಗಳು ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ ಇವರದ್ದು ಏನೋ ಕೈ ಚಳಕ ಇದೆ, ಇವರದ್ದು ಏನೋ ಹಣದ ವ್ಯವಹಾರ ಆಗಿದೆ, ಇವರೇನೋ ತೊಂದರೆ ಮಾಡಿದ್ದಾರೆ, ನಾಗಪ್ಪನವರ ಸಾವಿಗೆ ಇವರೇ ಕಾರಣವಾಗಿರಬಹುದು ಎಂಬ ಸಂಶಯ ಜನರಲ್ಲಿ ಇದೆ ಯಾರು ಕಾರಣವಾಗಿರುವುದು ಎಂಬುದು ಈಚೆಗೆ ಬರಲಿ, ಸಿಬಿಐ ಗೆ ಕೊಟ್ಟರೆ ಏನು? ಸಪರೇಟ್ ಏಜೆನ್ಸಿ ಮಾಡುವಂಥ ಒಂದು ತನಿಖೆಗೆ ಏಕೆ ಇವರು ಅಡ್ಡಿಪಡಿಸುತ್ತಿದ್ದಾರೆ ಎಂಬುದನ್ನು ಇವತ್ತು ನಮ್ಮ ಐದು ಕೋಟಿ ಕನ್ನಡಿಗರು ಹಾಗೂ ಇಡೀ ರಾಷ್ಟ್ರವೇ ನೋಡುತ್ತಾ ಇದೆ.

ಪ್ರೊ: ಬಿ.ಕೆ.ಚಂದ್ರಶೇಖರ್: ಐದು ಕೋಟಿ ಜನ ಏನೆಂದು ಹೇಳುತ್ತಾರೆಂದು ತಾವು ಸಮೀಕ್ಷೆ ಮಾಡಿಸಿದ್ದಿರಾ?

ಶ್ರೀ ಬಿ.ಎನ್.ಬಚ್ಚೇಗೌಡ: ಸ್ವಾಮಿ ನಮ್ಮ ಕಡೆಗೆ ಜನ ಮಾತನಾಡುವುದು, ಏಕೆಂದರೆ, ನಮ್ಮ ವೋಟಿಂಗ್ ಪ್ಯಾರ್ಟನ್ ಬೀದರ್‌ನಿಂದ ವೇವ್ ಎಂದು ವೋಟು ಕೊಟ್ಟರೆ ಕೋಲಾರದವರೆವಿಗೂ ಹಾಗೆಯೇ ಓಡುತ್ತದೆ ನಿಮ್ಮ ಕತೆಯೂ ಮುಂದೆ ಅದೇನೇ ಹಾಗೆಯೇ ಇದು ಜನಸಾಮಾನ್ಯರ ಬಾಯಲ್ಲಿ ಕೇಳಿರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಹಾಗೇ ಹೇಳಬೇಡಿ ಬೀದರ್‌ನಲ್ಲಿ ಕೊಟ್ಟರೆ ಈ ಕಡೆ ಬರುತ್ತದೆ ಎಂದು ಹೇಳಬೇಡಿ, ಬೀದರ್‌ನಲ್ಲಿ ಬಿಜೆಪಿಗೆ ಕೊಟ್ಟಿದ್ದು, ನಿಮ್ಮಲ್ಲಿ ಜನತಾದಳಕ್ಕೆ ಕೊಟ್ಟಿದ್ದು ನಮ್ಮಲ್ಲಿ ಕಾಂಗ್ರೇಸ್‌ಗೆ ಕೊಟ್ಟಿದ್ದು.

ಶ್ರೀ ಬಿ.ಎನ್.ಬಚ್ಚೇಗೌಡ: ಈ ಸಾರಿ ನಿಮ್ಮ ವೇವ್ ಇತ್ತು, No, none congress wave was there otherwise ಅಷ್ಟು ಜನ ನೀವು ಬರುತ್ತಿರಲಿಲ್ಲ There was congress wave ಇಲ್ಲವೆಂದು ಹೇಳುವುದಿಲ್ಲ, 1994ನಲ್ಲಿ ನಮ್ಮ ವೇವ್ ಇತ್ತು it was a Janatha Dal wave ನೆಕ್ಸ್ಟ್ ನಮ್ಮದು ಬರುತ್ತದೆ ಜನತಾದಳದ ವೇವ್.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾವ ಜನತಾದಳ? ಆಲ್ ಇಂಡಿಯಾ ಜನತಾದಳವೋ ಜನತಾ (ಎಸ್), ಜನತಾ (ಯು), ಅಥವಾ ಎರಡು ಸೇರಿ (ಯುಎಸ್ಸೋ)

ಶ್ರೀ ಬಿ.ಎನ್.ಬಚ್ಚೇಗೌಡ: ನಾವು ಸೆಕ್ಯೂಲೆರ್‌ಫೋರ್ಸ್‌ಸ್ ಅಲ್ಲಸಾರ್ ಆಲ್ ಇಂಡಿಯಾ ಜನತಾದಳ ನಾವು, ಮತೀಯ ಶಕ್ತಿಗಳು, ಕೋಮುಶಕ್ತಿಗಳ ವಿರೋಧವಾಗಿ ಒಂದು ಸಂಘಟನೆ ಇರಲಿ ಎಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಬ್ಬರೂ ಅದಕ್ಕೆ ಇನ್ನೂ ಒಪ್ಪಿಗೆಯೇ ಕೊಟ್ಟಿಲ್ಲ ನೀವು, ಸಿಂಧ್ಯಾ ಸಾಹೇಬ್ರು ಇಬ್ಬರೂ ಹೇಳುತ್ತಲೇ ಇದ್ದೀರಿ, ಮಾನ್ಯ ಬೈರೇಗೌಡರವರು ಏನು ಹೇಳುತ್ತಾರೆ ಬೇಕಾದರೆ ನೋಡೋಣ, ಏಕೆಂದರೆ, ಅವರು ಜನತಾದಳದ (ಯು) ಅಧ್ಯಕ್ಷರು, ಏನು ಆಲ್ ಇಂಡಿಯಾ ಜನತಾದಳದ ಅಧ್ಯಕ್ಷರೋ, ಏನು 'ಯು' ದ ಅಧ್ಯಕ್ಷರೋ ಅವರು ಹೇಳಲಿ. ಏಕೆಂದರೆ ಹಿರಿಯ ನಾಯಕರು.

ಶ್ರೀ ಬಿ.ಎನ್.ಬಚ್ಚೇಗೌಡ: ಜತನಾದಳ ಒಂದಾದರೆ ನಿಮ್ಮ ಪರಿಣಾಮ ಏನು ಎಂಬುದು ನಿಮಗೆ ಗೊತ್ತಿದೆ. ಏಕೆಂದರೆ ಶಿವಕುಮಾರ್‌ರವರು ಇದರ ಹೊಡತ ಅನುಭವಿಸಿದ್ದಾರೆ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಏನೂ ಇಲ್ಲ, ಒಂದಾದರು ಅಷ್ಟೆ ನಿಮ್ಮ ಹಣೆಬರಹ, ಎರಡಾದರೂ ಅಷ್ಟೆ. ನೀವು ಮುಂದೆ ಛಿದ್ರ ವಾಗುವರೇ ಹೊರತಾಗಿ ಒಗ್ಗಟ್ಟಾಗುವುದಲ್ಲ.

ಶ್ರೀ ಡಿ.ಬಿ.ಚಂದ್ರೆಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಭೈರೇಗೌಡರೆ, ಸೊನ್ನೆಯನ್ನು ಅರ್ಧ ಮಾಡಿದರೆ (ಯು) ಪೂರ್ತಿಮಾಡಿದರೆ ಅದು ಏನಾಗುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಚಂದ್ರೇಗೌಡರು ಈ ಕಡೆ ಇದ್ದರು ಆಗ ಆ ಕಡೆ ಹೋಗಿ ಆ ತರಹ ಮಾತನಾಡುತ್ತಾರೆ, ನಾವು ಏನು ಹೇಳೋಣ. ಇರಲಿ ಅವರಿಗೆ ಒಳ್ಳೆಯದಾಗಿದೆ ಆ ಕಡೆಗೆ ಹೋಗಿ, ಇರಲಿ ಸ್ವಾಮಿ ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಅವರಿಗೆ ಖಾತೆ ಒಳ್ಳೆಯದು ಸಿಕ್ಕಿಲ್ಲ, ಅವರೂ ಆಸ್ಪಿರೆಂಟ್ ಮುಖ್ಯಮಂತ್ರಿಗಳು ಆಗಬೇಕು ಎಂದು ಆ ಸೀಟ್ ಮೇಲೆ ಆಕಾಂಕ್ಷಿಗಳು, ಅವರು ಬೇಸರವಾಗಿದ್ದಾರೆ, ಅವರಿಗೆ ಮುಂದೆ ಒಳ್ಳೆಯದಾಗಲಿ, ಧನುರ್ಮಾಸ ಮುಗಿದ ಮೇಲೆ...

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಮೂರು ವರ್ಷಗಳಿಂದ ನೀವು ಇದನ್ನೇ ಆಶಿಸಿಕೊಂಡು ಬಂದಿದ್ದೀರಿ, ನಾನು ಈ ಸೀಟ್ ಮೇಲೆ ಕುಳಿತ ಮೇಲೆ, ಇಂತಹ ಭಾಷಣಗಳು ಎಷ್ಟು ನಡೆದವೋ ಗೊತ್ತಿಲ್ಲ, ಮೂರು ವರ್ಷ ಮುಗಿದು ನಾಲ್ಕನೇ ವರ್ಷಕ್ಕೆ ಹೋಗುತ್ತಿದ್ದೇನೆ. ಇನ್ನು ಎಷ್ಟು ನಡೆಯಬಹುದು ಗೊತ್ತಿಲ್ಲ ನೆರೆದು ನೆರೆದು ಪಾಪ ನಿಮಗೆ ಮುಪ್ಪಾಯಿತು ಅಷ್ಟಕ್ಕೆ, ನೀವು ಹೇಳಿದಿರಿ, ನಿಮ್ಮ ಕುರ್ಚಿ ಅಲುಗಾಡುತ್ತಾ ಇದೆ, ಎಷ್ಟು ದಿವಸ ನಡೆಯುತ್ತಿದೆ, ಇಲ್ಲಿ ಎಲ್ಲಾ ರೆಡಿಯಾಗಿ ಕುಳಿತಿದ್ದಾರೆ, ನಿಜ, ರೆಡಿಯಾಗಿ ಎಲ್ಲರೂ ಕುಳಿತಿದ್ದೇವೆ. ಅವರವರಿಗೆ ಕೊಟ್ಟಿರತಕ್ಕಂಥ ಕೆಲಸಗಳನ್ನು ಮುಂದುವರೆಸಲಿಕ್ಕೆ, ಮಾಡಲಿಕ್ಕೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಉತ್ತರವನ್ನು ಹೇಳಬೇಕಾದವರು ಮಾನ್ಯ ಚಂದ್ರೇಗೌಡರು, ಅವರ ಆಸೆ ಇಲ್ಲ, ಅಥವಾ ಇದೆ ಎನ್ನುವುದರ ಬಗ್ಗೆ ಅವರು ಉತ್ತರ ಹೇಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ನಡೆಸುವವರು ಹೇಗೆ ಹೇಳಬೇಕು. ನಿಮಗೆ ಕೇಳಿದ ಪ್ರಶ್ನೆಗೆ ಉತ್ತರ ಹೇಳಲಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳೂ ಸಹ ಹೇಳಿದ್ದನ್ನು ಕೇಳಿ ನಾನು ಸಂತೋಷ ಪಡುತ್ತೇನೆ, ಅವರವರ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆಂದು ಆದರೆ ಅವರಿಗೆ ಶನೇಶ್ವರನ ಕಾಟವಾಗಿ ಅವರು ತಿರುನಾಲ್ಲಾರ್‌ಗೆ ಹೋಗಿದ್ದರು. ನಾನು ಕೇಳಿದೆ ಅಲ್ಲಿಗೇಕೆ ಹೋದರು, ಇಲ್ಲಿ ಮೂರು-ನಾಲ್ಕು ಜನ ಶನೇಶ್ವರಗಳು ಇದ್ದಾರೆ, ಇವರನ್ನು ಸರಿ ಮಾಡಿಕೊಂಡರೆ ಸಾಕು, ಅವರು ಹೇಗಲೇರಿಲ್ಲ, ಇವರು ಹೇಗಲೇರಿದ್ದಾರೆ ಎಂದು ಹಾಗೆಯೇ ಈ ಚಂದ್ರೇಗೌಡರು ಸರಿಯಾಗಿ ಸಹಕಾರವನ್ನು ಕೊಟ್ಟು, ಮಾನ್ಯ ರಂಗನಾಥವರು ಹಾಗೂ ಶ್ರೀ ಖರ್ಗೆಯವರು ಸಹಕಾರವನ್ನು ಕೊಟ್ಟು, ಪಾಪ ಧರ್ಮಸಿಂಗ್‌ರವರು ಹಾಗಿಲ್ಲ ಅವರು ಕೊಡುತ್ತಾರೆ. ಇವರೆಲ್ಲಾ ಸಹಕಾರವನ್ನು ಕೊಟ್ಟಿದ್ದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಏನೂ ತೊಂದರೆಯಾಗುತ್ತಿರಲಿಲ್ಲ. ಆದರೂಸಹ ಕಷ್ಟಪಟ್ಟು ಮೂರುವರ್ಷ ನಿರ್ವಹಿಸಿದ್ದಾರೆ.

ಅವರ ಶ್ರಮ ಅವರಿಗೇ ಗೊತ್ತು ಅದು ಮುಳ್ಳಿನ ಹಾಸಿಗೆ, not roses ಹೂವಿನ ಹಾಸಿಗೆ ಅಲ್ಲ, ಮುಳ್ಳಿನ ಹಾಸಿಗೆಯಾಗಿ ಪರಿಣಾಣವಾಗಿದೆ ಸ್ವಾಮಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇದನ್ನು ಹೀಗೆಯೆ ಹೇಳಿಕೊಂಡು ಹೇಳಿಕೊಂಡು ಕಾಲವನ್ನು ಕಳೆಯುವುದು ಅವರ ಕಾಟ, ಇವರ ಕಾಟ ಎಂದು ಹೇಳುವುದು, ನಾವೆಲ್ಲರೂ ಒಗ್ಗಟ್ಟಾಗಿ ಕೆಲಸವನ್ನು ಮಾಡಿದ್ದಕ್ಕಾಗಿ ಇವತ್ತು ನೀವು ಚಿದ್ರ ಚಿದ್ರವಾಗಿ ಹೋಗುತ್ತಿದ್ದೀರಿ. ಒಂದು ವೇಳೆ ನಾವು ಹಾಗೆಯೇ ಆಗಿದ್ದರೆ ಇವತ್ತಿನ ದಿವಸ (ಯು)(ಓ)(ಆರ್) (ಆಲ್ ಇಂಡಿಯಾ) ಆಗುತ್ತಿರಲಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಅವರಿಗೆ ಏನು ಹೇಳಿದರೂ ಅವರು ಏನೂ ಹೇಳುವುದಕ್ಕೆ ಸಿದ್ದರಿಲ್ಲ ಸ್ವಾಮಿ. ಕಾಡು ಪಾಡು ಎಲ್ಲವನ್ನೂ ಹೇಳಿದೆ, ವೀರಪ್ಪನ್ ಅಲ್ಲೇ ಇರುವುದು, ಅಡಗು ತಾಣ ಎಂದು ಹೇಳಿದೆ ಆದರೂ ಸಹ ನೀವು ಏನಾದರೂ ಮಾಡಿಕೊಳ್ಳಿ ಎಂದು ಸುಮ್ಮನಾದರೂ ನಮ್ಮ ಪಾಡಿಗೆ ನಮ್ಮನ್ನು ಬಿಟ್ಟುಬಿಡಿ ಅನ್ನುತ್ತಾರೆ.

ಶ್ರೀ ಕೆ.ಹೆಚ್.ರಂಗನಾಥ(ಅರಣ್ಯ ಸಚಿವರು): ಮಾನ್ಯ ಉಪಾಧ್ಯಕ್ಷಕರೆ, ನಮ್ಮ ಇಲಾಖೆಯ ಯಾರೋ ಬಡಪಾಪಿ ಅವನ ಹತ್ತಿರ ಇದ್ದು ನೋಡಿಕೊಂಡು ಇದ್ದರೆ, ಅವನನ್ನು ನೀವು ವಾಪಸ್ಸು ತೆಗೆದುಕೊಳ್ಳಿ ಎಂದು ಬರೆದು ಬಿಟ್ಟಿದ್ದೀರಿ. ಹಾಗೂ ಹೇಳಿಬಿಟ್ಟಿದ್ದೀರಿ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಆದ್ದರಿಂದ ಇದಕ್ಕೆ ನಾವು ಬಹಳ ಒತ್ತಾಯವನ್ನು ತರತಕ್ಕಂಥದ್ದು, ಈ ಅಧಿವೇಶನದಲ್ಲಿ ತಾವೂ ಚರ್ಚೆ ಮಾಡುವುದಕ್ಕೆ ಬಹಳ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಇದಕ್ಕೆ ವಿಶೇಷವಾದ ಅಧಿವೇಶನವನ್ನು ಕರೆದು, ಸಾಕಷ್ಟು ವಿಷಯಗಳನ್ನು ಸದಸ್ಯರು ಪ್ರಸ್ತಾಪ ಮಾಡಲಿ, ಈ ಅನುಭವದ ಹಿನ್ನೆಲೆಯಲ್ಲಿ, ಏನು ಆಗಿದೆ ಎನ್ನುವುದರ ಬಗ್ಗೆ ಅವಕಾಶವನ್ನು ಕೊಟ್ಟಿದ್ದಾರೆ ಸ್ವಾಮಿ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಅವರು ಹೆಚ್ಚಿನ ಮನಸ್ಸನ್ನು ಕೊಟ್ಟು, ಇವತ್ತು ನಾವು ಏನು ಒತ್ತಾಯವನ್ನು ತರುತ್ತಿದ್ದೇವೆ, ಇವತ್ತು ಇದು ಚರ್ಚೆಯಾಗಿ, ಇದು ತೀರ್ಮಾನವಾಗಬೇಕು, ನ್ಯಾಯಾಂಗ ತನಿಖೆ ಬಿಟ್ಟು, ಅವರು ಮರು ಪರಿಶೀಲನೆ ಮಾಡಬೇಕು. ಈಗಾಗಲೇ ಆ ಸದನದಲ್ಲಿ ಹೇಳಿಬಿಟ್ಟಿದ್ದಾರೆ. ಮಾನ್ಯ ಖರ್ಗೆಯವರು ಹೇಳಿದ್ದಾರೆ. ಇದು ಸಾಧ್ಯವೇ ಇಲ್ಲ, ಇದನ್ನು ನಾವು ಕೊಡುವುದಿಲ್ಲ, ಸಿಬಿಐ ಗೆ ಒಪ್ಪಿಸುವುದಕ್ಕೆ ಸಾಧ್ಯವಿಲ್ಲ, ಇದರ ಬಗ್ಗೆ ತೀರ್ಮಾನವಾಗಿದೆ ಕ್ಯಾಬಿನೆಟ್‌ನಲ್ಲಿ ಎಂದು, ಶ್ರೀ ಕಾಗೋಡು ತಿಮ್ಮಪ್ಪನವರು ಇನ್ನೊಂದು ತರಹ ಚೆನ್ನೈನಲ್ಲಿ ಹೇಳಿದ್ದಾರೆ ಇವತ್ತು ಇಲ್ಲಿ ನಮಗೆ ಏನು ಹೇಳುತ್ತಾರೆಂಬುದು ಗೊತ್ತಿದೆ. ಅದಕ್ಕೆ ಅದನ್ನು ಹೇಳದೆ,

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ. ಒಬ್ಬ ಹಿರಿಯ ಮಂತ್ರಿಗಳು ನಮ್ಮ ರಾಜ್ಯದ ಪ್ರತಿನಿಧಿಗಳಾಗಿ ಚೆನ್ನೈಗೆ ಹೋಗಿರತಕ್ಕಂಥದ್ದು ಆ ಸಮಯದಲ್ಲಿ ಪಂಡರಿಬಾಯಿವರನ್ನು ನೋಡುವುದಕ್ಕೆ ಹೋದಾಗ, ಅವರನ್ನು ಯಾರೋ ಕೇಳಿದರು ಎಂದು ಹೇಳಿ, ಇವರು ಬಹಳ ಕರಾರುವಕ್ಕಾಗಿ ಇನ್ನು 15 ದಿವಸದೊಳಗಾಗಿ ಆ ಮರ್ಡರ್ ಕೇಸ್ ಪತ್ತೆಯಾಗುತ್ತದೆ. ನಾವು ಆಗಲೇ ಒಬ್ಬ ಅಧಿಕಾರಿಯನ್ನು ನೇಮಕ ಮಾಡಿದೇವೆ, ವರದಿ ಬರುತ್ತದೆಂದು ಹೇಳಲಿಕ್ಕೆ ಇವರಿಗೆ ಏನು ಹಕ್ಕಿದೆ? ಇದಲ್ಲೆ ಪೂರ್ವನಿಯೋಜಿತವೇ ಹಾಗಾದರೆ? ಏನು 15 ದಿವಸದಲ್ಲಿ ಕೊಡುವುದಕ್ಕಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಅವರು ಸದನಕ್ಕೆ ಬರುತ್ತಾರೆ, ಅವರು ಕ್ಲಾರಿಫೈ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಉಪಾಧ್ಯಕ್ಷರೆ, ಕ್ಲಾರಿಫೈ ಮಾಡುವುದು ಏನೂ ಇಲ್ಲ. ಇವರು ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ. ಹೇಳಿ ಖರ್ಗೆಯವರೇ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ವ್ಯತ್ಯಾಸಗಳು ಆಗುತ್ತಿರುತ್ತವೆ ಅದೇನೆ ರಿಸರ್ವ್ ಆಗಿ ಅವರು ಹೇಳಿದ್ದಾರೋ ಇಲ್ಲವೋ ಎನ್ನುವುದನ್ನು ಕ್ಲಾರಿಫೈ ಮಾಡಿಕೊಳ್ಳಿ

ಶ್ರೀ ಡಿ.ಜಿ.ಆರ್.ಸಿಂದ್ಯಾ: ಮಾನ್ಯ ಗೃಹ ಸಚಿವರು ಅವರನ್ನೇ ನಂಬುವುದಾದರೆ ನಂಬಿ, ನಮ್ಮದೇನೂ ತಕರಾರು ಇಲ್ಲ. ನೀವು ಅವರನ್ನು ನಂಬಬೇಕು ನಂಬಿ, ನಮಗೆ ನೀವು ನಂಬಬೇಡಿ. ನಾನು ಸ್ವತಃ ಉದಯ ಟಿವಿ ಯಲ್ಲಿ ಕೇಳಿರತಕ್ಕಂಥದ್ದು, ಬೇರೆ ಯಾರೂ ಹೇಳಿದ್ದಲ್ಲ. ನನಗೆ ಬಹಳ ಬೇಜಾರಾಯಿತು. ಪಾಪ ಇವರು ನನಗಿಂತ 10 ವರ್ಷ ಮೊದಲು ಅಸೆಂಬ್ಲಿಗೆ ಎಂಟರ್ ಆದವರು. ಇದರ ಬಗ್ಗೆ ಡಿಬೇಟ್ ಆಗುತ್ತಿದೆ, ಡಿಬೇಟ್ ಆಗುತ್ತಾ ಇರತಕ್ಕಂಥ ಸಂದರ್ಭದಲ್ಲಿ ಇಷ್ಟೊಂದು ಸೂಕ್ಷ್ಮವಾಗಿ ಇರತಕ್ಕಂಥ ಮ್ಯಾಟರ್‌ನ್ನು, in another fifteen days it will be over, the report will come ಏನು ಹಾಗೆಂದು ಹೇಳಿದರೆ? ಬೆಳಿಗ್ಗೆ ಮಾನ್ಯ ರಾಜುಗೌಡರಿಗೆ ಯಾವ ರೀತಿ ಸದನದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಕೊನೆಯಲ್ಲಿ ಒಂದು ಹೇಳಿಕೆಯನ್ನು ಕೊಡಿ ಎನ್ನುವ ಸೂಚನೆಯನ್ನು ಕೊಟ್ಟಿದ್ದೀರಿ ಅದೇ ರೀತಿ ಎಲ್ಲಾ ಮಂತ್ರಿಗಳಿಗೂ ತಾವು ಒಂದು ಸೂಚನೆಯನ್ನು ಕೊಡಬೇಕು ಎನ್ನತಕ್ಕಂಥ ವಿನಂತಿಯನ್ನು ಮಾಡುತ್ತೇನೆ, ಸ್ವಾಮಿ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೂ ಇತ್ತೀಚೆಗೆ ಸಿಆರ್‌ಪಿಎಫ್ ಹೆಡ್ ಹೇಳಿದ್ದಾರೆ, ಅಲ್ಲಿ ನಾವು ಆಪರೇಶನ್ಸ್ ಮಾಡುವುದಕ್ಕೆ ರೆಡಿ ಇದ್ದೇವೆ ನಾವು ಅವನನ್ನು ಹಿಡಿಯುತ್ತೇವೆ. ರಾಜ್ಯ ಸರ್ಕಾರದ ಸಹಕಾರ ಇಲ್ಲ, ಎಸ್‌ಟಿಎಫ್ ನಮಗೆ ಏರಿಯಾ ಆಫ್ ಆಪರೇಶನ್ ಕೊಡುತ್ತಿಲ್ಲ. ಇವೆಲ್ಲವನ್ನೂ ಅವರು ಹೇಳಿಕೊಂಡಿದ್ದಾರೆ. ನಾವು ಆಗ್ರಾ ಇನ್ನು ಅನೇಕ ಕಣಿವೆಗಳಲ್ಲಿ, ಹಿಂದೆ ಚಂಬಲ್‌ಕಣಿವೆನಲ್ಲಿ ಮಾನ್‌ಸಿಂಗ್ ಎನ್ನತಕ್ಕಂಥವರನ್ನು ಹಿಡಿದಿದ್ದೇವೆ. ಆದಕ್ಕಾಗಿ ಇವರು ಅವಕಾಶವನ್ನು ಕೊಡಲಿ, ಇವರನ್ನು ಹಿಡಿದು ತರುತ್ತೇವೆ ಎಂದು ಹೇಳಿದ್ದಾರೆ ಹಿಡಿಯುವುದಕ್ಕೆ ಸುಲಭ ಸ್ವಾಮಿ, ಕಷ್ಟವೇನೂ ಇಲ್ಲ. ಅಲ್ಲಿರುವ ಲೋಕಲ್ ಪೊಲೀಸ್‌ರನ್ನು ಇವರು ಎಂಗೇಜ್ ಮಾಡಿಕೊಂಡರೆ ನಮ್ಮ ಪ್ರಯತ್ನವನ್ನು ಸೀರಿಯಸ್ಸಾಗಿ ಮಾಡಬೇಕೆಂದು ಇದ್ದರೆ, ಮಾನ್ಯ ಗೃಹ ಸಚಿವರು ಕುಳಿತುಕೊಂಡು ಅವರ ಅಧಿಕಾರಿಗಳಾದ ಶ್ರೀನಿವಾಸಲು, ಮಡಿಯಾಳ್ ಇದ್ದಾರೆ. ಇಲ್ಲಿ ಕುಳಿತುಕೊಂಡು ಅವರು ಅಡ್‌ವೈಸ್ ಕೊಡುವುದು ಅಲ್ಲ, ಅಲ್ಲಿ ಹೋಗಿ ಸ್ಥಳದಲ್ಲಿ ಕುಳಿತುಕೊಂಡು ಏನು ಮಾಡಬೇಕು ಆಪರೇಶನ್ಸ್ ಎಂದರೆ ಇದು ಯಶಸ್ವಿಯಾಗುತ್ತದೆ. ಕಮಿಟ್‌ಮೆಂಟ್ ಇರತಕ್ಕ ಆಫೀಸರ್ಸ್ ಅವರನ್ನು ಹಾಕಿದರೆ ಹಿಡಿಯುತ್ತಾರೆ ಇದನ್ನು ಬಿಡಬಾರದು ಸ್ವಾಮಿ. ಮಾನ್ಯ ಖರ್ಗೆಜಿಯವರು ಹಿಂದೆ ಹೇಳಿದರು ದಿ. ನಾಗಪ್ಪನವರನ್ನು ಮೂರು ದಿವಸದಲ್ಲಿ ವೀರಪ್ಪನನ್ನು ಹಿಡಿಯುತ್ತೇವೆಂದು ಹೇಳಿದ್ದರು, 21 ದಿವಸವಾಯಿತು. 21 ದಿವಸದಲ್ಲಿ ಹಿಡಿಯುವುದಕ್ಕೆ ಏನು ಪ್ರಯತ್ನಗಳಾಗಿದೆ ಅವರದ್ದು ಏನೂ ಪ್ರಯತ್ನವಾಗಲಿಲ್ಲ ಅವನನ್ನು ಶವವಾಗಿ ತರುತ್ತೇವೆಂದು ಹೇಳಿದರು ಮಾನ್ಯ

ಗೃಹ ಸಚಿವರು ಅಥವಾ ಅವನನ್ನು ಹಾಗೆಯೇ ಹಿಡಿದು ತರುತ್ತೇವೆಂದು ಹೇಳಿದ್ದರು. 21-22 ದಿವಸವಾಯಿತು ಏನೂ ಮಾಡಲಿಲ್ಲ. ಹೀಗೆ ಮತ್ತೆ ಮಾತನಾಡಿ ಹೋಗುವುದು. ಸದನದ ಕಲಾಪಗಳು ಮುಗಿಯುತ್ತದೆ. ಮತ್ತೆ ಸುಮ್ಮನೆಯಾಗಿ ಬಿಡುವುದು. ಹಾಗೆಯೇ ಇವತ್ತು ಸಿಆರ್‌ಪಿಎಫ್‌ಗೆ ಕೊಡುತ್ತಾರೋ ಅಥವಾ ಕೇಂದ್ರ ಸರ್ಕಾರದ ನೆರವನ್ನು ಪಡೆಯುವಂಥದ್ದು, ತಮಿಳುನಾಡಿನ ಎಸ್‌ಟಿಎಫ್‌ನ ಆಕ್ಷನ್, ಅಥವಾ ನಮ್ಮ ಕಡೆ ಬಂದರೆ ನಾವು ಏನು ಮಾಡಬೇಕು, ಜಂಟಿ ಆಪರೇಶನ್ಸ್ ಸಮನ್ವಯವಿಲ್ಲ ಸ್ವಾಮಿ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಮಾನ್ಯ ಉಪಾಧ್ಯಕ್ಷರೆ, ನಿನ್ನೆ ಸಿಆರ್‌ಪಿಎಫ್‌ನ ಚೀಫ್ ಮಾತನಾಡುತ್ತಾ, ನಮಗೆ ವಹಿಸಿದರೆ ನಾವು ವೀರಪ್ಪನ್ ಹಿಡಿದು ಹಾಕುತ್ತೇವೆಂದು ಹೇಳುತ್ತಿದ್ದಾರೆ. ಪೂರ್ತಿಯಾಗಿ ಅವರಿಗೆ ವಹಿಸಿಬಿಟ್ಟರೆ ಅವರು ಮಾಡುತ್ತಾರೆ. ನಿಮಗೆ ಆ ಜಂಜಾಟವೇ ಬೇಡ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ನಾವು ಹೇಳುವುದು, ನಮ್ಮಲ್ಲಿಯೇ ಸಮನ್ವಯವಿಲ್ಲ ಸ್ವಾಮಿ, ಲೋಕಲ್ ಪೊಲೀಸ್‌ಗೆ ಈಚೆಗೆ ಬರುವ ಧೈರ್ಯವಿಲ್ಲ, ಎಸ್‌ಟಿಎಫ್‌ಗೆ ಮಾಡುವ ಮನಸ್ಸಿಲ್ಲ, ಬೇರೆಯವರಿಗೆ ನಾವು ಅವಕಾಶವನ್ನು ಕೊಡುವುದಿಲ್ಲ, ಯಾವರೀತಿಯಾಗಿ ನಾವು ಅವನನ್ನು ಹಿಡಿಯುವುದು? ಈ ರೀತಿಯಾದಾಗ ನಾವು ಹಿಡಿದುಕೊಂಡು ಬಂದುಬಿಡುತ್ತೇವೆಂದು ಹೇಳುವುದು, ತಿರುಗಿ ಸುಮ್ಮನೆಯಾಗುವುದು, ಮತ್ತೆ ಅದೇ ಪರಿಸ್ಥಿತಿಯಾಗುವುದು, ಇನ್ನು ಎರಡು ವರ್ಷ ಹಾಗೆಯೇ ಮುಂದಕ್ಕೆ ಹೋಗುವುದು. ಉತ್ತಮ ಜೀಪ್‌ಗಳನ್ನು ಕೊಡುವುದು, ಅವರಿಗೆ ವೆಪೆನ್ಸ್ ಕೊಡುವಂಥದ್ದು ಆಗ ಬೇಕು ಈಗ ತಮ್ಮ ಮುಂದೆ ಒತ್ತಾಯವನ್ನು ತರುವಂಥದ್ದು, ಮಾನ್ಯ ರಾಜುಗೌಡರು ಜುಡಿಷಯಲ್ ಪ್ರೋಬ್‌ಗೆ ಅಥವಾ ಯಾವುದಕ್ಕೆ ಒಪ್ಪುತ್ತಾರೆ ಆ ಸಮಯದಲ್ಲಿ ಸಚಿವರಾಗಿ ಇರಕೂಡದು ಅವರು ರಾಜೀನಾಮೆ ಕೊಡಬೇಕು ಸ್ವಾಮಿ. "Fair enquiry" ನಿಷ್ಪಕ್ಷಪಾತವಾಗಿ ತನಿಖೆಯಾಗಬೇಕು, ಅವರು ಘೋಷಣೆ ಮಾಡಬೇಕು ಇವತ್ತು, ನಾನು ರಾಜೀನಾಮೆ ಕೊಡುತ್ತೇನೆ, ನಿಷ್ಪಕ್ಷಪಾತವಾಗಿ ತನಿಖೆ ಆಗಲಿ ಇವತ್ತು ಅವರಿಗೆ ಧೈರ್ಯವಿದ್ದರೆ ಅವರು ಮುಖ್ಯಮಂತ್ರಿಗಳ ಕೈ ಬಲಪಡಿಸುತ್ತೇನೆಂದು ಹೇಳಬೇಕು. ಕುಳಿತುಕೊಳ್ಳಿ ಎಂದು ಈಗ ಹೇಳುತ್ತಾರೆ.

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಯಾರ ಕೈ ಬಲಪಡಿಸುವುದಕ್ಕೆ? ರಾಜುಗೌಡರು ಇನ್‌ಫ್ಲೂಯೆನ್ಸ್ ಮಾಡಿಬಿಡುತ್ತಾರೆಯೆ?

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ನನ್ನ ಕೈ ಎಂದು ಅಲ್ಲ, ಇದರಲ್ಲಿ ಅನ್ಯಾಯವಾಗಿದೆ, ಹೇಳಿ ಸ್ವಾಮಿ.

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜುಗೌಡರು ಬಹಳ ಇನ್‌ಫ್ಲೂಯೆನ್ಸ್ ಮಾಡಿಬಿಡುತ್ತಾರೆಯೇ ಹೈಕೋರ್ಟ್ ಜಡ್ಜ್‌ಮೇಲೆ? ನಿಮ್ಮಲ್ಲಿ ಬೇಕಾದಷ್ಟು ಎನ್‌ಕ್ವಾಯರಿ ನಡೆಯಿತು, ನೀವು ಎಲ್ಲಾ ಮಿನಿಸ್ಟರ್ಸ್ ಇನ್‌ಫ್ಲೂಯೆನ್ಸ್ ಮಾಡಿಬಿಟ್ಟಿದ್ದೀರಾ ರಾಜೀನಾಮೆ ಕೊಡಬೇಕು ಎಂದರೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಸೋಮಶೇಖರವರು ರಾಜೀನಾಮೆ ಕೊಟ್ಟಿದ್ದರು.

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಾವೂ ಕೂಡ ಶ್ರೀ ಸೋಮಶೇಖರ್ ವಿಚಾರದ ಬಗ್ಗೆ ಇದೇ ಹಾಸನಲ್ಲಿ ಮಾತನಾಡಿದ್ದೇವೆ.

ಶ್ರೀ ಬಿ.ಎನ್.ಬಚ್ಚೇಗೌಡ: ನೀವು ಭಂಡರು, ನಾವು ಅಂಥಹವರು ಅಲ್ಲಾ ಸ್ವಾಮಿ.

ಶ್ರೀ ಬಿ.ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಜಾಗದಲ್ಲಿ ಕುಳಿದಂಥ ಒಬ್ಬ ವಿರೋಧ ಪಕ್ಷದ ಸದಸ್ಯ, ಬೇರೇ ಅವರ್‌ನಲ್ಲಿ ಎತ್ತಿದ್ದಂಥ ವಿಚಾರ, ಇದು ರೂಲ್ 69 ನಲ್ಲಿ ಚರ್ಚೆ ಆಗುತ್ತಿದೆ ದಯವಿಟ್ಟು ಒಂದು ನಿಮಿಷ.

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನೀವು ಮಾಡುವುದನ್ನು ಬೆಂಬಲಕೊಟ್ಟು ಈ ಸದನದಲ್ಲಿ ಮಾಡಿದವರು ನೀವು ಒಬ್ಬರೇ ಎಂದು ಈ ಸದನದ ರೆಕಾರ್ಡ್‌ನಲ್ಲಿ ಇದೆ. ನಿಮಗೆ ಅಭಿನಂದನೆಯನ್ನು ಸಲ್ಲಿಸಿದ್ದೇವೆ. ನಿಮ್ಮ ಕಾಲದಲ್ಲಿರುವ ಮುಖ್ಯಮಂತ್ರಿಗಳು ನಿಮಗೆ ಇರುವ ಪೋರ್ಟ್‌ಫೋಲಿಯೊವನ್ನು ಚೇಂಜ್ ಮಾಡುತ್ತೇವೆ ಬೇರೆ ಇಲಾಖೆಯನ್ನು ತೆಗೆದುಕೊಳ್ಳಿ ಎಂದು ಹೇಳಿರುವ ವಿಚಾರವು ನಮಗೆಲ್ಲಾ ಗೊತ್ತಿದೆ. ಅದೂ ಕೂಡ ರೆಕಾರ್ಡ್‌ನಲ್ಲಿದೆ. ನಾವು ಅದರ ಬಗ್ಗೆ ಏನೂ ತರ್ಕ ಮಾಡುತ್ತಿಲ್ಲ. ನಿಮಗೊಬ್ಬರಿಗೆ ಬೇರೆಯವರನ್ನೆಲ್ಲಾ ಹೋಲಿಕೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಬಿ.ಸೋಮಶೇಖರ್: ಮಾನ್ಯ ಉಪಾಧ್ಯಕ್ಷರೆ, ಪ್ರಜಾಪ್ರಭುತ್ವದ ಮೌಲ್ಯಗಳು ನನ್ನ ಮೇಲೆ ಮರ್ಡರ್ ಕೇಸ್‌ಗಳು ಇರಲಿಲ್ಲ, ಅಥವಾ ಅಧಿಕಾರದಲ್ಲಿದ್ದಾಗ ಯಾವುದೋ ಒಂದು ಎಕ್ಸಾಮಿನೇಷನ್ ಟೆಕ್ನಿಕಲ್ ಬೋರ್ಡ್‌ನಲ್ಲೋ, ವಿಶ್ವವಿದ್ಯಾನಿಯದಲ್ಲೋ ಅಚಾತುರ್ಯ ಆಗಿದೆ ಎಂದು ನೈತಿಕವಾಗಿ ರಾಜೀನಾಮೆಯನ್ನು ಕೊಡಿ ಎಂದು ಕೇಳಲಿಲ್ಲ. ಒಂದು ಸಣ್ಣ ಅಂದರೆ 20 ವರ್ಷದ ಹಿಂದೆ ನೀವು ಕಾಪಿ ಮಾಡಿದ್ದೀರಿ, ನಾನು ನೋಡಿದ್ದೇನೆ ಎಂದು ಹೇಳಿದರು. ಅದಕ್ಕೆ ಮುಖ್ಯಮಂತ್ರಿಗಳು ಏನು ಹೇಳಿದರೆಂದರೆ, ಅವರು ಒಂದು ಸಾರಿ ಹೇಳಿದ ಮೇಲೆ ಆಯಿತು ನಾನು ಜುಡಿಷಿಯಲ್ ಎನ್‌ಕ್ವಾಯರಿಮಾಡುತ್ತೇವೆ ಎಂದು ಹೇಳಿದರು, ಜುಡಿಷಿಯಲ್ ಎನ್‌ಕ್ವಾಯರಿ ಮಾಡುತ್ತೇವೆಂದು ಮುಖ್ಯಮಂತ್ರಿಯವರು ಹೇಳಿದ ಮೇಲೆ ನಾನು ರಾಜೀನಾಮೆ ತೆಗೆದುಕೊಳ್ಳಿ ಎಂದು ಅಲ್ಲೇ ಕೊಟ್ಟೆ. ಇಲ್ಲಿ ಆಪಾದನೆ ಎಂದರೆ ಈ ಕ್ಯಾಸೆಟ್ ಇದೆಯಲ್ಲಾ ಕ್ಯಾಸೆಟ್‌ನಲ್ಲಿ ನನಗೂ ಮತ್ತು ಅವರಿಗೂ ಸಂಬಂಧವಿದೆ ಎಂದು ಇದೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ವೀರಪ್ಪನ್‌ನ್ನು ನಂಬುತ್ತೀರಿ, ಒಬ್ಬ ರಾಜ್ಯದ ಮಂತ್ರಿಯನ್ನು ನಂಬುವುದಿಲ್ಲ.

ಶ್ರೀ ಬಿ.ಸೋಮಶೇಖರ್: ನಾನೇ ಹೇಳಿದ ಆವಾಗ.

ಶ್ರೀ ಸಿ.ಬೈರೇಗೌಡ: ಇವರನ್ನು ನಂಬುತ್ತೇವೆ, ಅವರನ್ನು ನಂಬುತ್ತೇವಂತಲ್ಲ, ಈ ಸಂದರ್ಭದಲ್ಲಿ ಎಲ್ಲರನ್ನೂ ಅಪನಂಬಿಕೆಯಿಂದ ನೋಡಬೇಕಾಗುತ್ತದೆ. ಎರಡು ಚುನಾವಣೆಗಳಲ್ಲಿ ಸಹಾಯ ಮಾಡಿದ್ದೇನೆ ನನಗೆ ಚೆನ್ನಾಗಿ ಗೊತ್ತು ಎಂದು ಹೇಳಿದ್ದಾನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಈ ಘಟನೆಗಳು ಆದಮೇಲೆ ರಾಜುಗೌಡರ ಕಡೆಯವರೇ ಅಲ್ಲಿ ಗಲಾಟೆಯನ್ನು ಮಾಡಿರುವುದು, ಕಲ್ಲನ್ನು ಹೊಡೆದಿರುವುದು ಬೆಂಕಿಯನ್ನು ಹಚ್ಚಿರುವುದು, ವೀರಪ್ಪನ್ ಕಡೆಯವರಲ್ಲ. ಆದರೆ ಕೇಸುಗಳನ್ನು ಹಾಕಿಸಿರುವುದೆಲ್ಲಾ

ನಮ್ಮ ಮೇಲೆಯೇ. ಜನಾತಾದಳದವರ ಮೇಲೆ ಸುಮಾರು 47 ಕೇಸುಗಳನ್ನು ಹಾಕಿದ್ದಾರೆ, ಅಲ್ಲಿ ಇವತ್ತು ಅಮಾಯಕರನ್ನು ಹಿಡಿದು ಹಿಡಿದು ಬಲಿ ಹೊಡೆಯುತ್ತಿದ್ದಾರೆ. ಇದು ಯಾವ ಪುರುಷಾರ್ಥಕ್ಕಾಗಿ? ನಮ್ಮ ಮನುಷ್ಯನನ್ನು ಕಳೆದುಕೊಂಡು, ಅವರ ಪರವಾಗಿ ಕಣ್ಣೀರು ಸುರಿಸುವವರನ್ನು ಜೈಲಿಗೆ ಕಳುಹಿಸುವುದರಲ್ಲಿ ನಿಮಗೆ ಸಂತೋಷವೇ? ಅವರಿಗೆ ಬೇಡಿಯನ್ನು ಹಾಕುವುದು, ಅವರ ಕೈಗೆ ಕೋಳವನ್ನು ತೊಡಿಸುವುದು ಇದು ಸರಿಯೇ? ಮಾನ್ಯ ಸಚಿವರಾದ ಶ್ರೀ ಚಂದ್ರಶೇಖರ್‌ರವರು ಹಾಗೂ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಜಜಯಲಲಿತರವರ ಹತ್ತಿರ ಹೋದರು, ಅವರ ಹತ್ತಿರ ಇವರು ಏನು ಒಪ್ಪಿಕೊಂಡು ಬಂದರು ಸ್ವಾಮಿ? ಅವರು ಏನು ಒಪ್ಪಿಕೊಂಡ ಬಗ್ಗೆ ಹೌಸ್‌ನಲ್ಲಿ ಡಿಸ್‌ಕ್ಲೋಸ್ ಮಾಡಬೇಕು. ಇವರು ಹೋಗಿದ್ದರಲ್ಲಾ, ತಮಿಳು ಪಿಕ್ಚರ್‌ಗಳನ್ನು ಹಾಕುತ್ತೇವೆಂದು ಒಪ್ಪಿಕೊಂಡು ಬಂದಿದ್ದೀರಾ? ಅವರ ಸೀರಿಯಲ್‌ಗಳನ್ನು ಹಾಕುತ್ತೇವೆ, ಅವರ ಟಿ.ವಿ. ಚಾನಲ್‌ಗಳನ್ನು ಓಪನ್ ಮಾಡುತ್ತೇವೆಂದು ಒಪ್ಪಿಕೊಂಡು ಬಂದಿದ್ದೀರಾ? ತಾವು ಏನು ಒಪ್ಪಿಕೊಂಡು ಬಂದಿದ್ದೀರೆಂಬ ಬಗ್ಗೆ ಅದನ್ನು ಸದನಕ್ಕೆ ಹೇಳಬೇಕು. ಕನ್ನಡದವರಾದ ಶ್ರೀ ಜಾಣಗೆರೆ ವೆಂಕಟರಾಮಯ್ಯನವರನ್ನು ಬಳ್ಳಾರಿ ಜೈಲಿಗೆ ಕಳುಹಿಸಿದಿರಲ್ಲಾ ಚಂದ್ರಶೇಖರ್‌ರವರನ್ನು ಸೆಂಟ್ರಲ್ ಜೈಲಿಗೆ ಕಳುಹಿಸುತ್ತೀರಿ.

ಪ್ರೊ. ಬಿ.ಕೆ.ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಚ್ಚೇಗೌಡರು ಮಾತನಾಡುತ್ತಾ ಎಲ್ಲಿಂದ ಎಲ್ಲಿಗೋ ಹೋಗುತ್ತಿದ್ದಾರೆ, ಅವರು ತರ್ಕವಿಲ್ಲದೆ ಮಾತನಾಡುತ್ತಿದ್ದಾರೆ. ತಮಿಳು ಸಿನಿಮಾಕ್ಕೂ ನಾವು ಹೋಗಿ ಮಾತನಾಡುವುದಕ್ಕೂ ಏನು ಸಂಬಂಧ? ನಾವು ಬಹಳ ಗಂಭೀರವಾದಂತಹ ವಿಚಾರವನ್ನು ಮಾತನಾಡಿದ್ದೇವೆ, ಅದನ್ನು ತಾವು ದಯವಿಟ್ಟು ಲಘು ಮಾಡುವುದಕ್ಕೆ ಹೋಗಬೇಡಿ. ಇಲ್ಲಿಯೇ ಹೊಂ ಮಿನಿಸ್ಟರ್ ಇದ್ದಾರೆ, ಬೇಕಾದರೆ ಅವರನ್ನು ತಾವು ಕೇಳಬಹುದು. ಅವರು ಅನುಮತಿಯನ್ನು ಕೊಟ್ಟರೆ ನಾನೇ ಹೇಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ: ಕನ್ನಡಪರ ಸಂಘಟನೆಗಳನ್ನೆಲ್ಲಾ ಹೊಡೆದು ಜೈಲನ್ನು ತುಂಬಿಸಿದರೆ ಆಕೆಗೋಸ್ಕರ. ಇಲ್ಲಿ ಮನುಷ್ಯ ನಾಗಪ್ಪನವರನ್ನು ಕಳೆದುಕೊಳ್ಳಬೇಕು. ನಮ್ಮ ಕನ್ನಡ ಪರ ಸಂಘಟನೆಯವರಾದ ಶ್ರೀ ಜಾಣಗೆರೆ ವೆಂಕಟರಾಮಯ್ಯನವರನ್ನು ನೀವು ಬಳ್ಳಾರಿ ಜೈಲಿಗೆ ಹಾಕಿಸುತ್ತೀರಿ? ಇದು ನೀವು ಮಾಡುತ್ತಿರುವುದು. ತಾವು ಏನು ಮಾತನಾಡಿಕೊಂಡು ಬಂದಿದ್ದೀರಿ ಅದನ್ನು ಹೇಳಿ ಸ್ವಾಮಿ.

ಪ್ರೊ ಬಿ.ಕೆ.ಚಂದ್ರಶೇಖರ್: ನಿಮಗೆ ಒಳ್ಳೆಯ ಧ್ವನಿ ಇದೆ, ಎಂದು ಏನು ಬೇಕಾದರೂ ಹೇಳಬಹುದೇ?

Sri. B.N. Bache Gowda: No, No, not like that. ತಾವು ಏನು ಮಾಡಿದ್ದೀರೆಂಬುದನ್ನು ಹೇಳಿ.

ಪ್ರೊ ಬಿ.ಕೆ.ಚಂದ್ರಶೇಖರ್: ಏನು ಸ್ವಾಮಿ ಇದು?

ಶ್ರೀ ಬಿ.ಎನ್.ಬಚ್ಚೇಗೌಡ: ತಾವು ಸದನಕ್ಕೆ ಡಿಸ್‌ಕ್ಲೋಸ್ ಮಾಡಿ ನಾವು ಇಂಥದ್ದರ ಬಗ್ಗೆ ಮಾತನಾಡಿದ್ದೇವೆಂದು

ಪ್ರೋ ಬಿ.ಕೆ.ಚಂದ್ರಶೇಖರ್: ಹೋಂ ಮಿನಿಸ್ಟರ್‌ರವರು ಬಹಿರಂಗವಾಗಿಯೇ ಹೇಳಿದರು, ಅವರು ಏನು ಹೇಳಿದರೆಂಬ ಬಗ್ಗೆ ಇದರಲ್ಲಿ ಸಿಕ್ರೇಟ್ ಏನಿತ್ತು? ಅಲ್ಲಿ ಬಚ್ಚಿಡುವುದು ಏನೂ ಇರಲಿಲ್ಲ. 15 ಜನರು ಆ ಮೀಟಿಂಗ್‌ನಲ್ಲಿದ್ದರು, ಅಲ್ಲಿ ಏನು ಸಿಕ್ರೇಟ್ ಇತ್ತಾ ಸ್ವಾಮಿ? ಅಲ್ಲಿ ನಾವು ಸಿನಿಮಾ ಮಾತನಾಡುವುದಕ್ಕೆ ಹೋಗಿದ್ದೇವಾ?

ಉಪಾಧ್ಯಕ್ಷರು: ಮಾತನಾಡುವವರೆಲ್ಲರೂ ಇವತ್ತು. ಮುಗಿಸಿಬಿಡಿ. ನಾವು ಇನ್ನು 15 ನಿಮಿಷ ಕುಳಿತಕೊಳ್ಳುವುದಕ್ಕೆ ರೆಡಿ ಇದ್ದೇವೆ. ಇನ್ನು 15 ನಿಮಿಷ ಮಾತನಾಡಿ. ಇವತ್ತೇ ಈ ವಿಚಾರವನ್ನು ಮುಗಿಸೋಣ

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಸ್.ಎಸ್.ಪಾಟೀಲರು ಅಷ್ಟು ಬೇಗನೆ ಮಾತನಾಡಿ ಮುಗಿಸುತ್ತಾರೆಂಬ ಬಗ್ಗೆ ನನಗೆ ಖಾತರಿ ಇಲ್ಲ ಸ್ವಾಮಿ. ಆದ್ದರಿಂದ ತಾವೂ ಈಗಲೇ ಮುಗಿಸಿ.

ಶ್ರೀ. ಪಿ.ಜಿ.ಆರ್.ಸಿಂಧ್ಯಾ: ಅವರು ನಾಳೆ ಬೆಳಿಗ್ಗೆ 15 ನಿಮಿಷ ಮಾತನಾಡುತ್ತಾರೆ

ಶ್ರೀ ಕರಿಯಣ್ಣ: ಮಾನ್ಯ ಉಪಾಧ್ಯಕ್ಷರೆ, ನಮ್ಮ ಫಾರೆಸ್ಟ್‌ನ ಬಗ್ಗೆ ತುಂಬಾ ಸಮಸ್ಯೆ ಇದೆ, ಆದ್ದರಿಂದ ಅವರು ಬೇಗನೆ ಮಾತನಾಡಿ ಮುಗಿಸುವುದು ಒಳ್ಳೆಯದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನಾನು ನಾಳೆ ದಿನ ಮಾತನಾಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಪಾಟೀಲರೆ, ನಾಳೆಯ ಪ್ರಶ್ನೆಯೇ ಇಲ್ಲ. ಏನಿದ್ದರೂ ಇವತ್ತು ಮುಗಿಯಬೇಕು. ನಾಳೆ ದಿವಸ ರಿಪ್ಲೆ ಇರುತ್ತದೆ.

ಶ್ರೀ ಕರಿಯಣ್ಣ: ನಾವು ಮಲೆನಾಡಿನವರು, ನಮಗೂ ಬಹಳ ಸಮಸ್ಯೆಗಳು ಇವೆ. ಇದರ ಬಗ್ಗೆ ಮಾನ್ಯ ಜಯಪ್ರಕಾಶ್‌ಹೆಗಡೆಯವರಿಗೂ ಸಹ ಗೊತ್ತಿದೆ.

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಮಾನ್ಯ ಕರಿಯಣ್ಣನವರಿಗೂ ಟೈಂ ಆಗಿರುವಂತೆ ಕಾಣುತ್ತದೆ.

ಶ್ರೀ. ಕರಿಯಣ್ಣ: ನಮ್ಮ ಫಾರೆಸ್ಟ್‌ನ ವಿಷಯವೂ ಚರ್ಚೆಗೆ ಬರಬೇಕು.

ಉಪಾಧ್ಯಕ್ಷರು: ಇನ್ನು 20 ನಿಮಿಷಗಳ ಕಾಲ ತಾವು ಮಾತನಾಡಿ ಎಂದು ನಾನು ಹೇಳುತ್ತಿದ್ದೇನೆ. ಈಗ ಮಾತನಾಡಿದಂತಹ ಪ್ರಕಾರವೇ ನಡೆಯುತ್ತಿದೆ. ಆದಾಗ್ಯೂ ಕೂಡ ಇದು ಮುಗಿಯಬೇಕು, ಇನ್ನು ಇಬ್ಬರು ಮಾತನಾಡಲಿ. 20 ನಿಮಿಷದಲ್ಲಿ ಇಬ್ಬರು ಮಾತನಾಡಬಹುದು. ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ 20 ನಿಮಿಷಗಳು ಕಾಲದ ಮಧ್ಯದಲ್ಲಿ ಇಂಟರಪ್ಷನ್ ಆಗುತ್ತದೆ.

ಉಪಾಧ್ಯಕ್ಷರು: ನಾವು 9 ಗಂಟೆಗಳವರೆಗೆ ಕಾಲ ಇಲ್ಲಿ ಕುಳಿತುಕೊಳ್ಳೋಣ. ನನಗೇನೂ ತೊಂದರೆಯಿಲ್ಲ. ತಾವು ಮಾತನಾಡಿ. ನಾಳೆಯ ಪ್ರಶ್ನೆಯೇ ಇಲ್ಲ, ಇವತ್ತು ಕ್ಲೋಸ್ ಆಗಬೇಕು. ಇವತ್ತೇ ಮುಗಿಯಬೇಕು, ನಾಳೆಯ ದಿವಸ ರಿಪ್ಲೆ

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಉಪಾಧ್ಯಕ್ಷರೆ, ಅವರ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಗೃಹಸಚಿವರು ಸಚಿವರಿದ್ದಾರೆ. ಅವರ ಮೇಲೆ ಹಾಕಿರುವಂತಹ

ಮೊದಕದ್ದಮ್ಮೆಗಳು ಸುಳ್ಳೋ ಅಥವಾ ನಿಜವೋ ಅವರು ಅದನ್ನು ವಾಪಸ್ಸು ಪಡೆಯಬೇಕು. ಅವರು ಅಮಾಯಕರು, ಅವರ ಕೈಕೋಳವನ್ನು ತೊಡಿಸಿ ಒಳಗೆ ಹಾಕುತ್ತಿದ್ದಾರೆ. ಅವರ ಮನೆಮನೆಗೆ ನುಗ್ಗಿ ಹೊಡೆಸುತ್ತಿದ್ದಾರೆ. ಅದನ್ನು ವಾಪಸ್ಸು ಪಡೆಯಬೇಕು, ಮಾನ್ಯ ರಾಜುಗೌಡರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಈ ತನಿಖೆಯು ಸಮಗ್ರವಾಗಿ ಈ ಸಾವಿನ ನಿಗೂಢತೆಯನ್ನು ಬೇಧಿಸುವುದಕ್ಕೋಸ್ಕರ ಸತ್ಯಾಂಶವನ್ನು ಹೊರತರುವುದಕ್ಕೋಸ್ಕರ ಇವತ್ತು ಸಿಬಿಐ ತನಿಖೆಗೆ ಒತ್ತಾಯವನ್ನು ಮಾಡಿ ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗಾಗಲೇ 7-15 ಗಂಟೆಯಾಗಿದೆ, ತಾವು 7-00 ಗಂಟೆಗೆ ಮುಗಿಸುತ್ತೇವೆಂದು ಹೇಳಿದ್ದೀರಿ, ಈಗ ಏನು ಮಾತನಾಡಿದರೂ ಅದನ್ನೇ ಮಾತನಾಡುತ್ತೀರಿ, 5-5 ನಿಮಿಷ ಯಾರೂ ಮಾತನಾಡುವುದಿಲ್ಲ.

ಶ್ರೀ ಕರಿಯಣ್ಣ: ಮಾನ್ಯ ಉಪಾಧ್ಯಕ್ಷರೆ, ನಾವು ಆಗಲಿಂದಲೂ ಮಾತನಾಡಿರುವ ಬಗ್ಗೆ ನಾವು ಎರಡು ದಿವಸಗಳಿಂದಲೂ ಕೇಳುತ್ತಿದ್ದೇವೆ. ಅವರುಗಳು ಹೇಳಿದ್ದನ್ನೇ ಹೇಳುತ್ತಿದ್ದಾರೆಯೇ ವಿನಃ ಹೊಸ ವಿಚಾರಗಳು ಏನಾದರೂ ಇದ್ದರೆ ಬೇರೆ ಸದಸ್ಯರುಗಳು ಹೇಳಿದರೆ ನಾವು ಸಂತೋಷವಾಗಿ ಕೇಳಬಹುದು. ಅವರು ಹೇಳಿದ್ದೇ ಹೇಳುತ್ತಿದ್ದಾರೆ. ಏನಾಗುತ್ತದೆ, ಅದು ಸಾಕಾಗುತ್ತವೆ.

ಉಪಾಧ್ಯಕ್ಷರು: ಈ ಕೊನೆಯದಾಗಿ ಎಸ್.ಎಸ್.ಪಾಟೀಲ್‌ರವರೇ ತಾವು 10 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅವರು ನಾಳೆ ಬೆಳಿಗ್ಗೆ ಮಾತನಾಡುತ್ತಾರೆ.

ಉಪಾಧ್ಯಕ್ಷರು: ನಾಳೆ ಬೆಳಿಗ್ಗೆ ಸರ್ಕಾರದಿಂದ ಉತ್ತರ ಇಂದೇ ಇದು ಮುಕ್ತಾಯವಾಗಬೇಕು. ನಾಳೆಗೆ ಇದನ್ನು ಮುಂದುವರಿಸುವುದಲ್ಲಾ, ಇವತ್ತೆ ಮುಕ್ತಾಯ ಮಾಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಏನು ಮಾಡುವುದು, ನಮ್ಮ ನಾಯಕರು ಹೇಳುತ್ತಾ ಇದ್ದಾರೆ ನಾಳೆ ನನಗೆ ಮಾತನಾಡುವುದಕ್ಕೆ ಒಂದು ತಾಸು ಕೊಡಿ.

ಉಪಾಧ್ಯಕ್ಷರು: ಇಲ್ಲ, ಈಗ ತಾವು 10 ನಿಮಿಷ ಮಾತನಾಡಿ. ಇವತ್ತು ಇದನ್ನು ಮುಗಿಸೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾಳೆ ಮಾತನಾಡೋಣ, ನಾಳೆ ಒಂದಿಬ್ಬರು ಮಾತನಾಡುತ್ತಾರೆ, ನಂತರ ಮಾನ್ಯ ಗೃಹ ಮಂತ್ರಿಗಳು ಉತ್ತರವನ್ನು ಕೊಡಬಹುದು. ಈಗ 7-10 ಗಂಟೆಯಾಯಿತು, ಪ್ರೆಸ್‌ನವರು ರಿಪೋರ್ಟ್ ಮಾಡುವುದಕ್ಕೂ ಆಗುವುದಿಲ್ಲ.

ಉಪಾಧ್ಯಕ್ಷರು: ಮಾತನಾಡುವವರೆಲ್ಲರೂ ಇವತ್ತು ಮುಗಿಸಿಬಿಡಿ, ನಾವು ಇನ್ನು 15 ನಿಮಿಷ ಕುಳಿತುಕೊಳ್ಳುವುದಕ್ಕೆ ರೆಡಿ ಇದ್ದೇವೆ, ಇನ್ನು 15 ನಿಮಿಷ ಮಾತನಾಡಿ, ಇವತ್ತೇ ಮುಗಿಸುವುದು.

ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಎಸ್.ಎಸ್.ಪಾಟೀಲರು ಅಷ್ಟು ಬೇಗನೆ ಮಾತನಾಡಿ ಮುಗಿಸುತ್ತಾರೆಂದು ನನಗೆ ಖಾತರಿ ಇಲ್ಲ ಸ್ವಾಮಿ, ಆದ್ದರಿಂದ ತಾವು ಈಗಲೇ ಮುಗಿಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅವರು ನಾಳೆ ಬೆಳಿಗ್ಗೆ 15 ನಿಮಿಷ ಮಾತನಾಡುತ್ತಾರೆ.

ಶ್ರೀ ಕರಿಯಣ್ಣ: ಮಾನ್ಯ ಉಪಾಧ್ಯಕ್ಷರೆ, ನಮ್ಮ ಫಾರೆಸ್ಟ್‌ನ ಬಗ್ಗೆ ತುಂಬಾ ಸಮಸ್ಯೆ ಇದೆ, ಆದ್ದರಿಂದ ಅವರು ಬೇಗನೆ ಮಾತನಾಡಿ ಮುಗಿಸುವುದು ಒಳ್ಳೆಯದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ನಾನು ನಾಳೆ ದಿನ ಮಾತನಾಡುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಪಾಟೀಲರೆ, ನಾಳೆಯ ಪ್ರಶ್ನೆಯೇ ಇಲ್ಲ. ಏನಿದ್ದರೂ ಇದ್ದರು ಇವತ್ತು ಮುಗಿಯಬೇಕು, ನಾಳೆ ದಿವಸ ರಿಪ್ಲೈ ಇರುತ್ತದೆ.

ಶ್ರೀ ಕರಿಯಣ್ಣ: ನಾವು ಮಲೆನಾಡಿನವರು, ನಮಗೂ ಬಹಳ ಸಮಸ್ಯೆಗಳು ಇವೆ, ಇದರ ಬಗ್ಗೆ ಮಾನ್ಯ ಜಯಪ್ರಕಾಶ್ ಹೆಗ್ಡೆ ಯವರಿಗೂ ಸಹ ಗೊತ್ತಿದೆ.

ಶ್ರೀ. ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಕರಿಯಣ್ಣನವರಿಗೂ ಟೈಂ ಆಗಿರುವಂತೆ ಕಾಣುತ್ತದೆ.

ಶ್ರೀ ಕರಿಯಣ್ಣ: ಇಚ್ಛೆ, ಇದೆ, ನಮಗೆ ಫಾರೆಸ್ಟ್‌ನಿಂದಲೂ ಬರಬೇಕು.

ಉಪಾಧ್ಯಕ್ಷರು: ಇನ್ನು 20 ನಿಮಿಷಗಳ ಕಾಲ ತಾವು ಮಾತನಾಡಿಯೆಂದು ನಾನು ಹೇಳುತ್ತಿದ್ದೇನೆ, ಈಗ ಮಾತನಾಡಿದಂತಹ ಪ್ರಕಾರವೇ ನಡೆಯುತ್ತಿದೆ. ಆದಾಗ್ಯೂ ಕೂಡ ಇದು ಮುಗಿಯಬೇಕು, ಇನ್ನು ಒಬ್ಬರು ಮಾತನಾಡಿದರೆ. 20 ನಿಮಿಷದಲ್ಲಿ ಇಬ್ಬರು ಮಾತನಾಡಬಹುದು, ನಾನು ಬೇಡವೆಂದು ಹೇಳುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ 20 ನಿಮಿಷಗಳು ಕಾಲದ ಮಧ್ಯದಲ್ಲಿ ಇಂಟರಪ್‌ಷನ್ ಆಗುತ್ತದೆ.

ಉಪಾಧ್ಯಕ್ಷರು: ನಾವು 9 ಗಂಟೆಗಳ ಕಾಲ ಇಲ್ಲಿ ಕುಳಿತುಕೊಳ್ಳೋಣ. ನನಗೇನು ತೊಂದರೆ ಇಲ್ಲ, ತಾವು ಮಾತನಾಡಿ, ನಾಳೆಯ ಪ್ರಶ್ನೆಯೇ ಇಲ್ಲ, ಇವತ್ತು ಕ್ಲೋಸ್ ಆಗಬೇಕು? ಇವತ್ತೆ ಮುಗಿಯಬೇಕು, ನಾಳೆ ದಿವಸ ರಿಪ್ಲೈ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಇವತ್ತು ಸ್ವಲ್ಪ ಹೊತ್ತು ಮಾತನಾಡಿ ಆಮೇಲೆ ಮುಗಿಸೋಣ. ಅವರಿಬ್ಬರೇ ಮಾತನಾಡುವುದು, ಅವರುಗಳು ಹದಿನೈದು ನಿಮಿಷಗಳ ಕಾಲ ಮಾತನಾಡುತ್ತಾರೆ, ನಾಳೆಯ ದಿವಸ 10 ಗಂಟೆಗೆ ಸೇರಿ 10-30 ಗೆ ಉತ್ತರ ಪ್ರಾರಂಭವಾಗಲಿ, ಇವತ್ತು ಆಗಲೇ 7-15 ಆಗಿದೆ, ನಾವು ಬೆಳಿಗ್ಗೆ ಯೇ ಬಂದಿದ್ದೇವೆ.

ಉಪಾಧ್ಯಕ್ಷರು: ಹಾಗಿದ್ದರೆ ಮುಗಿಸಿಬಿಡೋಣ, ಇನ್ನು ಎಷ್ಟು ಹೊತ್ತು ಆಗುತ್ತದೆ. ಇನ್ನು ಹದಿನೈದು ನಿಮಿಷಗಳ ಕಾಲ ಮಾತನಾಡಲಿ, ಇನ್ನು ಅರ್ಧಗಂಟೆಗಳ ಕಾಲ ನಾವು ಕುಳಿತುಕೊಳ್ಳೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾಳೆಯ ದಿವಸ ಕುಳಿತುಕೊಳ್ಳೋಣ. ನಮ್ಮ ಪಾರ್ಟಿ ಮೀಟಿಂಗ್ ಬೇರೆ ಇದೆ,

ಉಪಾಧ್ಯಕ್ಷರು: ನಾಳೆ ಆಗುವುದಿಲ್ಲ, ನಾಳೆಯ ದಿವಸ ರಿಪ್ಲೆ ಇರುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾಳೆ ದಿವಸ ರಿಪ್ಲೈ ಅವರು ಕೊಡಲಿ. ಅವರಿಗೂ ಪಬ್ಲಿಸಿಟಿ ಬೇಕಾಗುತ್ತದೆ.

ಉಪಾಧ್ಯಕ್ಷರು: ಇನ್ನು ಬಹಳಷ್ಟು ಇದೆ, ಬೇರೆ ಬೇರೆ ಬಿಜಿನೆಸ್‌ಗಳು ಇದ್ದಾವೆ, ನಾಳೆ ರಿಪ್ಲೈ ಕೊಡುವುದಕ್ಕೆ, ಇವತ್ತು ಇದು ಮುಗಿಯಲೇಬೇಕು. ಇನ್ನು ಅರ್ಧಗಂಟೆಗಳ ಕಾಲ ನಾವು ಕುಳಿತುಕೊಳ್ಳುವುದಕ್ಕೆ ರೆಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇಲ್ಲಾ ಸಾರ್, ದಯವಿಟ್ಟು ನಾಳೆ ಮಾಡೋಣ, ಏನೋ ಮಾತನಾಡುವವರಿಗೂ ಮೂಡ್ ಇರುವುದಿಲ್ಲ. ಪಬ್ಲಿಸಿಟಿನೂ ಬರುವುದಿಲ್ಲ,

ಉಪಾಧ್ಯಕ್ಷರು: ಇರಲಿ, ಮುಗಿಸಿಬಿಡೋಣ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ವಿಷಯವನ್ನು ಕೇಳುವ ಮೂಡ್ ಇದೆ, ನೀವು ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅವರು ಬೆಳಿಗ್ಗೆ ಮಾತನಾಡಲಿ, ಒಂದು ಅರ್ಧ ಗಂಟೆ ಅಷ್ಟೇ ಜಾಸ್ತಿ ಏನೂ ಇಲ್ಲ.

ಉಪಾಧ್ಯಕ್ಷರು: ಅದು ಆಗುವುದೇ ಇಲ್ಲ. ಮಾನ್ಯ ಎಸ್.ಎಸ್.ಪಾಟೀಲರು ಮಾತನಾಡುತ್ತಾರೆ ಅರ್ಧ ಗಂಟೆ ಸಮಯದಲ್ಲಿ ಸಾಧ್ಯವೇ ಇಲ್ಲ.

ಶ್ರೀ ಕರಿಯಣ್ಣ: ಮಾನ್ಯ ಉಪಾಧ್ಯಕ್ಷರೆ, ನೀವು ಅವರಿಗೆ ನಾಳೆ ಬೆಳಿಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ, ನಾಳೆ ಎಲ್ಲಾ ಪೂರ್ಣ ಅದೇ ಹಿಡಿಯುತ್ತದೆ. ನಾವು ಮಲೆನಾಡು ಪ್ರದೇಶದವರು ಫಾರೆಸ್ಟ್ ಬಗ್ಗೆ ಮಾತನಾಡಬೇಕು, ನಮಗೂ ಸಹ ತೊಂದರೆ ಇದೆ.

ಉಪಾಧ್ಯಕ್ಷರು: ಮಾನ್ಯ ಪಾಟೀಲರೆ, ಈಗ ತಾವು ಮಾತನಾಡಿ. ನಾನು ನಿಮಗೆ ಮಾತನಾಡಲು ಅಲೌ ಮಾಡಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್: ಮುಖ್ಯಮಂತ್ರಿಯವರೇ ನಾಳೆ ಬೆಳಿಗ್ಗೆ ಮಾತನಾಡುತ್ತೇನೆ, ಏಕೆಂದರೆ, ನಮ್ಮ ನಾಯಕರು ಹಾಗೂ ನಾವೆಲ್ಲರೂ ಪಾರ್ಟಿ ಮೀಟಿಂಗ್‌ಗೆ ಹೋಗುತ್ತಿದ್ದೇವೆ. ನಾಳೆ ಬೆಳಿಗ್ಗೆ ಅರ್ಧ ತಾಸು ನಾನು ಮಾತನಾಡುತ್ತೇನೆ.

ಶ್ರೀ ಡಿ.ಕೆ.ಶಿವಕುಮಾರ್ (ನಾಗರಾಭಿವೃದ್ಧಿ ಸಚಿವರು): ಮಾನ್ಯ ಪಾಟೀಲರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣವನ್ನು ಕೇಳುವುದಕ್ಕೆ ರೆಡಿಯಾಗಿದ್ದಾರೆ.

ಶ್ರೀ ಸಿ.ಎಸ್.ನಾಡಗೌಡ: ಇವತ್ತು ಮಾನ್ಯ ಮುಖ್ಯಮಂತ್ರಿಗಳ ರಿಪ್ಲೈ ಮುಗಿಸಿಬಿಡಬೇಕಾಗಿತ್ತು.

ಶ್ರೀ ಎಸ್.ಎಸ್.ಪಾಟೀಲ್: ನಾಳೆ ದಿವಸ ಮಾತನಾಡುತ್ತೇನೆ, ನಾಳೆಯ ದಿವಸ ಮುಖ್ಯಮಂತ್ರಿಗಳು ಇರುತ್ತಾರಲ್ಲಾ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಈಗ ತಾವು ಮಾತನಾಡುತ್ತೀರೆಂದರೆ ನಾವು ಕೇಳುತ್ತೇವೆ, ನಾನು ಇರಬೇಕೆಂದು ಪೂರ್ವಷರತ್ತು ಹಾಕಬೇಕಾಗಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೆ,...

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಅವರು 15 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾಳೆ ದಿವಸ ಅವರು ಮುಗಿಸುತ್ತಾರೆ. ನಾಳೆಗೆ ಹಾಕಿ ಸಾರ್

ಶ್ರೀ ಎಸ್.ಎಸ್.ಪಾಟೀಲ್: ನಾನು ಮಾತನಾಡಬಹುದೆ?

ಉಪಾಧ್ಯಕ್ಷರು: ನಾನು ಮಾತನಾಡಿ ಎಂದು ಹೇಳಿ ಬಹಳ ಹೊತ್ತು ಆಯಿತು.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಈಗಾಗಲೇ ಪ್ರಮುಖ ವಿರೋಧಪಕ್ಷವಾದ ಬಿಜೆಪಿ ಅವರು ಬರಲಿಲ್ಲ. ಈಗ ಇವರು ಕಳೆದ 3-4 ದಿವಸಗಳಿಂದ ಚರ್ಚೆಯು ನಡೆಯುತ್ತಿದೆ. ಮಾನ್ಯ ಪಾಟೀಲರು ತಮ್ಮ ಸರದಿಗಾಗಿ ಕಾಯುತ್ತಿದ್ದಾರೆ, ಹಾಗೆಯೇ ಬಾಕಿ ಸ್ನೇಹಿತರು ಕಾಯುತ್ತಿದ್ದಾರೆ. ನಮ್ಮ ಗೃಹ ಸಚಿವರ ರಿಪ್ಲೈ ನಾಳೆ 10-30 ಗಂಟೆಗೆ ಅವರು ಪ್ರಾರಂಭ ಮಾಡುತ್ತಾರೆ. ಅವರು ನಮ್ಮ ಲಾ ಮಿನಿಸ್ಟರ್ ಮತ್ತು ನಾನು ನಾಲ್ಕು ಮಾತುಗಳನ್ನು ಹೇಳಬೇಕಾಗುತ್ತದೆ. ಆದ್ದರಿಂದ 10-30 ಗಂಟೆಗೆ ನಮ್ಮ ರಿಪ್ಲೈ ಶುರುವಾಗಬೇಕು ಸದನವನ್ನು 10 ಗಂಟೆಗೆ ಚಾಲೂ ಮಾಡೋಣ.

ಶ್ರೀ ಎಸ್.ಎಸ್.ಪಾಟೀಲ್: ಹತ್ತು ಗಂಟೆಗೆ ಚಾಲು ಮಾಡೋಣ ನಮಗೆ ಅರ್ಧ ತಾಸು ಕೊಡಿ.

ಶ್ರೀ ಎಸ್.ಎಂ.ಕೃಷ್ಣ : ತಾವು ಒಬ್ಬರೇ ಮಾತನಾಡಿದರೂ ನಮಗೇನೂ ಬೇಜಾರಿಲ್ಲ. ಅರ್ಧಗಂಟೆಯನ್ನು ನೀವು ಹಂಚಿಕೊಂಡರೂ ನಮಗೇನೂ ಬೇಜಾರಿಲ್ಲ. ಆದರೆ ಹತ್ತೂವರೆ ಗಂಟೆಗೆ ಗೃಹಸಚಿವರು ತಮ್ಮ ರಿಪ್ಲೈಯನ್ನು ಪ್ರಾರಂಭ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಆಗಬಹುದು.

ಶ್ರೀ ಎಸ್.ಎಂ.ಕೃಷ್ಣ : ಈ ಒಪ್ಪಂದದ ಪ್ರಕಾರ ಮಾನ್ಯ ಉಪಾಧ್ಯಕ್ಷರೇ, ತಾವು ಸಭೆಯನ್ನು ಮುಂದೂಡಬಹುದು.

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆವರೆಗೆ ಮಂದೂಡುತ್ತಿದ್ದೇನೆ.

(ಸದನವು ಸಂಜೆ 7 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 31 ನೇ ಡಿಸೆಂಬರ್ ಮಾಹೆ 2002ರ ಮಂಗಳವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು)

+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)